ಸಂಪುಟ 23 ಸಂಚಿಕೆ 11
ಮಾರ್ಚ್ 18, 2001 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ ಪೆಕ್ಷಾರಂಗ



ಬಜೆಟ್ ರಾಜಕೀಯ

ಉಳ್ಳವರ ಮಡಿಲಿಗೆ ಸಾರ್ವಜನಿಕ ಉದ್ದಿಮೆಗಳು



ನಾಗರೀಕತೆ ನಾಶ ಮಾಡಿದ ತಾಲೀಬಾನ್




ಮರೀಚಿಕೆಯಾದ ಮಹಿಳಾ ಸಬಲೀಕರಣ

ಹಿಂದಿನ ಸಂಚಿಕೆಯಲ್ಲಿ ಕಾಂಗ್ರೆಸ್ಸಿನ ಹೀನವರ್ತನೆ, ಚುನಾವಣೆಯಲ್ಲಿ ಸಿಪಿಐ(ಎಂ) ದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದು, ಬಾಂಗ್ಲಾ ಕಾಂಗ್ರೆಸ್ಸಿನ ಅಜಯ ಮುಖರ್ಜಿ ಸರ್ಕಾರದ ರಚನೆ ಹಾಗೂ ಪತನದ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ಮತ್ತೆ ರಾಷ್ಟ್ರಪತಿ ಆಡಳಿತ, ಶಂಕರ ಸಿದ್ಧಾರ್ಥ ರಾಯರ ರಾಜಕೀಯ ವಂಚನೆ, ಸಮಯಸಾಧಕತನ, ಕಾಳಿಪುರದ ಹತ್ಯಾಕಾಂಡ, ಗೂಂಡಾ-ಪೋಲೀಸ್ ದುರಾಚಾರ, 600 ಕ್ಕೂ ಹೆಚ್ಚು ಸಿಪಿಐ(ಎಂ) ಕಾರ್ಯಕರ್ತರ ಕಗ್ಗೊಲೆ ಬಗ್ಗೆ ಓದಿ....

ದಬ್ಬಾಳಿಕೆ-ರಿಗ್ಗಿಂಗ್‌ನ ಪರಾಕಾಷ್ಟೆ

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 60

ಅಧಿಕಾರಕ್ಕಾಗಿ ತುಡಿತುಡಿಸುತ್ತಿದ್ದ ಕಾಂಗ್ರೆಸ್ ಅಜಯ ಮುಖರ್ಜಿಯವರ ಕಾಲೆಳೆಯಿತು. ಸರಕಾರ ಅ...ನತಕ್ಕೆ ಇಳಿಯಿತು. ಶಾಸಕರನ್ನು 'ಖರೀದಿಸಿ' ಬಹುಮತ ಸಾಧಿಸುವ ಆಳುವವರ ಯತ್ನ ಫಲಿಸಲಿಲ್ಲ. ಸದನದಲ್ಲಿ ಸೋತು ಸರಕಾರ ರಚಿಸಲು ಪಕ್ಷಕ್ಕೆ ಆಹ್ವಾನ ನೀಡಲಾಗುವುದೆಂಬ ಭೀತಿಯಿಂದ ಸರಕಾರ ವಿಧಾನಸಭೆಯ ವಿಸರ್ಜನೆಗೆ ಶಿಫಾರಸು ಮಾಡಿತು. ಯಾವುದೇ ಪ್ರಜಾಸತ್ತಾತ್ಮಕ ನಿಯಮಕ್ಕೆ ಕಿಂಚಿತ್ತೂ ಗೌರವ ನೀಡದೆ ರಾಜ್ಯಪಾಲರು 1971ರ ಜೂನ್ 25ರ ಮಧ್ಯರಾತ್ರಿ ಪಶ್ಚಿಮ ಬಂಗಾಳವನ್ನು ಮತ್ತೆ ರಾಷ್ಟ್ರಪತಿ ಆಡಳಿತಕ್ಕೆ ತಳ್ಳಿದರು.

ಸಮ್ಮಿಶ್ರ ಸರಕಾರದ ಆಡಳಿತ ಅವಧಿಯಲ್ಲಿ ಸಿಪಿಐ(ಎಂ) 101 ಸಂಗಾತಿಗಳನ್ನು ಕಳೆದುಕೊಂಡಿತು. ವರ್ಧಮಾನ ಜಿಲ್ಲೆಯ ಶಿವಶಂಕರ ಚೌಧರಿ ಮತ್ತು ಶಿಕ್ಷಕ ಸಮುದಾಯದ ಪ್ರಮುಖ ನಾಯಕ ಸಂತೋಷ ಭಟ್ಟಾಚಾರ್ಯ ಅವರಲ್ಲಿ ಪ್ರಮುಖರು.

ಪಿತೂರಿಗಾರ ಎಸ್.ಎಸ್.ರಾಯ್

ಇಂದಿರಾಗಾಂಧಿ ಕೇಂದ್ರದ ಶಿಕ್ಷಣ ಮಂತ್ರಿ ಸಿದ್ಧಾರ್ಥ ಶಂಕರ ರಾಯ್‌ಗೆ ಪಶ್ಚಿಮಬಂಗಾಳದ ಹೆಚ್ಚುವರಿ ಹೊಣೆಯನ್ನು ಖಾತೆರಹಿತವಾಗಿ ನೀಡಿದರು. ಆ ವೇಳೆಗಾಗಲೇ ಈ ರಾಯ್ ರಾಜಕೀಯ ವಂಚನೆ, ಸಮಯಸಾಧಕತನದ ತಂತ್ರವನ್ನು ಕರಗತ ಮಾಡಿಕೊಂಡಿದ್ದರು. ಅಲ್ಲದೆ ಅಧಿಕಾರದಾಹದ ಕಾಂಗ್ರೆಸ್ಸಿನ ಸಹಜ ಗುಣವನ್ನು ಮೈಗೂಡಿಸಿಕೊಂಡಿದ್ದರು. ಬಹುಶಃ ಈ ಕಾರಣಕ್ಕಾಗಿಯೇ ಇಂದಿರಾಗಾಂಧಿ ರಾಯ್‌ರನ್ನು ಈ ಕೆಲಸಕ್ಕೆ ಆಯ್ಕೆ ಮಾಡಿದ್ದರು. ತನ್ನ ಬಾಸ್ ಅನ್ನು ತೃಪ್ತಿಪಡಿಸಲಿಕ್ಕಾಗಿ ರಾಯ್ ಪಶ್ಚಿಮಬಂಗಾಳದ ರಾಜಕೀಯ ಇತಿಹಾಸದಲ್ಲಿಯೇ ಅತ್ಯಂತ ಕರಾಳವಾದ ಕಾಲ ಘಟ್ಟವೊಂದನ್ನು ಆರಂಭಿಸಿದರು.

ರಾಜ್ಯದಲ್ಲಿನ ಹಿಂಸೆಯ ಯುಗಕ್ಕೆ ಕೊನೆ ಹೇಳಲು ಪ್ರಮಾಣಿಕರಾಗಿ ದುಡಿಯುವ ಸೋಗನ್ನು ಹಾಕಿದ ರಾಯ್, ಸಮಸ್ಯೆಯ ಪರಿಹಾರಕ್ಕೆಂದು ಸರ್ವಪಕ್ಷ ಸಭೆಯೊಂದನ್ನು ಕರೆದರು. ತನ್ನ ನಿಜವಾದ 'ಕಾರ್ಯಭಾರ' ಏನೆಂಬುದು ಆತನಿಗೆ ಗೊತ್ತೇ ಇತ್ತು. ಹಿಂಬಾಗಿಲಿನಿಂದ ಕಾಂಗ್ರೆಸನ್ನು ಅಧಿಕಾರಕ್ಕೆ ಏರಿಸುವುದೇ ಆ ಕಾರ್ಯಭಾರ. ಏನಿದ್ದರೂ ಸರ್ವಪಕ್ಷ ಸಭೆಯಲ್ಲಿ ಭಾಗವಹಿಸಲು ನಾವು ನಿರ್ಧರಿಸಿದೆವು.

ಹರೇಕೃಷ್ಣ ಕೋನಾರ ಮತ್ತು ನಾನು ಸಿಪಿಐ(ಎಂ) ಪ್ರತಿನಿಧಿಗಳಾಗಿ ಸಭೆಯಲ್ಲಿ ಪಾಲ್ಗೊಂಡೆವು.

ಯಾವರೀತಿಯಲ್ಲಿ ಹಿಂಸಾಚಾರ ನಡೆಸಲಾಗುತ್ತಿದೆ. ನಮ್ಮನ್ನು ನಿರ್ನಾಮ ಮಾಡಲು ಏನೆಲ್ಲಾ ತಂತ್ರ, ಕುತಂತ್ರಗಳು ದಾಳಿಗಳು ನಡೆದಿವೆ ಎಂದು ಸಭೆಗೆ ಸಲ್ಲಿಸಿದ ದೀರ್ಘ ಮನವಿ ಪತ್ರವೊಂದರಲ್ಲಿ ನಾವು ವಿವರಿಸಿದೆವು.

ಪೊಲೀಸ್ ರಾಜ್ಯ ಮುಂದುವರಿದರೆ ಹಾಗೂ ಜನರ ಹಕ್ಕುಗಳನ್ನು ಕಸಿದುಕೊಳ್ಳುವುದು ಮುಂದುವರಿದರೆ ಏನನ್ನೂ ಸಾಧಿಸಲು ಆಗುವುದಿಲ್ಲ ಎಂಬುದು ನಮ್ಮ ದೃಢವಾದ ನಂಬಿಕೆ. ಬೇರೆ ಯಾವುದಕ್ಕೂ ಅಲ್ಲವಾದರೂ ಕಾಂಗ್ರೆಸ್ ಪಕ್ಷ ತನ್ನದೇ ಅಸ್ತಿತ್ವಕ್ಕಾಗಿಯಾದರೂ ತನ್ನ ರಾಜಕೀಯವನ್ನು ಬದಲಾಯಿಸಿಕೊಳ್ಳಬೇಕು ಎಂದು ನಾವು ಹೇಳಿದೆವು.

ಸರಕಾರಿ ನೌಕರರ ಮೇಲೆ ಆಕ್ರಮಣ

ಸರಕಾರಿ ನೌಕರರಿಗೆ ಕರಾಳ ದಿನಗಳು ಎದುರಾಗಿದ್ದವು. ಹೊಸದಾಗಿ ನೇಮಿಸಲಾದ ರಾಜ್ಯಪಾಲ ಎ.ಎಲ್.ಡಯಾಸ್ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಸೇವಕನಂತೆ ವರ್ತಿಸಿ ಸರಕಾರಿ ನೌಕರರ ಬೆಳೆಯುತ್ತಿರುವ ಪ್ರಜಾಸತ್ತಾತ್ಮಕ ಬೆಳವಣಿಗೆಗಳ ಮೇಲೆ ದಾಳಿ ಆರಂಭಿಸಿದರು. ಅರವಿಂದ ಘೋಷ್, ಅಜಯ್ ಮುಖರ್ಜಿ, ಸುಕೋಮಲ ಸೇನ್, ಭವತೋಷ, ನಕೀನ್ ಗುಪ್ತ, ರಾಜೇಂದ್ರ ಭಟ್ಟಾಚಾರ್ಯ ಮತ್ತು ಚುನಿಲಾಲ್ ದಾಸ್ ಗುಪ್ತಾ ಸಹಿತ ಸರಕಾರಿ ನೌಕರರ ಆಂದೋಲನದ 13 ಉನ್ನತ ಧುರೀಣರನ್ನು ಯಾವುದೇ ಸಕಾರಣ ನೀಡದೆ ಸಂವಿಧಾನದ 311(2) ಸೆಕ್ಷನ್ ಬಳಸಿ 1971 ಸೆಪ್ಟೆಂಬರ್‌ನಲ್ಲಿ ಸೇವೆಯಿಂದ ವಜಾ ಮಾಡಲಾಯಿತು.

ವಜಾ ಆದ ನೌಕರರಿಗೆ ನೀಡಲಾದ ವಜಾ ಆದೇಶ ಪತ್ರದಲ್ಲಿ ರಾಜ್ಯಪಾಲರು ಬಳಸಿದ ಭಾಷೆ ಅವರ ಸರ್ವಾಧಿಕಾರಿ ಪ್ರವೃತ್ತಿಯ ದ್ಯೋತಕವಾಗಿತ್ತು.

ಸರಕಾರ ತನ್ನದೇ ನೌಕರರ ವಿರುದ್ಧ ಸಮರ ಸಾರಿದೆ ಎಂದು ನಾನು ಹೇಳಿದೆ. ದೆಹಲಿಯ ಅಧಿಕಾರ ಕೇಂದ್ರದ ಸೂಚನೆಯ ಮೇರೆಗೆ ರಾಜ್ಯಪಾಲರು ಕಾನೂನುಬದ್ಧ ಟ್ರೇಡ್ ಯೂನಿಯನ್ ಹಾಗೂ ಇತರ ಪ್ರಜಾಸತ್ತಾತ್ಮಕ ಚಳುವಳಿಗಳನ್ನು ಬಗ್ಗುಬಡಿಯಲು ಅದೇ ಫ್ಯಾಸಿಸ್ಟ್ ತಂತ್ರಗಳನ್ನು ಬಳಸತೊಡಗಿದರು. ಇಂಥ ತಂತ್ರಗಳ ವಿರುದ್ಧ ನಿರಂತರ ಹಾಗೂ ಪ್ರಬಲವಾದ ಚಳುವಳಿಯನ್ನು ನಡೆಸುವುದು ಅಗತ್ಯ ಎಂದು ನಾನು ಪ್ರತಿಪಾದಿಸಿದೆ.

ರಾಜ್ಯಾದ್ಯಂತ ಸರಕಾರಿ ನೌಕರರು ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ಕೇಂದ್ರ ಸ್ಥಾನವಾದ ರೈಟರ್ಸ್ ಬಿಲ್ಡಿಂಗ್‌ನಿಂದ ಹಿಡಿದು ಬ್ಲಾಕ್ ಮಟ್ಟದವರೆಗೆ ಅನಿರ್ದಿಷ್ಟ ಅವಧಿವರೆಗೆ ಮುಷ್ಕರ ಆರಂಭಿಸಿದರು. ಅಕ್ಟೋಬರ್ 13 ರಂದು ಒಂದು ಯಶಸ್ವಿ ಸಾರ್ವತ್ರಿಕ ಮುಷ್ಕರ ನಡೆಯಿತು.

ಆದರೂ ರಾಜ್ಯಪಾಲರು ಇದರಿಂದ ಪಾಠ ಕಲಿಯಲಿಲ್ಲ. ತನ್ನ ಧೋರಣೆಯನ್ನು ಮೃದುಗೊಳಿಸುವ ಬದಲು ಅವರು ನೌಕರರ ಜೊತೆ ಇನ್ನಷ್ಟು ಕಠಿಣವಾಗಿ ವರ್ತಿಸಿದರು.

ಸಾಮೂಹಿಕ ಹತ್ಯಾಕಾಂಡ

ಈ ಸಂದರ್ಭದಲ್ಲಿ 1971ರ ಕಾಶಿಪುರ ಸಾಮೂಹಿಕ ಹತ್ಯಾಕಾಂಡವನ್ನು ಪ್ರಸ್ತಾವಿಸಬೇಕು. ನಕ್ಸಲೀಯರು ಒಬ್ಬ ಕಾಂಗ್ರೆಸ್ ಕಾರ್ಯಕರ್ತನನ್ನು ಕೊಂದು ಹಾಕಿದ್ದೇ ಕಾರಣವಾಗಿ ಈ ಹತ್ಯಾಕಾಂಡ ನಡೆಯಿತು. ಹಿಂದೆಂದೂ ಕಂಡರಿಯದ ಸೇಡು ತೀರಿಸಿಕೊಳ್ಳುವ ಕ್ರಮವಾಗಿ ಕಾಂಗ್ರೆಸ್ಸಿಗರು ಪೊಲೀಸರ ಜತೆ ಸೇರಿಕೊಂಡು ಕಾಳಿಪುರ ಪ್ರದೇಶದ ಮೇಲೆ ಪೂರ್ಣ 29 ಗಂಟೆ ಕಾಲ ಆಕ್ರಮಣ ನಡೆಸಿದರು. ನಲ್ವತ್ತು ಜನರು ಸತ್ತರು. ತನ್ನ ಅಧಿಕಾರವನ್ನು ಹಿಡಿದಿಟ್ಟುಕೊಳ್ಳಲು ಕಾಂಗ್ರೆಸ್ ಮತ್ತು ಅದರ ಸರಕಾರ ಯಾವ ಮಟ್ಟಕ್ಕೆ ಹೋಗುತ್ತದೆ ಎನ್ನುವುದಕ್ಕೆ ಇದೊಂದು ಉದಾಹರಣೆ.

ದಬ್ಬಾಳಿಕೆ-ರಿಗ್ಗಿಂಗ್‌ನ ಪರಾಕಾಷ್ಠೆ

ಪಶ್ಚಿಮ ಬಂಗಾಳದಲ್ಲಿ ಚುನಾವಣೆ ನಡೆಯಬೇಕೆಂಬ ಬೇಡಿಕೆಗೆ ಹೆಚ್ಚೆಚ್ಚು ಬಲ ಬರುತ್ತಿತ್ತು. ಪಕ್ಷದ ಪಾಲಿಟ್‌ಬ್ಯೂರೊ ಪರವಾಗಿ ಕಾಮ್ರೇಡ್ ಹರಿಕಿಷನ್ ಸಿಂಗ್ ಸುರ್ಜಿತ್ ಮತ್ತು ನಾನು ಇಂದಿರಾಗಾಂಧಿಯನ್ನು ಭೇಟಿಯಾಗಿ 1972 ಫೆಬ್ರವರಿಯೊಳಗೆ ರಾಜ್ಯದಲ್ಲಿ ಚುನಾವಣೆ ನಡೆಸುವಂತೆ ಕೋರಿದೆವು. ಆದರೆ ಅವರು ನಮ್ಮ ಕೇಳಿಕೆಗೆ ಕಿವಿಗೊಡಲೇ ಇಲ್ಲ. ಬಂಗಾಳದಲ್ಲಿನ ಭಯಾನಕ ಪರಿಸ್ಥಿತಿ ಕುರಿತ ನಮ್ಮ ಆರೋಪಗಳಿಗೆ ಆಕೆ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಲಿಲ್ಲ.

ಆದರೆ ಚುನಾವಣೆ ಘೋಷಿಸುವುದು ಆಕೆಗೆ ಅನಿವಾರ್ಯವೇ ಆಯಿತು. 1972 ಮಾರ್ಚ್ 11 ರ ದಿನವನ್ನು ನಿಗದಿಪಡಿಸಲಾಯಿತು. ಜನವರಿ 31 ರಂದು ನಾವು ಮತ್ತೆ ಪ್ರಧಾನಿಯನ್ನು ಭೇಟಿಯಾದೆವು. ನಿಯೋಗದಲ್ಲಿ ಎಡರಂಗದ ಪಕ್ಷಗಳ ಪ್ರತಿನಿಧಿಗಳಿದ್ದರು.

ಬಂಗಾಳದಲ್ಲಿನ ದೌರ್ಜನ್ಯಗಳನ್ನು ಎಳೆಎಳೆಯಾಗಿ ಚಿತ್ರಿಸುವ ಒಂದು ಮನವಿ ಪತ್ರವನ್ನು ಪ್ರಧಾನಿಗೆ ಸಲ್ಲಿಸಿದೆವು. ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆ ನಡೆಯುವುದು ಅಗತ್ಯ ಎಂದು ಪ್ರತಿಪಾದಿಸಿದೆವು. ತನ್ನ ಪಕ್ಷದ ವಿರುದ್ಧದ ಆರೋಪಗಳನ್ನು ಆಕೆ ಸಾರಾಸಗಟು ತಳ್ಳಿ ಹಾಕಿದರು. ನಮ್ಮ ಆರೋಪಗಳ ಸತ್ಯಾಸತ್ಯತೆ ಪರಿಶೀಲಿಸಿಯೇ ಇಂಥ ಆರೋಪಗಳನ್ನು ನಿಮ್ಮಿಂದ ನಾನು ನಿರೀಕ್ಷಿಸಿದ್ದೆ ಎಂದೂ ಹೇಳಿದರು! ಆಗ ನಾನು ಅವರಿಗೆ ಹೀಗೆ ಸ್ಪಷ್ಟಪಡಿಸಿದೆ:"ಒಂದು ದೇಶದ ಪ್ರಧಾನಮಂತ್ರಿ ಬಳಿಗೆ ನಾವು ನಿಯೋಗದಲ್ಲಿ ಬಂದಿದ್ದೇವೆಯೇ ಹೊರತು ಒಂದು ರಾಜಕೀಯ ಪಕ್ಷದ ಮುಖಂಡರ ಬಳಿಗೆ ಅಲ್ಲ' ಎಂದು ನಾನಂದೆ. ಆಗ ವಾಸ್ತವವಾಗಿ ಎಡಪಂಥೀಯರೆ ರಾಜ್ಯದಲ್ಲಿ ತೊಂದರೆ ಸೃಷ್ಟಿಸುತ್ತಿದ್ದಾರೆ ಎಂದು ಇಂದಿರಾ ಪ್ರತ್ಯಾರೋಪ ಮಾಡಿದರು. ನಿಮ್ಮ ಆರೋಪಗಳು ಸರಿಯೆಂದು ಸಾಬೀತುಪಡಿಸಲು ಪುರಾವೆ ಮಂಡಿಸಿ ಎಂದು ನಾವು ಕೇಳಿದಾಗ ಇಂದಿರಾರ ಬಾಯಿ ಮುಚ್ಚಿತು.

ತಾನು ಎಂಥ ತಂತ್ರ-ಕುತಂತ್ರ ರೂಪಿಸಿದರೂ ಪ.ಬಂಗಾಳ ಚುನಾವಣೆಯಲ್ಲಿ ತನಗೆ ಏನೂ ಲಾಭ ಆಗದು ಎಂಬುದು ಬೇಹುಗಾರಿಕೆ ವರದಿಗಳಿಂದ ಕಾಂಗ್ರೆಸ್‌ಗೆ ಮನದಟ್ಟಾಯಿತು. ಆದರೆ ಇಂಥ ಸ್ಥಿತಿಯನ್ನು ಒಪ್ಪಲು ಅದರ ನಾಯಕರು ಸಿದ್ಧರಿರಲಿಲ್ಲ. ಹೀಗಾಗಿ ಜನರ ನ್ಯಾಯಸಮ್ಮತ ಬೇಡಿಕೆಯನ್ನು ಸೋಲಿಸಲು ಅತ್ಯಂತ ಹೀನವಾದ ಒಂದು ಪಿತೂರಿ ಜನ್ಮತಾಳಿತು.

ಈ ಪಿತೂರಿಯ ವಾಸನೆ ನಮ್ಮ ಮೂಗಿಗೆ ಬಡಿಯಿತು. ಸಿಪಿಐ(ಎಂ) ಮತ್ತದರ ಮಿತ್ರಪಕ್ಷಗಳ ಬಲಿಷ್ಠಕೋಟೆ ಎಂದು ಪರಿಗಣಿತವಾದ 34 ಕ್ಷೇತ್ರಗಳಲ್ಲಿ ನಾವು ಗಮನ ಕೇಂದ್ರೀಕರಿಸಿದೆವು. ತಾಲಿಗಂಜ್ ಕ್ಷೇತ್ರದ ನಮ್ಮ ಅಭ್ಯರ್ಥಿ ಪ್ರಶಾಂತ ಸೂರ್‌ರನ್ನು ಕೊಲ್ಲಲು ಯತ್ನಿಸಲಾಯಿತು. ದುಷ್ಕರ್ಮಿಗಳಿಗೆ ಗುರಿ ತಪ್ಪಿತು. ಆದರೆ ಗುಂಡು ತಗಲಿ ನಮ್ಮ ಬೆಂಬಲಿಗ ಮೃತಪಟ್ಟರು: ಸೋನಾರ್‌ಪುರದಲ್ಲಿ ನಮ್ಮ ಅಭ್ಯರ್ಥಿ ಗಂಗಾಧರ ನಸ್ಕರ್ ಮೇಲೆ ಕೂಡ ಹಲ್ಲೆ ನಡೆಯಿತು. ಅವರಿಗೆ ಗಾಯಗಳಾದವು

ಸಿಐಟಿಯು ರಾಜ್ಯ ಕಾರ್ಯದರ್ಶಿ ಹಾಗೂ ಸಂಸತ್ ಸದಸ್ಯ ಮಹಮದ್ ಇಸ್ಮಾಯಿಲ್ ಮೇಲೆಬಾಂಬ್ ದಾಳಿ ನಡೆಯಿತು. ಇನ್ನೊಬ್ಬ ಕಾರ್ಮಿಕ ಮುಖಂಡ ಹರಿದಾಸ ಮಲಕರ್ ಅಪಹರಣವಾಯಿತು. ಅದೃಷ್ಟವಶಾತ್ ಅವರನ್ನು ರಕ್ಷಿಸಲಾಯಿತು. ಬಿನಯ್ ಕೋನಾರ್ ಮತ್ತು ದಿಲೀಪ್ ದುಬೆ ಜೈಲಿನಲ್ಲೇ ಇದ್ದರು. ಚುನಾವಣೆ ಚಟುವಟಿಕೆಗಳಲ್ಲಿ ಭಾಗವಹಿಸಲು ಅವರಿಗೆ ಆಗಲಿಲ್ಲ.

ನನ್ನ ಕ್ಷೇತ್ರ ಬಾರಾನಗರದಲ್ಲಿ ಕೂಡ ಇದೆ ಕತೆ. ಪಕ್ಷದ 34 ಕಾರ್ಯಕರ್ತರ ಹತ್ಯೆಯಾಯಿತು. 150 ಕ್ಕೂ ಹೆಚ್ಚು ಮಂದಿ ಗಾಯಗೊಂಡರು. ಅನೇಕ ಜನರು ಜೈಲು ಸೇರಿದರು. ಕನಿಷ್ಟ 1000 ಕುಟುಂಬಗಳು ನಿರಾಶ್ರಿತವಾದವು. ಕ್ಷೇತ್ರದ 1.14 ಲಕ್ಷ ಮತದಾರರ ಪೈಕಿ ಸರಿಸುಮಾರು ಅರ್ಧದಷ್ಟು ಜನರನ್ನು ತಲುಪಲು ನಮಗೆ ಸಾಧ್ಯವಾಗಲೇ ಇಲ್ಲ.

ಗೂಂಡಾ-ಪೋಲೀಸ್ ದುರಾಚಾರ

ಚುನಾವಣೆಗೆ ಕೇವಲ ಆರು ದಿನಗಳು ಇರುವಾಗ ಕಾಂಗ್ರೆಸ್ ಗೂಂಡಾಗಳು ಮತ್ತು ಪೋಲೀಸರು ಒಟ್ಟು ಸೇರಿ ಸಿಪಿಐ(ಎಂ)ನ 12 ಬೆಂಬಲಿಗರನ್ನು ಮನೆಗಳಿಂದ ಹೊರಗೆಳೆದು ಕೊಂದು ಹಾಕಿದರು. ಅವರಲ್ಲಿ ಏಳು ಜನರ ಶವಗಳನ್ನು ಭಗೋಜ್ ಕಾಲುವೆಯಲ್ಲಿ ನಿಗೂಢವಾಗಿ ಹೂತು ಹಾಕಲಾಯಿತು. 50 ಜನರು ನಾಪತ್ತೆಯಾದರು. ಅನಾರೋಗ್ಯದಿಂದ ನರಳುತ್ತಿದ್ದ ಮಹಿಳೆಯರಿಗೆ ಕೂಡಾ ದುಷ್ಕರ್ಮಿಗಳು ಹಿಂಸೆನೀಡಿದರು.

ಚುನಾವಣೆ ಅಧಿಕಾರಿಗೂ ಧಮಕಿ

ಪದೇ ಪದೇ ಮನವಿ ಮಾಡಿಕೊಂಡ ನಂತರ ಅಂದಿನ ಮುಖ್ಯ ಚುನಾವಣೆ ಆಯುಕ್ತ ಸೇನ್ ಬರ್ಮಾ ಕೆಲವು ಗಲಭೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಲು ಮುಂದಾದರು. ಇಂಥ ಒಂದು ಭೇಟಿಯ ವೇಳೆ ಶಸ್ತ್ರಾಸ್ತ್ರಗಳನ್ನು ಹಿಡಿದು ಸಜ್ಜಾಗಿದ್ದ ಕಾಂಗ್ರೆಸ್ಸಿಗರ ಒಂದು ಗುಂಪು ಸೇನರ ಬೆನ್ನ ಹಿಂದೆ ಬಿದ್ದಿತು. ಅವರು ಮುಕ್ತವಾಗಿ ಸಂಚರಿಸಿ ಪರಿಸ್ಥಿತಿಯನ್ನು ಅವಲೋಕಿಸಲು ಬಿಡಲಿಲ್ಲ. ನೀವು ವಾಪಾಸು ಹೋಗುವುದೇ ವಾಸಿ, ನಿಮಗೆ ದೈಹಿಕವಾಗಿ ಏನಾದರೂ ತೊಂದರೆ ಆದಲ್ಲಿ ನಾವು ಹೊಣೆಗಾರರಲ್ಲ ಎಂದು ಪೋಲೀಸರೇ ಸೇನ್‌ಗೆ ಹೇಳಿದರು.

ಸ್ವತಃ ಮುಖ್ಯ ಚುನಾವಣೆ ಆಯುಕ್ತರಿಗೇ ಮುಕ್ತವಾಗಿ ಸಂಚರಿಸಲು ಸಾಧ್ಯವಿಲ್ಲದ ಸನ್ನಿವೇಶವಿರುವಾಗ ಇಂಥ ಭಯಾನಕ ಪರಿಸ್ಥಿತಿಯಲ್ಲಿ ಎಡಪಕ್ಷಗಳ ಕಾರ್ಯಕರ್ತರು ಹೇಗೆ ಕೆಲಸ ಮಾಡಲು ಸಾಧ್ಯ ಎಂದು ನಮ್ಮವರು ಪ್ರಶ್ನಿಸಿದರು. ಇಂಥ ಘಟನೆಗಳು ಬೇರೆ ಕಡೆಗಳಲ್ಲೂ ನಡೆದವು. ಆದರೆ, ಸೇನ್ ಬರ್ಮಾ ಆಡಳಿತದ ಪರವಾದ ತೀರ್ಪು ನೀಡಿದರು! ಶಾಂತಿಯುತ ಮತದಾನಕ್ಕೆ ಪೂರಕ ವಾತಾವರಣ ಇದೆ ಎಂದು ಹೇಳಿದರು!! ಇದರಿಂದ ಕಾಂಗ್ರೆಸ್ಸಿಗರಿಗೆ ಪ್ರಜಾಪ್ರಭುತ್ವದ ಕತ್ತು ಹಿಸುಕುವ ಕುಕೃತ್ಯಗಳಿಗೆ ಇನ್ನಷ್ಟು ಕುಮ್ಮಕ್ಕು ಸಿಕ್ಕಿದಂತಾಯಿತು.

ದೌರ್ಜನ್ಯದ ಕ್ರೌರ್ಯತೆ ಹೆಚ್ಚಿತು. ಇದು ಮತದಾರರ ವಿರುದ್ಧದ ಸಮರವಾಗಿತ್ತು. ರಾಜ್ಯದಲ್ಲಿ ನಮ್ಮ ಪಕ್ಷದ ಕಛೇರಿಗಳನ್ನು ನೆಲಸಮಮಾಡಿ ನಮ್ಮ ಕಾರ್ಯಕರ್ತರ ಮೇಲೆ ಹಲ್ಲೆ-ದಬ್ಬಾಳಿಕೆ ನಡೆಯುತ್ತಿದ್ದರೂ ಪತ್ರಿಕೆಗಳು ಕಾಂಗ್ರೆಸ್ ಪರವಾಗಿ ಇದ್ದವು. ಪೋಲೀಸರ ಪಾತ್ರ ಭಯಾನಕವಾಗಿತ್ತು.

ಪೋಲೀಸರು ಭಯೋತ್ಪಾದಕ ಕುಕೃತ್ಯಗಳಿಗೆ ಮೂಕ ಪ್ರೇಕ್ಷಕರಾಗಿ ನಿಂತಿದ್ದು ಮಾತ್ರವೇ ಅಲ್ಲದೆ ದೌರ್ಜನ್ಯ ನಡೆಸುವಲ್ಲಿ ತಾನು ಏನೂ ಕಡಿಮೆ ಇಲ್ಲ ಎಂದು ಸಮಾಜವಿರೋಧಿ ಶಕ್ತಿಗಳೊಂದಿಗೆ ಸ್ಪರ್ಧೆಗೆ ಇಳಿದರು.

ರಾಜ್ಯಪಾಲರಿಗೆ, ಪ್ರಧಾನಿಗೆ ದೌರ್ಜನ್ಯದ ವಿಷಯವನ್ನು ತಿಳಿಸಿದರೂ ಏನೂ ಪ್ರಯೋಜನ ಆಗಲಿಲ್ಲ. ಕಾಂಗ್ರೆಸ್ ಗೂಂಡಾಗಳು ಮನೆ ಮನೆಗೆ ನುಗ್ಗಿ ಎಡಪಕ್ಷಗಳಿಗೆ ಓಟು ಹಾಕಬೇಡಿ ಎಂದು ಬೆದರಿಸಿದರು. ಈ ಚುನಾವಣೆಯ ಹಿನ್ನೆಲೆಯಲ್ಲಿ 600 ಕ್ಕೂ ಹೆಚ್ಚು ಸಿಪಿಐ(ಎಂ) ಬೆಂಬಲಿಗರ ಕೊಲೆಯಾಯಿತು. ಮನೆಗಳನ್ನು ಸುಡಲಾಯಿತು. ಆದರೂ 'ಏನೂ ನಡೆದಿಲ್ಲ' ಎನ್ನುವ ಅಭಿಪ್ರಾಯ ಮೂಡಿಸಲು ಯತ್ನಿಸಲಾಯಿತು.

(ಮುಂದುವರಿಯುವುದು)

ಕರ್ನಾಟಕ ಈ ವಾರ ಒಂದು ನೋಟ

ರೈತರ ಆತ್ಮಹತ್ಯೆಗಳು: ಮುಖ್ಯಮಂತ್ರಿ ಕೃಷ್ಣರ ಅಮಾನವೀಯ ಮಾತುಗಳು

ಈ ವಾರದ ಆರಂಭ ಮತ್ತು ಅಂತ್ಯ ಮತ್ತೆ ರೈತರ ಆತ್ಮಹತ್ಯೆಗಳನ್ನು ಕಂಡಿದೆ. ರಾಜ್ಯದಲ್ಲಿ ರೈತರ ಆತ್ಮಹತ್ಯೆಗಳ ಸರಣಿ ಬೆಳೆಯುತ್ತಲೇ ಇದೆ. ಈ ಸಾಲದ ಬಾಧೆ ತಾಳಲಾರದೇ ಧಾರವಾಡದ ತಲವಾಯಿಯ ಶಿವಪೂಜೆಪ್ಪ ಮಹದೇವಪ್ಪ ಪೂಜಾರ್ ಮಾರ್ಚ್ 5 ರಂದು ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲೂಕಿನ ಕಮ್ಮನಹಳ್ಳಿಯ ನಾಗರಪ್ಪ ಕಲವೀರಪ್ಪ ಮಿಟ್ಟಿಮನಿಯವರು ಮಾರ್ಚ್ 9 ರಂದು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸರ್ಕಾರ ಬೆಳೆದ ಮೆಕ್ಕೆ ಜೋಳಕ್ಕೆ ಬೆಲೆಯಿಲ್ಲದೇ, ಆದ ಸಾಲ ತೀರಿಸಲೂ ಆಗದೇ ಮರ್ಯಾದೆ ಹೋಗುವ ಭಯದಿಂದ ಸ್ವಾಭಿಮಾನಿ ರೈತರು ಆತ್ಮಹತ್ಯೆ ಮೊರೆ ಹೋಗಿದ್ದಾರೆ. ಈ ಸಾವುಗಳು ಆಳುವವರ ಕಣ್ಣು ತೆರೆಸುತ್ತಿಲ್ಲ. ಮೆಕ್ಕೆಜೋಳ ಮುಂತಾದ ಫಸಲಿಗೆ ಎಲ್ಲಾ ವ್ಯವಸ್ಥೆ ಮಾಡಲಾಗಿದೆಯೆಂಬ ಸುಳ್ಳುಗಳನ್ನೇ ವಿಧಾನಸೌಧದಲ್ಲಿ ಸರ್ಕಾರ ಮುಂದುವರಿಸಿದೆ. ಅತ್ತ ಕೇಂದ್ರ ಸರ್ಕಾರವೂ ಏಪ್ರಿಲ್ ಒಂದರಿಂದ ವಿದೇಶದ ವಸ್ತುಗಳು ಆಮದಿಗೆ ಮುಕ್ತ ಅವಕಾಶ ಕಲ್ಪಿಸಲಿದೆ. ಹಾಗಾದರೆ ಮುಂದಿನ ಸ್ಥಿತಿ ಎಂತಹ ಧಾರುಣವಾಗಬಹುದು.

ಆತ್ಮಹತ್ಯೆ ಮಾಡಿಕೊಂಡ ರೈತರಿಗೆ ನೀಡಲಾಗುವುದೆಂಬ ಪರಿಹಾರವೂ ಸರಿಯಾಗಿ ಸಿಗುತ್ತಿಲ್ಲ. ಈ ಬಗ್ಗೆ ವಿಧಾನಸಭೆಯಲ್ಲಿ ಪ್ರಸ್ತಾವನೆಯಾದಾಗ ಮುಖ್ಯಮಂತ್ರಿ ಕೃಷ್ಣರ ಉತ್ತರ ದಂಗು ಬಡಿಸುವಂತಿದೆ. ಪರಿಹಾರ ನೀಡುತ್ತಲೇ ಹೋದರೆ ಆತ್ಮಹತ್ಯೆ ಹೆಚ್ಚಾಗುತ್ತದೆ ಎಂದಿರುವ ಮುಖ್ಯಮಂತ್ರಿಗಳು ಪಂಜಾಬಿನಲ್ಲಿ ಪರಿಹಾರ ನೀಡುತ್ತಿಲ್ಲವೆಂದು ಪ್ರಸ್ತಾಪಿಸಿ, ಇಲ್ಲಿಯೂ ನಿಲ್ಲಿಸ ಬೇಕಾಗಬಹುದೆಂಬ ಸೂಚನೆ ಇಟ್ಟಿದ್ದಾರೆ. ಮಾತ್ರವಲ್ಲ ಈ ಸಾವುಗಳ ಖಚಿತಪಡಿಸಿಕೊಳ್ಳಬೇಕೆಂದಿದ್ದಾರೆ. ಕೃಷಿಯನ್ನು, ರೈತರ ಕೂಲಿಕಾರರನ್ನು ಉಳಿಸಿಕೊಳ್ಳಲು ಆಗದೇ, ವಿಶ್ವಬ್ಯಾಂಕ್, ವಾಣಿಜ್ಯಸಂಸ್ಥೆಗಳಿಗೆ ಗುಲಾಮರಾಗಿ ಜನತೆಯನ್ನು ಸಾವಿಗೆ ದೂಡಿ ದ್ರೋಹ ಬಗೆಯುತ್ತಿರುವ ಇವರಿಗೆ ಎಳ್ಳಷ್ಟು ಕಾಳಜಿಯಿಲ್ಲ, ಕಡು ತಿರಸ್ಕಾರ ಎದ್ದು ಕಾಣತೊಡಗಿದೆ. ನಾಚಿಕೆಯಿಲ್ಲದೇ ಇದನ್ನು ಸಮರ್ಥಿಸಿಕೊಳ್ಳುವ ಧೈರ್ಯವನ್ನು ತೋರಿಸುತ್ತಿರುವುದು ಅಪಾಯದ ಸೂಚನೆ. ಇದು ಖಂಡನೀಯ. ಜನರ ಶವಗಳ ಮೇಲೆ ಅಧಿಕಾರ ಅನುಭವಿಸುವ ಆಳರಸರಿಗೆ ಬುದ್ಧಿ ಕಲಿಸಬೇಕಾಗಿದೆ.

ಕರ್ನಾಟಕಕ್ಕೆ ನ್ಯಾಯ ಕೊಡಿಸಲು ಹೆಗಡೆ ವರಸೆ:

ವಾಜಪೇಯಿ ಸಂಪುಟದಲ್ಲಿ ಸ್ಥಾನ ಉಳಿಸಿಕೊಳ್ಳಲು ಏನೆಲ್ಲಾ ಸರ್ಕಸ್ ಮಾಡಿದರೂ ಕೊನೆಗೂ ಕಿಕ್ ಅನುಭವಿಸಿ ತವರೂರಿಗೆ ವಾಪಸಾಗಿ ಮೂಲೆ ಸೇರಿದ್ದ ಮುತ್ಸದ್ದಿ ಹೆಗಡೆಯವರು ಈಗ ವಾಜಪೇಯಿಯವರತ್ತ ನಿಯೋಗದ ನಾಯಕತ್ವ ವಹಿಸಿ ತೆರಳಿದ್ದಾರೆ ಎಂಬುದೇ ಒಂದು ಚೇತೋಹಾರಿ ಸುದ್ದಿ. ಈಸಾರಿಯ ರೈಲ್ವೇ ಬಜೆಟ್ ಕರ್ನಾಟಕಕ್ಕೆ ನ್ಯಾಯ ತಂದಿಲ್ಲವೆಂಬುದನ್ನು ವಾಜಪೇಯಿಯವರಿಗೆ ಮನಮುಟ್ಟಿಸುವರಂತೆ.

ಎಸ್.ವೈ.ಗುರುಶಾಂತ್

ಯಶವಂತಸಿನ್ಹಾರವರ ಸಾಮಾನ್ಯ ಬಜೆಟ್ ಬಗ್ಗೆ ಹೆಗಡೆಯವರಿಗಿಲ್ಲ ಚಿಂತೆ. ಅತ್ತ ಯಶವಂತ ಸಿನ್ಹಾರವರು ಬಜೆಟ್ ತಮ್ಮದೇ ಎಂದೂ, ವಿಶ್ವಬ್ಯಾಂಕ್ ಅಥವಾ ವಾಜಪೇಯಿಯವರದ್ದಲ್ಲವೆಂದು ನಂಬಿಸಲು ದಿನಕ್ಕೆರಡು ಬಾರಿ ಸ್ಪಷ್ಟನೆ ನೀಡುತ್ತಿರುವಾಗಲೇ, ರೈಲ್ವೆ ಬಜೆಟ್ ಕೇವಲ ಮಮತಾ ದೀದಿಯಷ್ಟೇ ಎಂದು ಬಿಂಬಿಸುತ್ತಿರುವುದು ಒಂದು ಕಮಲ ಧಾರಿಗಳ ಲೆಕ್ಕಾಚಾರದಂತೆಯೇ ಆಗಿದೆ. ಇವೆಲ್ಲವೂ ತಮ್ಮ ಕಣ್ಮುಂದೆ ನಡೆಯುತ್ತಿದ್ದರೂ ನಸುನಗುತ್ತಲೇ ತಮ್ಮ ನಾಟಕಗಳನ್ನು ವಾಜಪೇಯಿ ನೋಡುತ್ತಿದ್ದಾರೆ. ಅವರನ್ನು ರಕ್ಷಿಸಲು ಹೆಗಡೆಯಂತಹವರೂ ಈಗಲೂ ಹೆಣಗುತ್ತಿದ್ದಾರೆ. ಇಂತಹವರ ನಿಯೋಗ ದೆಹಲಿಗೆ ಹೋದರೇನು? ಅಮೆರಿಕಾಕ್ಕೂಹಾರಿದರೇನು?

ಒಂಟಿಕಾಲಲ್ಲಿ ಯಡಿಯೂರಪ್ಪನವರು: ಕಾಂಗ್ರೆಸ್‌ನಲ್ಲಿ ಕುರ್ಚಿ ಗಿಟ್ಟಿಸಲು ಶಿವಪ್ಪನವರು

ಬಿಜೆಪಿಯು ಒಳಗೆ ಬಂಡಾಯದ ಕಹಳೆಯೂದಿ ಜಗಳ ತಾರಕಕ್ಕೇರಿ, ಬಡಿದಾಡಿ ಕೊನೆಗೆ ಪಕ್ಷದಿಂದಲೇ ಉಚ್ಚಾಟಿತರಾದ ಹಿರಿಯ ನಾಯಕ ಶಿವಪ್ಪನವರು ಮತ್ತು ಬೆಂಬಲಿಗರು ಕಾಂಗ್ರೆಸ್ ಸೇರುವ ತಾಲೀಮು ಆರಂಭಗೊಂಡಿದೆ. ಬಿಜೆಪಿಯ ಮೂರು ನಾಯಕರೂ ಒಂದೊಂದು ದಿಕ್ಕು ಹಿಡಿದಿದ್ದಾರೆ. ಅಧಿಕೃತ ವಿರೋಧಪಕ್ಷದ ನಾಯಕರ ಜಗದೀಶ್ ಶೆಟ್ಟರು ಬಂಗಲೆ, ಕಾರು ಮತ್ತು ಸ್ಥಾನಕ್ಕೆ ತೃಪ್ತಿ ಪಟ್ಟು ಅಮಲೇರಿಸಿಕೊಂಡು ನಿಷ್ಕ್ರಿಯರಾಗಿದ್ದಾರೆ. ರೈತರ ನಾಯಕರೆಂದೇ ಭ್ರಮಿಸಿರುವ ಯಡಿಯೂರಪ್ಪನವರು ಒಂಟಿಕಾಲಲ್ಲಿ ಪ್ರತಿಭಟನೆ ಮಾಡಿ, ಕೇಂದ್ರ ನೀತಿಗಳಿಗೆ ಮುಸುಕೆಳೆಯಲು ಯತ್ನಿಸಿ ಅಪಹಾಸ್ಯಕ್ಕೀಡಾಗುತ್ತಿದ್ದಾರೆ. ಸೇಡಂರವರು ಶೋಕಾಸ್ ಹಿಡಿದೇ ತಿರುಗುವ, ನೋಟೀಸ್ ಹಂಚಿಯೇ ಪಕ್ಷ ಬೆಳೆಸಬಹುದೆಂಬ ಗುಂಪುಗಾರಿಕೆಯ, ಕೃಪಾಶೀರ್ವಾದದಲ್ಲಿ ಉಳಿದಿದ್ದಾರೆ. ಇನ್ನು ಅನಂತಕುಮಾರ್‌ರವರು ಬಿಡಿ ಸಂಸ್ಕೃತಿ ಉದ್ಧಾರ, ಸಂಪನ್ಮೂಲ ಸಂಗ್ರಹ ನಿರಾತಂಕ ನಡೆದಿದೆ. ಹೀಗೆಂದು ಅವರ ಪಕ್ಷದ ಶಾಸಕರೇ ಲೇವಡಿ ಮಾಡಿ ನಗೆಯಾಡುತ್ತಿದ್ದಾರೆ. ಇವರಂತಹವರೆಲ್ಲಾ ಇನ್ನೂ ಅಲ್ಲಿಂದ ಜಾಗ ಖಾಲಿ ಮಾಡುವುದೇ ಕ್ಷೇಮವೆಂದು ಬಗೆದ ಕನಿಷ್ಟ ಹತ್ತು ಶಾಸಕರ ದಂಡು ಶಿವಪ್ಪನವರಿಗೆ ಸಾಥಿ ನೀಡಲು ನಿಂತಿದ್ದಾರಂತೆ. ಈಗ ಸಚಿವ ಸ್ಥಾನ ನೀಡುವುದೇನೋ ಏನು ಎಂಬ ಬಗ್ಗೆ ಬಿರುಸಿನ ಚರ್ಚೆ ನಡೆದಿದೆಯಂತೆ.

ಕೃಷ್ಣರವರ ಬಣವೂ ಈ ಗುಂಪನ್ನು ಸೇರಿಸಿಕೊಳ್ಳಲು ಉತ್ಸುಕವಾಗಿದೆ. ಈ ಮೂಲಕ ತಾವು ಲಿಂಗಾಯಿತರ ಪರವೆಂದು ತೋರಿಸಿಕೊಳ್ಳುವುದು. ಇನ್ನೊಂದು ಕಾಂಗ್ರೆಸ್‌ನೊಳಗೆ ಉಲ್ಬಣಗೊಳ್ಳುತ್ತಿರುವ ಭಿನ್ನಮತೀಯರ ಗುಂಪುಗಾರಿಕೆಯ ಎದುರಲ್ಲಿ ತಮ್ಮ ಬಣದ ಬಲ ಹೆಚ್ಚಿಸಿಕೊಳ್ಳುವುದು ಕೃಷ್ಣರ ತಂತ್ರ. ಈ ಎಲ್ಲಾ ಸಂದರ್ಭಸಾಧಕರಿಗೆ ಸ್ಥಾನ ಹಿಡಿಯುವ, ಉಳಿಸಿಕೊಳ್ಳುವ ಹುನ್ನಾರಗಳಲ್ಲಿ ತತ್ತರಿಸುತ್ತಿರುವ ಜನರ ಬಗ್ಗೆ ಕಾಳಜಿಯಿಲ್ಲ. ○

ಸಂಬಳ, ಕೆಲಸ ಕಳೆದುಕೊಂಡ ಕಿರ್ಲೋಸ್ಕರ್ ಕೆಲಸಗಾರರು

ಉದಾರೀಕರಣ, ಖಾಸಗೀಕರಣ ಇನ್ನೂ ಎರಡನೇ ಹಂತದ ಆರಂಭದಲ್ಲಿದೆಯಂತೆ. ಆದರೆ ಖಾಸಗಿ ಕಂಪನಿಗಳ ಆಡಳಿತವರ್ಗಗಳು ಹುಚ್ಚರಂತೆ ಆಡತೊಡಗಿವೆ. ನೆಲದ ಕಾನೂನು ಕಾಲ ಕಸಕ್ಕೆ ಸಮ ಎಂಬಂತೆ ಅದಕ್ಕೊಂದು ಉದಾಹರಣೆ ಇಲ್ಲಿದೆ. ಅದಕ್ಕೆ ಸೊಪ್ಪು ಹಾಕೋಲ್ಲ ಎಂಬುದು ಕಾರ್ಮಿಕರ ದೃಢ ಉತ್ತರ

ಕಾನೂನು ಉಲ್ಲಂಘನೆ ತಮ್ಮ ಹಕ್ಕೆಂಬ ಆಡಳಿತ ಕೊನೆಗೂ ಮಣಿದ ಕಥೆ

ಕೊಪ್ಪಳದ ಹತ್ತಿರದ ಬೇವಿನಹಳ್ಳಿಯಲ್ಲಿರುವ ಕಿರ್ಲೋಸ್ಕರ್ ಫೆರಸ್ ಇಂಡಸ್ಟ್ರೀಸ್ ಲಿಮಿಟೆಡ್ ಕಾರ್ಖಾನೆಯ ಕಾರ್ಮಿಕರು ಅತ್ಯಂತ ಸಂತೋಷ ದಿಂದ ಕೆಲಸಕ್ಕೆ ಹಾಜರಾಗಲು ಕಾರ್ಖಾನೆ ಗೇಟಿಗೆ ಹೋಗುತ್ತಿದ್ದರು. ಕಾರ್ಮಿಕರ ಸಂತೋಷಕ್ಕೆ ಕಾರಣ ವಿತ್ತು. ಕಿರ್ಲೋಸ್ಕರ್ ಆಡಳಿತ ಮಂಡಳಿಯು ಆದಿನ ಎಲ್ಲಾ ಕಾರ್ಮಿಕರಿಗೆ ವಾರ್ಷಿಕ ಇಂಕ್ರಿಮೆಂಟ್ ಹಣ ಕೊಟ್ಟಿದ್ದರು. ಆದರೆ ಫ್ಯಾಕ್ಟರಿ ಗೇಟ್‌ಗೆ ಹೋದ ಕಾರ್ಮಿಕರಿಗೆ ಆಶ್ಚರ್ಯವಾಗು ವಂತೆ ಆಡಳಿತ ವರ್ಗ ಇದ್ದಕ್ಕಿದ್ದಂತೆ ಫೌಂಡ್ರಿ ವಿಭಾಗವನ್ನು ಲಾಕೌಟ್ (ಬೀಗಮುದ್ರೆ) ಮಾಡಿ ರುವುದಾಗಿ ಬೋರ್ಡ್ ಅಡ್ಡವಾಗಿ ಇಡಲಾಗಿತ್ತು. ಯಾಕೆ ಈ ಲಾಕೌಟ್ ಕಾರ್ಮಿಕರಿಗೆ ಅರ್ಥವಾಗಲಿಲ್ಲ. ಕಾರ್ಮಿಕರು ಒತ್ತಡ ಹೇರಿ ವಾರ್ಷಿಕ ಇಂಕ್ರಿಮೆಂಟ್ ಪಡೆದಿದ್ದಕಾರಣ ಫ್ಯಾಕ್ಟರಿ ಲಾಕೌಟ್ ಮಾಡಲಾಗಿದೆ ಎಂದು ತಿಳಿಸಿದ್ದರು.

ಆದರೆ ನಡೆದದ್ದೇನು?

ಕಿರ್ಲೋಸ್ಕರ್ ಆಡಳಿತ ವರ್ಗ ಕಳೆದ ಒಂದು ವರ್ಷದಿಂದ ಕಾರ್ಮಿಕರ ಸಂಬಳದಿಂದ ತಿಂಗಳಿಗೆ 1001 ರೂ. ಗಳನ್ನು ಉತ್ಪಾದನೆ ಕಡಿಮೆ ಆಗಿದೆ ಎಂದು ಕಡಿತ ಮಾಡುತ್ತಾ ಬಂದಿದ್ದಾರೆ. ಹೀಗೆ ಕಡಿಮೆ ಮಾಡಲು ಮಾಲೀಕ ವರ್ಗಕ್ಕೆ ಯಾರು ಅಧಿಕಾರ ಕೊಟ್ಟರೋ? ಎಲ್ಲಿಂದ ಅಧಿಕಾರ ಬಂತೋ? ಗೊತ್ತಿಲ್ಲ.

ಅಲ್ಲದೇ ಡಿಸೆಂಬರ್ ತಿಂಗಳಿಂದಲೇ ಪಾವತಿಸಬೇಕಾಗಿದ್ದ ವಾರ್ಷಿಕ ಇಂಕ್ರಿಮೆಂಟ್ ರೂ. 125 ಕೊಡಲಿಲ್ಲ, ಕಾರ್ಮಿಕರು ಹಲವು ಬಾರಿ ಕೇಳಿದರೂ ಇಂದು ನಾಳೆ ಎಂದು ಮುಂದೂಡುತ್ತಾ ಸಮಾಧಾನಪಡಿಸಲಾಗುತ್ತಿತ್ತು. ಫೆ. 9 ರಂದು ವೇತನ ಚೀಟಿ ನೀಡಿದಾಗ ನೋಡಿದರೆ ವಾರ್ಷಿಕ ಇಂಕ್ರಿಮೆಂಟ್ ಸಂಬಳದಲ್ಲಿ ಸೇರಿಲ್ಲ. ಮೊದಲನೇ ಶಿಫ್ಟಿನಲ್ಲಿದ್ದ ಎಲ್ಲ ಕಾರ್ಮಿಕರು ಡ್ಯೂಟಿ ಮುಗಿದ ಕೂಡಲೇ ಹೊರಗೆ ಹೋಗದೆ ಮೇನೇಜರ್ ಅವರನ್ನು ಕೇಳಿದಾಗ ತೀವ್ರ ನಿರ್ಲಕ್ಷ್ಯ ಮಾಡಿದರು. ಕಾರ್ಮಿಕರು ಸರಿಯಾದ ಉತ್ತರ ಬೇಕೆಂದು ಒತ್ತಾಯಿಸಿದಾಗ ಅಷ್ಟರಲ್ಲೇ ಜನರಲ್ ಮೆನೇಜರ್ ಸ್ಥಳಕ್ಕೆ ಬಂದು ಕಾರ್ಮಿಕರ ಮೇಲೆ ಬೆದರಿಕೆ ಹಾಕಿ ಹೊರಕಳುಹಿಸಲು ಪ್ರಯತ್ನಿಸಿದರು. ಕಾರ್ಮಿಕರು ಅಂಜದೇ ಏಕೆ ಇಂಕ್ರಿಮೆಂಟ್ ನೀಡಿಲ್ಲ, ಉತ್ತರ ಬೇಕೆಂದು ಒತ್ತಾಯಿಸಿದರು. ಕೂಡಲೇ ಮುನಿರಾಬಾದ್ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಹಾಗೂ ಕೊಪ್ಪಳ ತಹಶೀಲ್ದಾರರನ್ನು ಕರೆಯಿಸಿದರು. ಅಲ್ಲಿಗೆ ಬಂದ ಅಧಿಕಾರಿಗಳು ವಿಷಯ ತಿಳಿದು ಆಡಳಿತ ಮಂಡಳಿಗೆ ಏಕೆ ಇಂಕ್ರಿಮೆಂಟ್ ಪಾವತಿ ಮಾಡಿಲ್ಲವೆಂದಾಗ ಉತ್ತರವಿಲ್ಲದ ಆಡಳಿತವರ್ಗ ತಹಶೀಲ್ದಾರರಿಗೆ ಕೂಡಲೇ ಲಿಖಿತವಾಗಿ ಪತ್ರ ನೀಡಿ ನಾಳೆಯೇ ಅಂದರೇ ಫೆ. 10 ರಂದು ಕೊಡುವುದಾಗಿ ತಿಳಿಸಿದರು. ಅದರಂತೆ ಸಂಬಳದಲ್ಲಿ ಸೇರಿಸಿದ್ದರು.

ಸ್ವಾಭಿಮಾನಕ್ಕೆ ಧಕ್ಕೆ ಆಯಿತೆಂಬ ಆಡಳಿತ

ಇಂಕ್ರಿಮೆಂಟ್ ಕೊಟ್ಟನಂತರ ಆಡಳಿತ ವರ್ಗ ಇದು ಅವರ ಸ್ವಾಭಿಮಾನಕ್ಕೆ ಧಕ್ಕೆ ಆಯಿತೆಂದು ಕಾರ್ಖಾನೆ ಲಾಕೌಟ್ ನೋಟಿಸ್ ಹಾಕಿದ್ದಾರೆ. ಲಾಕೌಟ್ ಮಾಡಬೇಕಾದರೂ ಕನಿಷ್ಠ 6 ವಾರಗಳ ನೋಟಿಸ್ ನೀಡಿ ಯಾವ ಕಾರಣದಿಂದ ಈ ಲಾಕೌಟ್ ಮಾಡಲು ಉದ್ದೇಶಿಸಲಾಗಿದೆ ಎಂಬುದನ್ನು ಸ್ಪಷ್ಟವಾಗಿ ತಿಳಿಸಿ, ಕಾರ್ಮಿಕ ಸಂಘಕ್ಕೆ ಹಾಗೂ ಸಂಬಂಧಿತ ಎಲ್ಲಾ ಅಧಿಕಾರಿಗಳಿಗೆ ಕೊಡತಕ್ಕದ್ದು. ಕಾನೂನಿನ ಯಾವುದೇ ನಿಯಮವನ್ನು ಪಾಲಿಸದೇ ಕಾನೂನು ಬಾಹಿರವಾಗಿ ಲಾಕೌಟ್ ಮಾಡಲಾಗಿದೆ.

ಜನಪ್ರತಿನಿಧಿ, ಅಧಿಕಾರಿಗಳಿಗೂ ಡೋಂಟ್‌ಕೇರ್

ಕಾರ್ಮಿಕರಿಂದ ವಿಷಯ ತಿಳಿದಕೂಡಲೇ ಕೊಪ್ಪಳ ಶಾಸಕರಾದ ಕರಡಿ ಸಂಗಣ್ಣನವರು ಕಾರ್ಖಾನೆಗೆ ಭೇಟಿ ನೀಡಿದ ಸಿಐಟಿಯು ರಾಜ್ಯ ಸಮಿತಿ ಸದಸ್ಯರಾದ ಡಿ.ವೆಂಕಟರಮಣ ಅವರೊಂದಿಗೆ ಕಾರ್ಖಾನೆ ಒಳಗೆ ಹೋಗಿ ಆಡಳಿತವರ್ಗದವರಿಗೆ ತಿಳಿಹೇಳಲು ಮಾಡಿದ ಪ್ರಯತ್ನಕ್ಕೆ ಫಲ ಸಿಗಲಿಲ್ಲ. ಆ ಪ್ರದೇಶದ ಜಿಲ್ಲಾ ಪಂಚಾಯತಿ ಸದಸ್ಯರು ಅಲ್ಲದೇ ಗಂಗಾವತಿ ಕ್ಷೇತ್ರದ ಶಾಸಕರಾದ ಶ್ರೀರಂಗದೇವರಾಯಲು ಪ್ರಯತ್ನಿಸಿದರೂ ಮ್ಯಾನೇಜ್‌ಮೆಂಟ್ ಜಗ್ಗಲಿಲ್ಲ. ಜಿಲ್ಲಾಧಿಕಾರಿಗಳಾದ ತುಷಾರ್ ಗಿರಿನಾಥ್ ಅವರು ಸ್ವತಃ ಫ್ಯಾಕ್ಟರಿಗೇಟಿಗೆ ಬಂದು ಎರಡು ತಾಸುಗಳು ನಿಂತರೂ ಆಡಳಿತ ವರ್ಗ ಸೌಜನ್ಯಕ್ಕಾದರೂ ಜಿಲ್ಲಾಧಿಕಾರಿಗಳನ್ನು ಗೇಟಿನೊಳಗೆ ಬಿಡದೆ ಧಿಕ್ಕರಿಸಿತು.

ಕಾನೂನು ಕಾಲಕಸವೇ?

ಕಾನೂನು ಉಲ್ಲಂಘನೆ ಕಿರ್ಲೋಸ್ಕರ್ ಆಡಳಿತ ವರ್ಗದ ಹಕ್ಕೆಂಬ ರೀತಿ ವರ್ತಿಸುತ್ತಿದೆ. ಮೂರು ಬಾರಿ ಸಂದಾನ ಸಭೆ ಕರೆದರೂ ಲಾಕೌಟ್ ತೆರವುಗೊಳಿಸಲು ಒಪ್ಪಲಿಲ್ಲ. ಬದಲಾಗಿ ಕಾರ್ಮಿಕರು ಮುಚ್ಚಳಿಕೆ ಬರೆದು ಕೊಡಬೇಕು, ಕಾನೂನುಬಾಹಿರ ಲಾಕೌಟ್ ಕಾಲದ ವೇತನ ನೀಡುವುದಿಲ್ಲ ಹಾಗೂ ಕಾರ್ಮಿಕ ಮುಖಂಡರು ಸೇರಿದಂತೆ 185 ಕಾರ್ಮಿಕರ ಮೇಲೆ ದುರುದ್ದೇಶದ ಚಾರ್ಜ್‌ಶೀಟ್ ಜಾರಿ ಮಾಡಿದೆ. ಸಂಧಾನದ ಪ್ರಕ್ರಿಯೆಯಲ್ಲಿರುವಾಗ ಏನೇ ಕ್ರಮ ಜರುಗಿಸಬೇಕಾದರೆ ಸಂಧಾನಾಧಿಕಾರಿಗಳ ಪರವಾನಗಿ ಪಡೆದ ನಂತರವಷ್ಟೇ ಮಾಡಬಹುದು. ಆದರೆ ಸಂಧಾನ ಅಧಿಕಾರಿಗಳಿಗೂ ಗೊತ್ತಿಲ್ಲದೇ ಚಾರ್ಜ್‌ಶೀಟ್‌ಗಳನ್ನು ಜಾರಿಗೊಳಿಸಲಾಗಿದೆ. ಮೇಲಿಂದ ಮೇಲೆ ಕಾನೂನು ಉಲ್ಲಂಘನೆ ಮಾಡುವುದು ಆಡಳಿತ ವರ್ಗಕ್ಕೆ ಅಭ್ಯಾಸವಾಗಿ ಬಿಟ್ಟಿದೆ.

ಕೈಕಟ್ಟಿಕೊಂಡಿದ್ದ ಸರಕಾರ

ಇಂತಹ ಸಂದರ್ಭದಲ್ಲಿ ಸರಕಾರಕ್ಕೆ Sec-10B ಅಡಿಯಲ್ಲಿ ಕ್ರಮ ಜರುಗಿಸಿ ಕಾರ್ಮಿಕರಿಗೆ ನ್ಯಾಯ ದೊರಕಿಸಲು ಅವಕಾಶವಿದ್ದಾಗ್ಯೂ ಸರಕಾರ ಕಣ್ಣು ಮುಚ್ಚಿ ಕುಳಿತಿತ್ತು. ಯಾವುದೇ ಬಡವ, ಕೂಲಿಕಾರ, ಕಾರ್ಮಿಕ, ರೈತರಿಂದ ಸಣ್ಣ ತಪ್ಪಾದರೆ ಉಗ್ರ ಕ್ರಮಕ್ಕೆ ಮುಂದಾಗುವ ಸರ್ಕಾರ ದೊಡ್ಡ ಬಂಡವಾಳಗಾರರು ಏನೆಲ್ಲಾ ಕಾನೂನು ಬಾಹಿರ ಕೃತ್ಯವೆಸಗಿ ಸಾವಿರಾರು ಕಾರ್ಮಿಕರಿಗೆ ದ್ರೋಹ ಮಾಡಿದರೂ ಸರಕಾರ ಕೈಕಟ್ಟಿ ಕುಂತಿದೆ.

ಕೊನೆಗೂ ಮಣಿಯಬೇಕಾಯ್ತು

ಸರ್ಕಾರದ ಈ ಧೋರಣೆ ವಿರುದ್ಧ ಕೊಪ್ಪಳದ ಎಲ್ಲಾ ಸಂಘ ಸಂಸ್ಥೆಗಳು ಕಾರ್ಮಿಕರ ಬೆಂಬಲಕ್ಕೆ ನಿಂತರು. ಹೋರಾಟ ಸಮಿತಿ ರಚಿಸಿ ಬೃಹತ್ ಪ್ರತಿಭಟನೆ ನಡೆಸಲಾಯಿತು. ಈ ತೀವ್ರ ಪ್ರತಿಭಟನೆಗೆ ಆಡಳಿತ ಮಂಡಳಿ ಮಣಿಯಲೇ ಬೇಕಾಯಿತು. ಮಾರ್ಚ್ 3 ರಂದು ಬೇಡಿಕೆಗಳ ಈಡೇರಿಕೆಯ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಮಾರ್ಚ್ 5 ರಿಂದ ಕಾರ್ಖಾನೆ ಆರಂಭವಾಗಿದೆ.

- ಎಸ್.ಪ್ರಸನ್ನಕುಮಾರ್ ○

ಮಹಿಳಾ ಸಬಲೀಕರಣ ಇನ್ನೂ ಮರೀಚಿಕೆ

ಮಾರ್ಚ್ 8, ಅಂತ್ರರಾಷ್ಟ್ರೀಯ ಮಹಿಳಾ ದಿನ ಬಂದಾಗ ಎಂದಿನಂತೆ ಮಹಿಳೆಯರ ಗುಣಗಾನ, ಮಾತಿನಲ್ಲೇ ಸಮಾನತೆಯ ಸ್ಥಾನಮಾನ. ಮಹಿಳೆಯರ ಸಶಕ್ತೀಕರಣಕ್ಕೆ ತಾನು ಬದ್ಧವೆಂದು ಘೋಷಿಸಿರುವ ಕರ್ನಾಟಕ ಸರ್ಕಾರ, 'ಯೋಜನೆಗಳನ್ನು' ಪ್ರಕಟಿಸಿದೆ. ಇನ್ನೊಂದೆಡೆ ಇರುವ ಕನಿಷ್ಟ ಹಕ್ಕುಗಳನ್ನು ಕಸಿದುಕೊಳ್ಳಲಾಗುತ್ತಿದೆ. ಆಷಾಡಭೂತಿತನದ ಜೀವಂತ ಉದಾಹರಣೆಗಳ ಮೂಲಕ ಬೆಳಕು ಚೆಲ್ಲಿದ್ದಾರೆ ಲೇಖಕರು

ಎನ್. ಪ್ರಭಾ

ಗೌರಮ್ಮ ಶಹರಿ ರೋಜ್ಗಾರ್ ಯೋಜನೆಯ ಸಮುದಾಯ ಅಭಿವೃದ್ಧಿ ಸಂಘದ ಅಧ್ಯಕ್ಷೆಯಾಗಿದ್ದರು. ಬೆಂಗಳೂರಿನ ಕೃಷ್ಣರಾಜಪುರ ನಗರ ಸಭೆ ವ್ಯಾಪ್ತಿಯಲ್ಲಿ ಈಕೆ ಆರಿಸಿಬಂದಿದ್ದರು. ಎರಡು ವರ್ಷಗಳ ಅಧಿಕಾರಾವಧಿಯಲ್ಲಿ ಅಭಿವೃದ್ಧಿ ಸಂಘವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಈಕೆ ಸಾಕಷ್ಟು ಜನಪರ ಕೆಲಸಗಳನ್ನು ಮಾಡಿದ್ದರು. 4 ತರಗತಿಗಳು ಒಂದೇ ಕೊಠಡಿಯಲ್ಲಿ ನಡೆಯುತ್ತಿದ್ದ ಜಾಗದಲ್ಲಿ ಒಂದು ಶಾಲಾಕೊಠಡಿಯನ್ನು ಕಟ್ಟಿಸಿದರು. ಬಡಕುಟುಂಬಗಳು ವಾಸಿಸುವ ಪ್ರದೇಶದಲ್ಲಿ ಸಮುದಾಯ ಭವನ ನಿರ್ಮಿಸಿದರು. ಮರದ ಕೆಳಗೆ ದೇವಸ್ಥಾನಗಳಲ್ಲಿ ನಡೆಯುತ್ತಿದ್ದ ಅಂಗನವಾಡಿಗಳಿಗೆ ಮೂರು ಕಡೆ ಸ್ವಂತ ಕೇಂದ್ರಗಳನ್ನು ಕಟ್ಟಿಸಿದರು. ದುಸ್ಥಿತಿಯಲ್ಲಿದ್ದ ಶಾಲಾ ಕಟ್ಟಡವೊಂದನ್ನ ದುರಸ್ತಿ ಮಾಡಿಸಿದರು. ಬಡತನದ ರೇಖೆಗಿಂತ ಕೆಳಸ್ತರದಲ್ಲಿ ಬದುಕುವ ಜನರಿಗಾಗಿ ನಾಲ್ಕು ಪ್ರದೇಶಗಳಲ್ಲಿ ಜೋಡಿ ಶೌಚಾಲಯಗಳನ್ನು ನಿರ್ಮಿಸಿದರು. ಹಲವಾರು ಕಡೆ ಅಂಗನವಾಡಿಗಳಿಗೆ ನೀರಿನ ಡ್ರಂ, ನೀರಿನ ಫಿಲ್ಟರ್, ಮಕ್ಕಳು ಕೂರಲು ಹಲಗೆ, ಆಟಿಕೆಗಳು, ಮುಂತಾದವನ್ನು ಪೂರೈಸಿದರೆ ಸರ್ಕಾರಿ ಶಾಲೆಗಳಿಗೂ ಸಹ ಆಟದ ಸಾಮಗ್ರಿ, ಬೆಂಚು ಡೆಸ್ಕು, ನೋಟ್ ಪುಸ್ತಕ ಲೈಬ್ರರಿ ಪುಸ್ತಕಗಳನ್ನು ಒದಗಿಸಿದರು. ಜೊತೆಗೆ 25 ಜನ ಬಡ ವಿದ್ಯಾರ್ಥಿಗಳಿಗೆ ಉಚಿತ ಕಂಪ್ಯೂಟರ್ ತರಬೇತಿ ನೀಡುವ ವ್ಯವಸ್ಥೆ ಮಾಡಿದರು. 30 ರಿಂದ 40 ಜನರಿಗೆ 2 ರಿಂದ 40 ಸಾವಿರದ ತನಕ ಬ್ಯಾಂಕ್‌ಗಳಲ್ಲಿ ಸಾಲ ಕೊಡಿಸಿದರು. ಹಾಳಾದ ರಸ್ತೆ ಕಾಮಗಾರಿ ಮಾಡಿಸಿದರು.

ಒಟ್ಟಿನಲ್ಲಿ ಸುಮಾರು 20 ರಿಂದ 25 ಲಕ್ಷ ರೂಪಾಯಿಗಳನ್ನು ಯೋಜನೆಯ ಮೂಲಕ ಸಾರ್ಥಕ ಕೆಲಸಗಳಿಗಾಗಿ ವಿನಿಯೋಗಿಸಿದರು. ಸರ್ಕಾರದ ಯೋಜನೆಯನ್ನ ಸಮರ್ಥವಾಗಿ ಫಲಾನುಭವಿಗಳಿಗೆ ತಲುಪಿಸಿದರು. ಗೌರಮ್ಮ ಅವರ ಅಧಿಕಾರಾವಧಿ ಮುಗಿಯುತ್ತಾ ಬಂತು. ಆದರೆ ಇನ್ನೂ ಒಂದು ವರ್ಷ ಗೌರಮ್ಮ ಅವರೇ ಮುಂದುವರೆಯಲಿ ಎಂದು ಸಮಿತಿ ಸದಸ್ಯರು ತೀರ್ಮಾನ ಮಾಡಿದರು.

ಇದೇ ಜನವರಿ 23ಕ್ಕೆ ಚುನಾವಣೆಯನ್ನು ನಿಗದಿಪಡಿಸಿ, ಗೌರಮ್ಮ ಅಲ್ಲೆ ಆಯ್ಕೆಯಾಗಲಿ ಎಂದರು, ಅಲ್ಲಿನ ಸಿಎಂಸಿಯ ಅಧ್ಯಕ್ಷರು ಹಾಗೂ ಆಯುಕ್ತರು (ಇಬ್ಬರೂ ಪುರುಷರು).

ಗೌರಮ್ಮ ಅವರ ಕೆಲಸ, ಜನಪರ ಕಾಳಜಿಯನ್ನು ಮೆಚ್ಚಿದ್ದ ಸಿಡಿಎಸ್. (ಸಮುದಾಯ ಅಭಿವೃದ್ಧಿ ಸಂಘ)ನ ನೂರಾರು ಮಹಿಳಾ ಸದಸ್ಯರು ಅಂದು ಚುನಾವಣೆ ನಡೆಸಲು ಬಂದರು. ಚುನಾವಣೆ ನಡೆಸಿ ಎಂದು ಕೇಳಿಕೊಂಡರು. ಸಿಎಂ.ಸಿ ಯ ಅಧ್ಯಕ್ಷರು ಒಬ್ಬ ಮಹಿಳೆಯನ್ನು ತಂದು ವೇದಿಕೆಯ ಮೇಲೆ ನಿಲ್ಲಿಸಿ ಈಕೆ ಅಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ. ಎಲ್ಲರೂ ಕೈಯೆತ್ತಿ ಎಂದು ಘೋಷಿಸಿದರು. ನೆರೆದಿದ್ದ ಮಹಿಳೆಯರು ದಿಗ್ಭ್ರಾಂತರಾದರು. ಕೂಡಲೆ ಅಧ್ಯಕ್ಷರ ಉದ್ಧಟತನವನ್ನು ಪ್ರತಿಭಟಿಸಿದರು. ಗೌರಮ್ಮ ಅಧ್ಯಕ್ಷರಾಗಲಿ ಇಲ್ಲವೆ ಸ್ಪರ್ಧೆ ಮಾಡಬಯಸುವವರು ಚುನಾವಣೆಯ ಮೂಲಕ ಗೆದ್ದು ಬರಲಿ ಎಂದು ಆಗ್ರಹಪಡಿಸಿದರು. ಪ್ರಜಾಸತ್ತಾತ್ಮಕವಾಗಿ ಚುನಾವಣೆ ನಡೆಸಿ ಎನ್ನುವ ಒತ್ತಾಯ ಮಹಿಳೆಯರ ಕಡೆಯಿಂದ ಬರುತ್ತಿದ್ದಂತೆ ನಗರ ಸಭೆಯ ಆಯುಕ್ತರು, ಅಧ್ಯಕ್ಷರು ಒಂದಾಗಿ ತಾವು ಕರೆತಂದಿದ್ದ ಮಹಿಳೆಗೆ ಹೂವಿನ ಹಾರ ಹಾಕಿಸಿ ಈಕೆಯೆ ಅಧ್ಯಕ್ಷೆ ಎಂದು ಅರಚಾಡಿ ಕಾರಿನಲ್ಲಿ ಕೂಡಿಸಿಕೊಂಡು ಹೊರಟೇ ಹೋದರು. ಈ ಕ್ರಮವನ್ನು ಪ್ರತಿಭಟಿಸಿ ಕೂಡಲೆ ಬೀದಿಗೆ ಬಂದ ಮಹಿಳೆಯರು ಕಾರು ಘೆರಾವ್ ಮಾಡಿದರು ರಸ್ತೆ ತಡೆ ನಡೆಸಿದರು ಸಂಬಂಧಿಸಿದ ಹತ್ತಾರು ಕಡೆ ದೂರು ಕೊಟ್ಟರು. ಆದರೆ ಗೆದ್ದದ್ದು ಮಾತ್ರ ಅಧ್ಯಕ್ಷರು, ಹಾಗೂ ಆಯುಕ್ತರ ಅಭ್ಯರ್ಥಿಯೇ.

ಮಂಜುಳಾ ದಾವಣಗೆರೆ ನಗರಸಭೆಯ ಶಹರಿ ರೋಜ್ಗಾರ್ ಯೋಜನೆಯ ಅಧ್ಯಕ್ಷೆ. ಬಡತನದ ರೇಖೆಯ ಕೆಳಗೆ ವಾಸಿಸುವ ಜನರ ಸಲುವಾಗಿನ ಯೋಜನೆಯನ್ನ ಬಡವರಿಗೇ ತಲುಪಿಸುವ ಆಸೆ ಈಕೆಯದ್ದು. ಒಮ್ಮೆ ಸಂಘದ ಸಭೆ ಸೇರಿತ್ತು. ಸಭೆಗೆ ಬಂದಿದ್ದ ನಗರಸಭೆಯ ಅಧಿಕಾರಿಗಳು ಯೋಜನೆಯ ಹಣವನ್ನು ಬಳಸಿ ನಗರ ಸಭೆಗೆ ಜೀಪು ಖರೀದಿಸುವ ಪ್ರಸ್ತಾಪ ಮಾಡಿದರು. ಮಂಜುಳಾ ಇದನ್ನ ಪ್ರತಿಭಟಿಸಿದರು. ಅಷ್ಟೇ ಏಕೆ ಪ್ರತಿಯೊಂದು ಹಂತಗಳಲ್ಲಿ ಅಧಿಕಾರಿಗಳನ್ನ ಕೌನ್ಸಿಲರ್‌ಗಳನ್ನ ಪ್ರಶ್ನೆ ಮಾಡಿ ತಮ್ಮ ನಿಲುವುಗಳನ್ನ ಮಂಡಿಸುತ್ತಿದ್ದರು. ಲಕ್ಷಾಂತರ ರೂಪಾಯಿಗಳ ಯೋಜನೆಯ ಲಾಭ ಬಡಜನರಿಗೆ ಸಿಗಬೇಕು ಎಂದು ಒತ್ತಾಯಪಡಿಸುತ್ತಿದ್ದರು.

ಈಕೆ ಸಹ ಜನರ ಆದರ ವಿಶ್ವಾಸಕ್ಕೆ ಪಾತ್ರರಾಗಿದ್ದರು. ಹೀಗಾಗಿ ಮಂಜುಳಾರ ಅಧಿಕಾರಾವಧಿ ಮುಗಿಯುತ್ತಿದ್ದಂತೆ ಅಲ್ಲಿನ ಆಯುಕ್ತರು ಹರಿಬರಿಯಾಗಿ ಸಭೆಯೊಂದನ್ನು ಕರೆದು ಅಪ್ರಾಪ್ತ ವಯಸ್ಸಿನ ಹುಡುಗಿಯೊಬ್ಬಳನ್ನು ಅಧ್ಯಕ್ಷೆಯನ್ನಾಗಿ ನೇಮಿಸಿದರು. ಮಂಜುಳಾ ಪರವಾಗಿ ಅಲ್ಲಿನ ನೂರಾರು ಮಹಿಳೆಯರು ಮುಂದಾದರು ಪ್ರಯೋಜನವಾಗಲಿಲ್ಲ. ಅಧಿಕಾರಿಯೇ ಮೇಲುಗೈ ಪಡೆದರು.

ಸುಶೀಲಮ್ಮ ಕನಕಪುರ ನಗರ ಸಭೆಯ ಸಿಡಿಎಸ್ ಅಧ್ಯಕ್ಷರು. ಅವರಿಗೆ ತಿಳಿಯದೆಯೇ ಅಲ್ಲಿನ ಸಭೆಗಳು ನಡೆಯುತ್ತಿದ್ದವು. ಆಕೆಯ ಅಧಿಕಾರವನ್ನು ನಗರ ಸಭೆಯ ಅಧಿಕಾರಿಗಳೇ ಚಲಾಯಿಸುತ್ತಿದ್ದರು. ಜೊತೆಗೆ ಕೌನ್ಸಿಲರ್‌ಗಳು ಆಕೆಯ ಪರವಾಗಿ ತಾವೇ ಸಹಿ ಮಾಡಿಕೊಳ್ಳುತ್ತಿದ್ದರು. ಆಕೆಗೆ ತಿಳಿಯದಂತೆ ಯೋಜನೆಗಳನ್ನು ಸಿದ್ದಪಡಿಸಿಕೊಳ್ಳುತ್ತಿದ್ದರು. ತಮಗೆ ಬೇಕಾದವರಿಗೆ ಯೋಜನೆಯ ಲಾಭ ಕೊಡಿಸುತ್ತಿದ್ದರು. ಪ್ರಶ್ನೆ ಮಾಡಿದರೆ ಹೆದರಿಸುತ್ತಿದ್ದರು. ಸುಶೀಲಮ್ಮ ಬೇಸತ್ತು ಗಲಾಟೆ ಮಾಡಲು ಪ್ರಾರಂಭಿಸಲಾಗಿ ಆಕೆಗೆ ಗೊತ್ತಿಲ್ಲದಂತೆಯೆ ಮತ್ತೊಬ್ಬ ಅಧ್ಯಕ್ಷೆಯನ್ನು ಆರಿಸಿಕೊಂಡಿದ್ದರು. ಎಂದಿನಂತೆ ಸುಶೀಲಮ್ಮ ಕಛೇರಿಗೆ ಬಂದಾಗ ಒಂದು ದಿನ ಅಲ್ಲಿನ ಆಯುಕ್ತರು ನಿಮ್ಮ ಅಧಿಕಾರಾವಧಿ ಮುಗಿದಿದೆ ಬೇರೆಯವರನ್ನು ನೇಮಿಸಲಾಗಿದೆ ನಿಮಗೆ ಇಲ್ಲೇನು ಕೆಲಸವಿಲ್ಲ ಎಂದರು.

ದಕ್ಷತೆಯಿಂದ, ಪ್ರಾಮಾಣಿಕತೆಯಿಂದ ಸ್ವರ್ಣ ಜಯಂತಿ ಷಹರಿ ರೋಜ್ಗಾರ್ ಯೋಜನೆಯ ಬೈಲಾದ ಪ್ರಕಾರ ಬಡಜನತೆ ಕಲ್ಯಾಣಕ್ಕೆ ಬದ್ಧರಾಗಿ ಕೆಲಸ ಮಾಡುತ್ತಿದ್ದ ಗೌರಮ್ಮ, ಪ್ರೇಮಲತಾ, ಮಂಜುಳ ಹಾಗೂ ಸುಶೀಲಮ್ಮ ಇವರುಗಳನ್ನ "ಹೇಳಿದ ಹಾಗೆ ಕೇಳದ" ಕಾರಣಕ್ಕೆ ಅಧಿಕಾರಿಗಳು, ಚುನಾಯಿತ ಪುರುಷ ಮುಖಂಡರು ಅಧ್ಯಕ್ಷ ಸ್ಥಾನದಿಂದ ಇಳಿಸಿದರು.

ನಾಯಕತ್ವದ ಸಾಮರ್ಥ್ಯವಿರುವ ಈ ಮಹಿಳೆಯರನ್ನ ಹಿಂದಕ್ಕೆ ಹಾಕಲು ಎಲ್ಲಾ ಚುನಾವಣಾ ಅಕ್ರಮಗಳನ್ನ ಅನುಸರಿಸಿದರು.

ಇವು ಮೂರೇ ಮೂರು ಘಟನೆಗಳಲ್ಲ "ಮಹಿಳಾ ಸಬಲೀಕರಣವರ್ಷ"ದ ಮೂರು ಸಣ್ಣ ಉದಾಹರಣೆಗಳು ಮಾತ್ರ. ಸ್ಥಳೀಯ ಸಂಸ್ಥೆಗಳಲ್ಲೇ ಮಹಿಳೆಯರನ್ನ ಸಹಿಸದವರು ಸಂಸತ್ತಿಗೆ ಬಿಡುವರೆ? ಮಹಿಳೆಯರಿಗೆ ಅಧಿಕಾರ ಕೊಡುವರೆ? ಮಹಿಳೆಯರೊಂದಿಗೆ ಹಣಕಾಸು ವ್ಯವಹಾರಗಳನ್ನು ನಡೆಸುವರೆ? ಸರಿಸಮಾನ ಅವಕಾಶಗಳು ಮಹಿಳೆಗೆ ನಿಜವಾಗಿಯೂ ದಕ್ಕಬಹುದೆ? ಮಹಿಳಾ "ಸಬಲೀಕರಣ" ಸಾಧ್ಯವಾಗಬಹುದೇ? ಮುಂತಾದ ಪ್ರಶ್ನೆಗಳು ಪ್ರತಿಯೊಂದು ಘಟನೆಗಳೊಂದಿಗೆ ನಮ್ಮನ್ನ ಕಾಡುತ್ತಿವೆ.

ಏನಿದು ಮಹಿಳಾ ಸಬಲೀಕರಣ:

ಈ ವರ್ಷವನ್ನು ರಾಜ್ಯ ಸರ್ಕಾರ "ಮಹಿಳಾ ಸಬಲೀಕರಣ ವರ್ಷವೆಂದು" ಕರೆದಿದೆ. ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗಾಗಿ ಕರೆ ನೀಡಿದೆ. ಹಲವಾರು ಇಲಾಖೆಗಳ ಸಹಯೋಗದೊಂದಿಗೆ ಈ ಗುರಿ ಸಾಧಿಸುವುದಾಗಿ ಹೇಳಿದೆ. ಮಹಿಳೆಯರಿಗೆ ಸಮಾಜದಲ್ಲಿ ದೊರಕಬೇಕಾದ ಸ್ಥಾನಮಾನದ ಬಗ್ಗೆ ಜಾಗೃತಿಯನ್ನು ಮೂಡಿಸಿ ಆರ್ಥಿಕ ಸಾಮಾಜಿಕ, ರಾಜಕೀಯವಾಗಿ ಸದೃಢ ಅಥವಾ ಸಶಕ್ತರನ್ನಾಗಿ ಮಾಡುವುದಾಗಿಯೂ ಸರ್ಕಾರ ಹೇಳಿಕೊಂಡಿದೆ. ಇದಕ್ಕೆ ಕರೆದಿರುವ ಮತ್ತೊಂದು ಸುಂದರ ಹೆಸರು "ಮಹಿಳಾ ಸಶಕ್ತೀಕರಣ".

"ಒಂದು ಲಕ್ಷ ಸ್ವ-ಸಹಾಯ ಗುಂಪುಗಳ" ಮೂಲಕ 20 ಲಕ್ಷ ಮಹಿಳೆಯರನ್ನ ಸಂಘಟಿಸಿ ಸಶಕ್ತೀಕರಣಕ್ಕೆ ನಾಂದಿ ಹಾಕುವುದಾಗಿಯೂ, 72 ಕೋಟಿ ರೂಪಾಯಿಗಳ ಅನುದಾನದಲ್ಲಿ ತೊಡಗಿಸಿ ಕ್ರಾಂತಿ ಮಾಡುವುದಾಗಿಯೂ ಮುಖ್ಯಮಂತ್ರಿಗಳು ಹೇಳಿರುತ್ತಾರೆ. ಪ್ರಮುಖವಾದ ನಾಲ್ಕು ಉದ್ದೇಶಗಳನ್ನು ಯೋಜನೆಯಲ್ಲಿ ಪ್ರಚುರಪಡಿಸಿರುತ್ತಾರೆ. ಅದೇನೆಂದರೆ,

- ಮಹಿಳೆಯರಿಗೆ ಆರ್ಥಿಕ ಪ್ರಗತಿಯನ್ನು ಸಾಧಿಸುವಂತಹ ಹಾಗೂ ಸಾಮಾಜಿಕ ಬದಲಾವಣೆಗೆ ಸೂಕ್ತ ವಾತಾವರಣವನ್ನು ಮೂಡಿಸುವಂತಹ ಪ್ರಕ್ರಿಯೆಯನ್ನ ಬಲಪಡಿಸುವುದು.
- ರಾಜ್ಯಾದ್ಯಂತ 2000-2001ನೇ ಸಾಲಿನಲ್ಲಿ ಒಂದು ಲಕ್ಷ ಸ್ವ-ಸಹಾಯ ಮಹಿಳಾ ಗುಂಪುಗಳನ್ನ ರಚಿಸುವುದು ಅವರಲ್ಲಿ ಆತ್ಮವಿಶ್ವಾಸ ಮತ್ತು ಸ್ವಾವಲಂಬನೆ ಮೂಡಿಸಿ ಸಂಪನ್ಮೂಲಗಳ ಮೇಲೆ ಹತೋಟಿ ಹಾಗೂ ಸಾಮಿಪ್ಯವನ್ನುಸಾಧಿಸುವುದು.
- ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ಮಹಿಳೆಯರನ್ನ ತೊಡಗಿಸುವುದರ ಮೂಲಕ ಬಡ ಮಹಿಳೆಯರ ಆದಾಯವನ್ನು ಹೆಚ್ಚಿಸಿ ಅವರಲ್ಲಿ ಆರ್ಥಿಕ ಸ್ಥಿರತೆಯನ್ನ ಮೂಡಿಸುವುದು ಬಡತನ ನಿವಾರಣೆ ಮಾಡುವುದು.
- ವಿವಿಧ ಇಲಾಖೆಗಳನ್ನು ಒಮ್ಮುಖಗೊಳಿಸುವುದರ ಮೂಲಕ ಮಹಿಳಾ ಗುಂಪಿನ ಸದಸ್ಯರುಗಳಿಗೆ ವಿವಿಧ ಇಲಾಖೆಗಳ ಅಭಿವೃದ್ಧಿ ಕಾರ್ಯಕ್ರಮಗಳ ಫಲ ದೊರೆಯುವಂತೆ ಅವಕಾಶ ಕಲ್ಪಿಸುವುದು ಹಾಗೂ ಸಾಲ ನೀಡುವ ಸಂಸ್ಥೆಗಳಿಂದ ಸಾಲ ದೊರೆಯುವಂತೆ ಕ್ರಮ ಕೈಗೊಳ್ಳುವುದು.

ಬಡತನದ ರೇಖೆಗಿಂತ ಕೆಳಗೆ ವಾಸಿಸುವ ಮಹಿಳೆಯರನ್ನ ಸಂಘಟಿಸಿ ಅನುಷ್ಠಾನಗೊಳಿಸುವ ಸಶಕ್ತೀಕರಣದ ಉಸ್ತುವಾರಿಯನ್ನ ವ್ಯಾನ್ಯ



ಹಕ್ಕಿಗಾಗಿ ಆಂದೋಲನ

ಮುಖ್ಯಮಂತ್ರಿಗಳೇ ವಹಿಸುವುದು. ಚಾಲನಾ ಸಮಿತಿ ರಚಿಸಿ ಅವರೇ ಅಧ್ಯಕ್ಷರಾಗುವುದು. ಮಹಿಳಾ ಮತ್ತು ಮಕ್ಕಳ ಇಲಾಖೆ ಸಚಿವರು ಉಪಾಧ್ಯಕ್ಷರಾಗಿರುವುದು ಮುಖ್ಯ ಕಾರ್ಯದರ್ಶಿಗಳು ಇವರ ಜೊತೆ ಸೇರುವುದು, ಇವು ಸಶಕ್ತೀಕರಣದ ಮುಖ್ಯಾಂಶಗಳು.

ಮಹಿಳಾ ಸಬಲೀಕರಣದ ಘೋಷಣೆಯನ್ನು ನಾವೆಲ್ಲರೂ ಖಂಡಿತಾ ಸ್ವಾಗತಿಸೋಣ. ಆದರೆ ಹೊರ ನೋಟಕ್ಕಷ್ಟೇ ಆಕರ್ಷಕವಾಗಿರುವ ಸಶಕ್ತೀಕರಣದ ಒಳ ಹೂರಣದಲ್ಲಿ ಏನಿದೆ ನೋಡಬಾರದೇಕೆ?

ಬಡತನ ನಿರ್ಮೂಲನೆಗೆ ಸ್ವ ಸಹಾಯ ಗುಂಪುಗಳ ಸಣ್ಣ ಉಳಿತಾಯದ ಮದ್ದು

ಒಂದು ಕಡೆ ಮಹಿಳೆಯರ ಸರ್ವಾಂಗೀಣ ಅಭಿವೃದ್ಧಿಗೆ ಕರೆ ಮತ್ತೊಂದೆಡೆ ಸ್ವ-ಸಹಾಯ ಗುಂಪುಗಳ ರಚನೆ, ಬಡತನ ನಿರ್ಮೂಲನೆ. ಇದೇ ಸರ್ಕಾರ ಪ್ರತಿಪಾದಿಸುತ್ತಿರುವ 'ಸಬಲೀಕರಣ'. ಅಂದರೆ ಬಡವರಿಂದಲೇ ಬಡತನ ನಿರ್ಮೂಲನೆ. 15 ರಿಂದ 20 ಜನ ಮಹಿಳೆಯರನ್ನ ಸೇರಿಸಿ ಗುಂಪು ಮಾಡುವುದು. ತಿಂಗಳಿಗೆ 50 ರೂಪಾಯಿ ಉಳಿತಾಯ ಮಾಡಿಸುವುದು 6 ತಿಂಗಳ ನಂತರ ಸರ್ಕಾರದ ಅನುದಾನವನ್ನು ಗುಂಪಿಗೆ (5ರಿಂದ 6 ಸಾವಿರ) ನೀಡುವುದು. ಆರ್ಥಿಕವಾಗಿ ಸ್ವಾವಲಂಬಿಗಳಾಗಿಸುವುದು. ಇದು ಸರ್ಕಾರದ

ಪುಟ 10 ಕ್ಕೆ

ಕೃಷ್ಣರಾಜಪುರದಲ್ಲಿ ಕಟ್ಟಿದ ಶಾಲೆ



ಮಹಿಳೆಯರ ಕೆಳಕಂಡ ತಕ್ಷಣಕ ಬೇಡಿಕೆಗಳನ್ನಾದರು ಈಡೇರಿಸುವ ಮೂಲಕ ಆಳುವ ಸರ್ಕಾರಗಳು ಮಹಿಳೆಯರ ಅಭಿವೃದ್ಧಿಯನ್ನು ಸಾಧಿಸಲು ಮುಂದಾಗಲಿ ಇಲ್ಲವಾದರೆ ಮಹಿಳಾ ಪರ ಘೋಷಣೆಗಳನ್ನ ನಿಲ್ಲಿಸಲಿ.

- ರಾಜ್ಯದಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳು ಹೆಚ್ಚುತ್ತಿದ್ದು ರೈತ ಕುಟುಂಬಗಳು ದಿಕ್ಕಾಪಾಲಾಗುತ್ತಿರುವ ಹಿನ್ನೆಲೆಯಲ್ಲಿ ಕೃಷಿಕರ ಉಳಿವಿಗೆ ಸರ್ಕಾರ ವ್ಯಾಪಕ ಕ್ರಮಗಳನ್ನು ರೂಪಿಸಬೇಕು.
- ಮಹಿಳಾ ಸಬಲೀಕರಣಕ್ಕೆ ಅಡಿಗಲ್ಲಾದ ಶೇ. 33 ಮಹಿಳಾ ಮೀಸಲಾತಿಯನ್ನು ಈ ಬಾರಿಯ ಸಂಸತ್ ಅಧಿವೇಶನದಲ್ಲಿ ಯಥಾ ಪ್ರಕಾರ ಅಂಗೀಕಾರ ಮಾಡಬೇಕು.
- ಲೈಂಗಿಕ ಕಿರುಕುಳ, ವರದಕ್ಷಿಣೆ ಸಾವುಗಳು, ಹೊಡೆಯುವುದು, ಹಿಂಸಿಸುವುದು, ಅತ್ಯಾಚಾರ, ಅಪಹರಣ ಮುಂತಾದ ಮಹಿಳೆಯರ ಮೇಲಿನ ದಬ್ಬಾಳಿಕೆಯನ್ನು ತಡೆಯುವಲ್ಲಿ ಸರ್ಕಾರ ತೀವ್ರ ಕ್ರಮ ವಹಿಸಬೇಕು. ಅಪರಾಧಿಗಳಿಗೆ ಶಿಕ್ಷೆ ನೀಡುವಲ್ಲಿ ಇರುವ ಕಾನೂನು ತೊಡಕುಗಳನ್ನು ನಿವಾರಿಸಬೇಕು.
- ಹಿಂಸಾಚಾರಕ್ಕೊಳಗಾದ ಮಹಿಳೆಯರ ಜೊತೆ ಅನುಚಿತವಾಗಿ ವರ್ತಿಸದೆ ಸಹಕಾರ, ಸಾಂತ್ವನ ನೀಡುವ ನಿಟ್ಟಿನಲ್ಲಿ ಪೋಲೀಸ್ ಠಾಣೆಗಳು ಪರಿವರ್ತನೆಯಾಗಬೇಕು. ಹಿಂಸಾಚಾರದ ಪ್ರಕರಣಗಳಲ್ಲಿ ಪೋಲೀಸ್ ಆಲಸ್ಯ ಸಲ್ಲದು. ದಲಿತ ಹಾಗೂ ಅಲ್ಪಸಂಖ್ಯಾತ ಮಹಿಳೆಯರಿಗ ಸೂಕ್ತ ರಕ್ಷಣೆ ಸಿಗಬೇಕು. ಅವರ ಮೇಲಿನ ಹಲ್ಲೆಗಳು ಸಂಪೂರ್ಣ ನಿಲ್ಲಬೇಕು.
- ಮಹಿಳೆಯರ ನೆರವಿಗೆ ಧಾವಿಸಬೇಕಾದ "ರಾಜ್ಯ ಮಹಿಳಾ ಆಯೋಗ" ಅಧ್ಯಕ್ಷರು ಹಾಗೂ ಸಮಿತಿಯಿಲ್ಲದೆ ನಿಷ್ಕ್ರಿಯಗೊಂಡಿದೆ. ಆಯೋಗವನ್ನು ರಚಿಸಿ ಪರಿಣಾಮಕಾರಿಯಾಗಿ ಕೆಲಸ ಮಾಡಿಸುವ ನಿಟ್ಟಿನಲ್ಲಿ ಸರ್ಕಾರ ಕೂಡಲೇ ನಿಗಾ ವಹಿಸಬೇಕು.
- ಮೂಲಭೂತ ನಾಗರೀಕ ಸೌಲಭ್ಯಗಳನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕು.
- ರಾತ್ರಿ ಪಾಳಿಯಲ್ಲಿ ದುಡಿಯುವಂತಹ ಪೂರಕ ವಾತಾವರಣ ನಮ್ಮ ಸಮಾಜದಲ್ಲಿಲ್ಲದ ಕಾರಣ ಮಹಿಳೆಯರ "ಉದ್ಯೋಗಾವಕಾಶಗಳಿಗ" ಸವಾಲಾಗುವ "ರಾತ್ರಿ ಪಾಳಿ ದುಡಿಮೆ"ಯ ಕಾನೂನು ಸಲ್ಲದು. ಈ ಪ್ರಸ್ತಾಪವನ್ನು ಕೈ ಬಿಡಬೇಕು. ಮಹಿಳೆಯರಿಗೆ ಉದ್ಯೋಗಾವಕಾಶಗಳು ಹೆಚ್ಚಾಗಬೇಕು.
- ದುಡಿಯುವ ಸ್ಥಳಗಳಲ್ಲಿ ಲೈಂಗಿಕ ಕಿರುಕುಳದ ಕುರಿತು ಸುಪ್ರಿಂ ಕೋರ್ಟ್ ನೀಡಿರುವ ತೀರ್ಪನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕು.
- ಅಸಂಘಟಿತ ಕಾರ್ಮಿಕರಿಗೆ ಕನಿಷ್ಠ ಕೂಲಿಜಾರಿಮಾಡಬೇಕು.
- ಮುಕ್ತ ಆಮದು ನೀತಿಗೆ ಕಡಿವಾಣ ಹಾಕಬೇಕು.
- ಜಾಹೀರಾತುಗಳು, ಸಿನಿಮಾಗಳು ಮುಂತಾದ ಮಾಧ್ಯಮಗಳಲ್ಲಿ ಮಹಿಳೆಯರನ್ನ ಕೀಳಾಗಿ ಚಿತ್ರಿಸುವುದನ್ನ ನಿಷೇದಿಸಬೇಕು. ಕ್ರೌರ್ಯ ಹಿಂಸೆಗಳನ್ನು ಪ್ರಚೋದಿಸುವ ಸಿನಿಮಾಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು.

ಉಳ್ಳವರ ಮಡಿಲಿಗೆ ಸಾರ್ವಜನಿಕ ಉದ್ದಿಮೆಗಳು


ವಿಶ್ವೇಶ್ವರಯ್ಯನವರ ನನಸೀಗ ನುಚ್ಚು ನೂರು

ಬಾಲಕೃಷ್ಣ ಶೆಟ್ಟಿ

ಮಾರ್ಚ್ 4, 2001 ಶಿಕ್ಕಿರಿದ ಎಡಿಎ ರಂಗಮಂದಿರ(ಬೆಂಗಳೂರು)ದಲ್ಲಿ ಸಮಾವೇಶಗೊಂಡ ರಾಜ್ಯ ಸರಕಾರಕ್ಕೆ ಸೇರಿದ 15 ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರ ಪ್ರತಿನಿಧಿಗಳು, ಸಾರ್ವಜನಿಕ ಉದ್ದಿಮೆಗಳ ಹರಿಕಾರ, ವಾರ್ಷಿಕ ಯೋಜನೆಗಳ ರೂವಾರಿ ಮುದ್ದೇನಹಳ್ಳಿ ವಿಶ್ವೇಶ್ವರಯ್ಯನವರ ನೆನಸುಗಳನ್ನು ನುಚ್ಚುನೂರು ಮಾಡಲು ಬಿಡುವುದಿಲ್ಲ ಎಂದು ಪಣತೊಟ್ಟರು.

ಕರ್ನಾಟಕ ಸಾರ್ವಜನಿಕ ಉದ್ದಿಮೆ ರಕ್ಷಣಾ ಸಮಿತಿಯು ಆಶ್ರಯದಲ್ಲಿ, ಸಿಐಟಿಯು, ಎಐಟಿಯುಸಿ, ಐಎನ್‌ಟಿಯುಸಿ ಹಾಗೂ ಸ್ವತಂತ್ರ ಸಂಘಟನೆಗಳಿಗೆ ಸೇರಿದ 500 ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ ಈ ಸಮಾವೇಶದಲ್ಲಿ ವಿಶ್ವಬ್ಯಾಂಕ್ ಪ್ರೇರಿತ ಖಾಸಗೀಕರಣ ನೀತಿಯನ್ನು ಕರ್ನಾಟಕದಲ್ಲಿ ಜಾರಿಗೆ ತರುವುದನ್ನು ತೀವ್ರವಾಗಿ ವಿರೋಧಿಸಿದರು.

ವಿಶ್ವಬ್ಯಾಂಕ್ ಅಧ್ಯಕ್ಷ ಜೇವ್ಸ್ ಡಿ.ವೂಫೆನ್‌ಸನ್ ಬೆಂಗಳೂರಿಗೆ ಭೇಟಿ ಕೊಟ್ಟು ಮುಖ್ಯಮಂತ್ರಿ ಕೃಷ್ಣರವರ ಬೆನ್ನು ತಟ್ಟಿದ ಬೆನ್ನಲ್ಲೇ ರಾಜ್ಯ ಸರ್ಕಾರಕ್ಕೆ ಸೇರಿದ 15 ಸಾರ್ವಜನಿಕ ಉದ್ದಿಮೆಗಳನ್ನು ಮುಚ್ಚಲು ಅಥವಾ ಖಾಸಗೀಕರಣಗೊಳಿಸಲು ಕರ್ನಾಟಕ ಸರ್ಕಾರ ನಿರ್ಧರಿಸಿದೆ. ಈಗಾಗಲೇ ತ್ರಿಶಂಕು ಸ್ಥಿತಿಯಲ್ಲಿರುವ 10 ಸಾವಿರಕ್ಕೂ ಹೆಚ್ಚು ಕುಟುಂಬಗಳು ಸಂಪೂರ್ಣ ಬೀದಿ ಪಾಲಾಗುವ ಸೂಚನೆಗಳು ಬರುತ್ತಿವೆ.



ಖಾಸಗೀಕರಣಗೊಂಡ ಛತ್ತೀಸ್ ಗಢದ ಬಾಲ್ಕೋ ಕಾರ್ಖಾನೆ

ಜಾಗತೀಕರಣದ ಫಲ:

ಸಾರ್ವಜನಿಕ ಉದ್ದಿಮೆಗಳು ನಷ್ಟ ಮಾಡುತ್ತಿರುವುದು ಇಂದು ನೆನ್ನೆಯಲ್ಲ. ಸರಕಾರವೇ ಒದಗಿಸಿದ ಅಂಕಿ ಅಂಶಗಳ ಪ್ರಕಾರ 1987-88 ರಲ್ಲಿ 26 ಉದ್ದಿಮೆಗಳು 24.70 ಕೋಟಿ ರೂ. ಲಾಭ ಮಾಡಿದ್ದು, 32 ಉದ್ದಿಮೆಗಳು 158.95 ಕೋಟಿ ರೂ. ನಷ್ಟ ಮಾಡಿ ಒಟ್ಟು 58 ಉದ್ದಿಮೆಗಳು 134.25 ನಿವ್ವಳ ನಷ್ಟ ಮಾಡಿದೆ.

ಆದರೆ 1994-95 ರಲ್ಲಿ 38 ಉದ್ದಿಮೆಗಳು 209.32 ಕೋಟಿ ರೂ. ಲಾಭ ಮಾಡಿ, 33 ಉದ್ದಿಮೆಗಳು ನಷ್ಟ ಮಾಡಿದ್ದು, ಒಟ್ಟು 71 ಉದ್ದಿಮೆಗಳು75.18 ಕೋಟಿ ರೂ. ಲಾಭ ಮಾಡಿವೆ.

ಅಂದರೆ 1987-88 ರಲ್ಲಿ ಒಟ್ಟು 134.25 ಕೋಟಿರೂ. ನಷ್ಟ ಮಾಡಿದ್ದರೂ ಖಾಸಗೀಕರಣ ಮಾಡಬೇಕು ಅಥವಾ ಮುಚ್ಚಬೇಕು ಎಂಬ ದೊಡ್ಡ ಕೂಗು ಎದ್ದಿರಲಿಲ್ಲ. ಆದರೆ 1991 ರಲ್ಲಿ ಜಾರಿಗೊಂಡು ಇದೀಗ ತೀವ್ರಗತಿಯಲ್ಲಿ ಮುಂದುವರಿಯುತ್ತಿರುವ **ಜಾಗತೀಕರಣದ ಪ್ರಕ್ರಿಯೆಯಲ್ಲಿ ಖಾಸಗೀಕರಣಗೊಳಿಸಬೇಕು ಅಥವಾ ಸಾರ್ವಜನಿಕ ಉದ್ದಿಮೆಗಳನ್ನು ಮುಚ್ಚಿ,ನೌಕರರನ್ನು ಬೀದಿ ಪಾಲು ಮಾಡಬೇಕೆಂಬ ದೊಡ್ಡ ಕೂಗು ಎಲ್ಲೆಡೆಯಲ್ಲಿ ಗುಡುಗುತ್ತಿದೆ. ಕಾರ್ಮಿಕರನ್ನು, ಅವರ ಮೇಲೆ ಅವಲಂಬಿತವಾದ ಕುಟುಂಬಗಳನ್ನು ನಡುಗಿಸುತ್ತಿದೆ.**

ನಷ್ಟಹೊಂದಿರುವ ಕೆಲವು ಸಾರ್ವಜನಿಕ ಉದ್ದಿಮೆಗಳನ್ನು ಲಾಭದಾಯಕವಾಗಿ ನಡೆಸಲು ಸಾಧ್ಯವಿಲ್ಲವೇ? ಖಂಡಿತಾ ಸಾಧ್ಯವಿದೆ. ಉದಾಹರಣೆಗೆ ಪ್ರಖ್ಯಾತ ಮೈಸೂರು ಸ್ಯಾಂಡಲ್ ಸೋಪು ತಯಾರಿಸುವ ಪ್ರತಿಷ್ಠಿತ ಸಾಬೂನು ಕಾರ್ಖಾನೆಯನ್ನೇ ತೆಗೆದುಕೊಳ್ಳಿ. 92-93 ರಲ್ಲಿ 9.79 ಕೋಟಿ ರೂ. ನಷ್ಟ ಇದ್ದದ್ದು, 93-94 ರಲ್ಲಿ 7.10 ಲಕ್ಷ ರೂ. ನಷ್ಟಕ್ಕೆ ಇಳಿದಿದ್ದು 94-95 ರಲ್ಲಿ 65.10 ಲಕ್ಷ ರೂ. ಲಾಭ ಗಳಿಸಿದೆ. ನಂತರದ ವರ್ಷಗಳಲ್ಲಿ ಈ ಲಾಭ ಇನ್ನಷ್ಟು ಹೆಚ್ಚಾಗಿದ್ದು, 1996 ರಿಂದ ಈಚೆಗೆ ಸರಾಸರಿ ಪ್ರತಿವರ್ಷ 20 ಕೋಟಿ ರೂ. ಲಾಭ ಮಾಡುತ್ತಿದೆ.

ಇತ್ತೀಚಿನ ವರದಿಯ ಪ್ರಕಾರ 31.3.1999 ರಲ್ಲಿ 35 ಸಾರ್ವಜನಿಕ ಉದ್ದಿಮೆಗಳು 265.02 ಕೋಟಿ ಲಾಭ ಗಳಿಸಿದರೆ, 33 ಉದ್ದಿಮೆಗಳು 204.35 ಕೋಟಿ ರೂ. ನಷ್ಟ ಅನುಭವಿಸಿದೆ ಅಂದರೆ ಒಟ್ಟು 68 ಉದ್ದಿಮೆಗಳು 60 ಕೋಟಿಗಿಂತಲೂ ಹೆಚ್ಚು ಲಾಭ ಗಳಿಸಿದೆ.

ಇವೆಲ್ಲಕ್ಕೂ ಮಿಗಿಲಾಗಿ, ಪ್ರತಿಯೊಂದು ಕಂಪನಿಯು ತೆರಿಗೆಯ ರೂಪದಲ್ಲಿ ಕೋಟ್ಯಾಂತರ ರೂಪಾಯಿನೀಡುತ್ತಿದೆ. ಖಾಸಗಿ ಕಂಪನಿಗಳು ತೆರಿಗೆಯ ಹಣವನ್ನು ಬಾಕಿ ಇರಿಸಿಕೊಳ್ಳುತ್ತವೆ ಇಲ್ಲವೇ 'ಗುಳುಂ' ಮಾಡುತ್ತವೆ ಎಂಬುದು ಸರಕಾರಕ್ಕೆ ತಿಳಿದಿಲ್ಲವೇ. ಉದಾಹರಣೆಗೆ 1994-95 ರಲ್ಲಿ1.90 ಕೋಟಿ ರೂ. ನಷ್ಟ ಮಾಡಿದೆ ಎಂದು ಹೇಳಲಾಗುವ ಮೈಸೂರು ಲ್ಯಾಂಪ್ಸ್ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ತೆರಿಗೆಯ ರೂಪದಲ್ಲಿ 13.10 ಕೋಟಿ ರೂ. ನೀಡಿದೆ.

1992-93ರಲ್ಲಿ 21 ಕೋಟಿ ರೂ. ನಷ್ಟ ಮಾಡಿದೆ ಎಂದು ಹೇಳಲಾಗುವ ಪ್ರತಿಷ್ಠಿತ ಎನ್‌ಜಿಇಎಫ್ 45ಕೋಟಿ ರೂ.ಗಳಿಗೂ ಹೆಚ್ಚು ತೆರಿಗೆಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ನೀಡಿದುದು ಮಾತ್ರವಲ್ಲದೆ 6000 ನೌಕರರ ಕುಟುಂಬಗಳಿಗೆ ಆಶ್ರಯದಾತವಾಗಿದೆ. 1992-93 ರಿಂದ ಈವರೆಗೆ 208.22 ಕೋಟಿ ರೂ.ಗಳನ್ನು ಬಡ್ಡಿ ರೂಪದಲ್ಲಿ ನೀಡಿದೆ. ಕರ್ನಾಟಕದ ವಜ್ರ ಎಂದು ಬಣ್ಣಿಸಲಾಗುತ್ತಿರುವ ಎನ್‌ಜಿಇಎಫ್ ನಷ್ಟ ಹೊಂದಲು ಪ್ರಮುಖ ಕಾರಣ ಇಲ್ಲಿನ ಆಡಳಿತಕ್ಕೆ ಸರಿಯಾದ ಗಮನ ಕೊಡದೆ ಇದ್ದದ್ದು. ಆಡಳಿತರೂಢ ಪಕ್ಷಕ್ಕೆ ಹತ್ತಿರವಾದವರನ್ನು ಅಧ್ಯಕ್ಷರನ್ನಾಗಿ ನೇಮಿಸಿಕೊಂಡುದು. ಕೊನೆಯಲ್ಲಿ ಸ್ವಯಂ ನಿವೃತ್ತಿ ಯೋಜನೆಯನ್ನು ಜಾರಿ ಮಾಡಲು ರಾಜ್ಯ ಸರ್ಕಾರ ಸಹಾಯ ನೀಡುವುದರ ಬದಲಾಗಿ ಸಂಚಯಿತ ಬಂಡವಾಳದಿಂದ (Working Capital) 61 ಕೋಟಿರೂಪಾಯಿಯನ್ನು ಕಿತ್ತುಕೊಂಡು ದೈನಂದಿನ ಉತ್ಪಾದನೆ, ಮಾರುಕಟ್ಟೆಗೆ ಧಕ್ಕೆಯಾಗಿದೆ.

1936 ರಲ್ಲಿ ಬಹುರಾಷ್ಟ್ರೀಯ ಕಂಪನಿ ಜನರಲ್ ಇಲೆಕ್ಟ್ರಿಕಲ್ ಕಂಪನಿಯಿಂದ ಪಡೆದುಕೊಂಡ ಮೈಸೂರು ಲ್ಯಾಂಪ್ಸ್ ಘಟಕವನ್ನು ಪುನಃ ಖಾಸಗಿಯವರಿಗೆ ನೀಡುವ ಪ್ರಯತ್ನ ನಡೆಯುತ್ತಿದೆ. 60 ವರ್ಷಕ್ಕಿಂತಲೂ ಹಳೆಯದಾದ ಯಂತ್ರಗಳನ್ನು ಆಧುನೀಕರಿಸಿ, ಇಂದಿನ ಪರಿಸ್ಥಿತಿಗೆ ಅನುಗುಣವಾಗಿ ಉತ್ಪಾದನೆ ಹೆಚ್ಚಿಸುವ ಬದಲಾಗಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಮಹಾನಗರ ಪಾಲಿಕೆ ಇತ್ಯಾದಿ ಸಂಸ್ಥೆಗಳಿಂದ ಬಂದ ಆರ್ಡರುಗಳನ್ನು ತಿರಸ್ಕರಿಸಲಾಗಿದೆ. ಅನುಭವ ಇಲ್ಲದ ಐಎಎಸ್ ಅಧಿಕಾರಿಗಳನ್ನು ಅಧ್ಯಕ್ಷರನ್ನಾಗಿ ನೇಮಿಸಿ ಅದಕ್ಷತೆ ಹೆಚ್ಚುವಂತೆ ಮಾಡಿದೆ.

ಕಾಂಗ್ರೆಸ್-ಬಿಜೆಪಿ-ಒಂದೇ ನೀತಿ:

ಮುಂದಿನ ಐದು ವರ್ಷಗಳಲ್ಲಿ ಕರ್ನಾಟಕ, ವಿಶ್ವಬ್ಯಾಂಕ್‌ನ ಪ್ರಮುಖ ಆಕರ್ಷಣೆಯಾಗಲಿದೆ ಎಂದು ಮುಖ್ಯಮಂತ್ರಿ ಎಸ್.ಎಂ.ಕೃಷ್ಣ, ವಿಶ್ವಬ್ಯಾಂಕ್ ಅಧ್ಯಕ್ಷರ ಬೆಂಗಳೂರು ಭೇಟಿಯ ಸಂದರ್ಭದಲ್ಲಿ (ನವೆಂಬರ್ 2000) ಹೇಳಿದ್ದರು. ಮುಂದಿನ ಏಳು ವರ್ಷಗಳಲ್ಲಿ 12000 ಕೋಟಿ ರೂ. ಸಾಲ ನೀಡುವ ವಿಶ್ವಬ್ಯಾಂಕ್ ಅಧ್ಯಕ್ಷರು ಸಾರ್ವಜನಿಕ ಉದ್ದಿಮೆಗಳಿಗೆ ಯಾವುದೇ ನೆರವು ನೀಡಕೂಡದು ಎಂದು ಕಟ್ಟಾಜ್ಞೆ ಮಾಡಿರುತ್ತಾರೆ. ಮಾತ್ರವಲ್ಲದೆ ಲಾಭದಾಯಕವಾಗಿರುವ ಉದ್ದಿಮೆಯೂ ಸೇರಿದಂತೆ, ಎಲ್ಲಾ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣಗೊಳಿಸಬೇಕು ಇಲ್ಲವೇ ಮುಚ್ಚಬೇಕು ಎಂದು 'ಫರ್ಮಾನು' ಹೊರಡಿಸಿದ್ದಾರಂತೆ.

ಅಮೆರಿಕೆಯಲ್ಲಿ ಕಲಿತು, ಬೆಂಗಳೂರನ್ನು ಸಿಂಗಪುರ ಮಾಡುವ ಕನಸು ಕಾಣುತ್ತಿರುವ ಕೃಷ್ಣ, ಸೋಮನಹಳ್ಳಿಯಂತಹ ಲಕ್ಷಾಂತರ ಹಳ್ಳಿಗಳನ್ನು, ಕೋಟ್ಯಾಂತರ ಜನರನ್ನು ಮರೆತಿದ್ದಾರೆ. ಇವರ ಕಾಂಗ್ರೆಸ್ ಪಕ್ಷ ಭಾರತ ಅಲ್ಯೂಮಿನಿಯಂ ಕಂಪೆನಿಯ ಮಾರಾಟನ್ನು ವಿರೋಧಿಸುತ್ತಿದೆ. ಮಾರುತಿ ಉದ್ಯೋಗ್, ಗ್ಯಾಸ್ ಅಥಾರಿಟಿ ಮೊದಲಾದ ಸಾರ್ವಜನಿಕ ಉದ್ದಿಮೆಗಳ ಶೇರುಗಳ ಮಾರಾಟವನ್ನು ಆಕ್ಷೇಪಿಸುತ್ತದೆ. ಆದರೆ ಕರ್ನಾಟಕದಲ್ಲಿ ಸಾರ್ವಜನಿಕ ಉದ್ದಿಮೆಗಳನ್ನು ಹಂತಹಂತವಾಗಿ ನಾಶ ಮಾಡುತ್ತಿದೆ. ಹಾಗೆಯೇ ಬಿಜೆಪಿ ಕೂಡಾ ವಿರೋಧ ಪಕ್ಷವಾಗಿದ್ದಾಗ ವಿಮಾ ಖಾಸಗೀಕರಣವನ್ನು ವಿರೋಧಿಸಿತ್ತು. ಅಧಿಕಾರಕ್ಕೆ ಬಂದಾಕ್ಷಣ ವಿಮೆಯನ್ನು ಖಾಸಗೀಕರಣ ಗೊಳಿಸಿದ್ದು ಮಾತ್ರವಲ್ಲದೆ ಬ್ಯಾಂಕುಗಳನ್ನು ಖಾಸಗಿ ಮಾಲಿಕರಿಗೆ ಧಾರೆ ಎರೆದು ಕೊಡಲು ತಯಾರಾಗಿ ನಿಂತಿದೆ.

ಅತ್ಯಂತ ಲಾಭದಾಯಕವಾಗಿ ಕಾರ್ಯ ನಿರ್ವಹಿಸುತ್ತಿದ್ದ ಬಾಲ್ಕೋವನ್ನು ಅತ್ಯಂತ ಅಗ್ಗದ ಬೆಲೆಗೆ, ಲಂಡನ್‌ನಲ್ಲಿ ವಾಸ ಮಾಡುತ್ತಿರುವ, ತಿಂಗಳಿಗೊಮ್ಮೆ ಭಾರತಕ್ಕೆ ಭೇಟಿಕೊಡುವ 'ಭಾರತೀಯ' ಅನಿಲ್ ಅಗರ್‌ವಾಲ್ ಎಂಬ ಮಾರ್ವಾಡಿಗೆ ಬಿಜೆಪಿ ಸರ್ಕಾರ ಮಾರಾಟ ಮಾಡಿತ್ತು.

ಆದ್ದರಿಂದ ಬಿಜೆಪಿ-ಕಾಂಗ್ರೆಸ್ ಸರ್ಕಾರದ ನೀತಿಗಳು, ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಸಾರ್ವಜನಿಕ ಉದ್ದಿಮೆಗಳ ಉಳಿವಿಗಾಗಿ ಹೋರಾಟ ನಡೆಸುತ್ತಿರುವ ನೌಕರ-ಕಾರ್ಮಿಕರು ಈ ಕಟು ಸತ್ಯವನ್ನು ಅರಿಯುವುದು ಅತಿ ಅಗತ್ಯ.

ಇನ್ನೊಂದೆಡೆಯಲ್ಲಿ ಎಡರಂಗ ನೇತೃತ್ವದ ಪಶ್ಚಿಮ ಬಂಗಾಳ ಸರಕಾರ ಹಲವಾರು ವರ್ಷಗಳಿಂದ ಮುಚ್ಚಿದ್ದ ಕಾರ್ಖಾನೆಯನ್ನು ತೆರೆಯಲು ಸಹಾಯ ಮಾಡುತ್ತಿದೆ(ಬಾಕ್ಸ್ ನೋಡಿ). ಯಾವ ಸರಕಾರ ಯಾರ ಕಡೆಗಿದೆ ಎಂಬುದನ್ನು ಇದು ಸಾಬೀತುಗೊಳಿಸುತ್ತದೆ.

ಉದ್ದಿಮೆ ಉಳಿಸಲು ವಿವಿಧ ಹಂತಗಳ ಹೋರಾಟಕ್ಕೆ ಕರೆ:

ಮಾರ್ಚ್ 4 ರಂದು ಎಡಿಎ ರಂಗಮಂದಿರದಲ್ಲಿ ನಡೆದ ಸಮಾವೇಶವು ಅಗತ್ಯ ಬಿದ್ದರೆ 'ಕರ್ನಾಟಕ ಬಂದ್' ಸೇರಿದಂತೆ ವಿವಿಧ ಹಂತಗಳ ಹೋರಾಟಕ್ಕೆ ಕರೆ ನೀಡಿದೆ.

1. ಮಾರ್ಚ್ 13 ರಂದು ವಿವಿಧ ಕಾರ್ಮಿಕ ಸಂಘಟನೆಗಳ ಮುಖಂಡರು, ಕಾರ್ಯಕಾರಿ ಸಮಿತಿ ಸದಸ್ಯರು,.ಕಾರ್ಯಕರ್ತರು ಮುಖ್ಯಮಂತ್ರಿಯವರ ಮನೆಯ ಮುಂದೆ ಧರಣಿ ನಡೆಸಲಿದ್ದಾರೆ.
2. ರಾಜ್ಯ ಬಜೆಟ್ ಅಧಿವೇಶನದ ಸಂದರ್ಭದಲ್ಲಿ ಮೇಲೆ ಹೇಳಿದ 15 ಸಂಸ್ಥೆಗಳಿಗೆ ಸೇರಿದ ಕಾರ್ಮಿಕ - ನೌಕರರ ಹಾಗೂ ಅವರ ಕುಟುಂಬದವರ ಬೃಹತ್ ಪ್ರತಿಭಟನೆ. ಈ ಚಳುವಳಿಗೆ ಬೆಂಬಲ ನೀಡುವ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರನ್ನು ಆಹ್ವಾನಿಸುವುದು.
3. ಎರಡನೇ ಹಂತದಲ್ಲಿ ಬೆಂಗಳೂರು ನಗರ ಮತ್ತು ಆಸುಪಾಸಿನಲ್ಲಿ ವ್ಯಾಪಕ ಪ್ರಚಾರ ನಡೆಸಿ ಬೆಂಗಳೂರು ಬಂದ್ ನಡೆಸುವುದು.

ಇದಕ್ಕೂ ಕರ್ನಾಟಕ ರಾಜ್ಯ ಸರ್ಕಾರ ಪ್ರತಿಕ್ರಿಯಿಸದೇ ಹೋದಲ್ಲಿ ಬೆಂಬಲಿಸುವ ಎಲ್ಲಾ ರಾಜಕೀಯ ಪಕ್ಷಗಳೂ ಸೇರಿ 'ಕರ್ನಾಟಕ ಬಂದ್' ಸೇರಿದಂತೆ ಉಗ್ರ ಪ್ರತಿಭಟನೆ ನಡೆಸುವುದು.

ಒಟ್ಟಿನಲ್ಲಿ ಹೇಳುವುದಾದರೆ, ಕರ್ನಾಟಕ ರಾಜ್ಯದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸಿದ ಸಾರ್ವಜನಿಕ ಉದ್ದಿಮೆಗಳನ್ನು ಉಳಿಸಿಕೊಳ್ಳಲು ಎಲ್ಲಾ ಕಾರ್ಮಿಕ, ನೌಕರ ಸಂಘಟನೆಗಳು ಸರ್ವ ಪ್ರಯತ್ನ ಮಾಡುತ್ತಿವೆ. ○

ಪ.ಬಂಗಾಳ ಸರ್ಕಾರ ಏನನ್ನುತ್ತದೆ?

ಕರ್ನಾಟಕವೂ ಸೇರಿದಂತೆ ದೇಶದೆಲ್ಲೆಡೆ ಕಾರ್ಖಾನೆಗಳನ್ನು ಮುಚ್ಚಿ ಲಕ್ಷಾಂತರ ನೌಕರ ಕಾರ್ಮಿಕರನ್ನು ಬೀದಿ ಪಾಲು ಮಾಡುತ್ತಿರುವಾಗ ದುಡಿಯುವ ಜನರ ಪರವಾಗಿ ದುಡಿಯುತ್ತಿರುವ ಪಶ್ಚಿಮ ಬಂಗಾಳದ ಎಡರಂಗ ಸರಕಾರ ಪರ್ಯಾಯ ದಾರಿ ತೋರುತ್ತಿದೆ.

ಆ ರಾಜ್ಯದ ಉತ್ತರ ಪರಗಣ ಜಿಲ್ಲೆಯ ಶ್ಯಾಂ ನಗರದಲ್ಲಿರುವ ದನ್‌ಬಾರ್‌ಕಾಟನ್ ಮಿಲ್ 1987ರಲ್ಲಿ ಮುಚ್ಚಿತ್ತು. ಅದನ್ನು ತೆರೆಯಲು ಸತತ ಪ್ರಯತ್ನ ಮಾಡುತ್ತಿದ್ದಾಗ ಕೋರ್ಟು ಕಛೇರಿಗಳ ಅಡೆತಡೆಯಿಂದಾಗಿ ನಿಧಾನಗೊಂಡಿತ್ತು. ಆ ಕಾರ್ಖಾನೆಯನ್ನು ತೆರೆಯಲು ಬಂಗಾಳ ಸರಕಾರ ಮಧ್ಯಪ್ರವೇಶ ಮಾಡಿ 7 ಕೋಟಿ ರೂ. ಗಳಿಗೂ ಹೆಚ್ಚಿನ ಸಹಾಯಧನ ನೀಡಿ ಆ ಕಂಪೆನಿಯನ್ನು ತೆರೆಯಲು ಪ್ರಯತ್ನಿಸುತ್ತಿದೆ.

ಒಂದು ಸಾವಿರಕ್ಕೂ ಹೆಚ್ಚು ಕಾರ್ಮಿಕರು ದುಡಿಯುತ್ತಿರುವ ಅನ್ನಪೂರ್ಣ ಕಾಟನ್ ಮಿಲ್ ಇತ್ತೀಚೆಗೆ ಪುನರಾರಂಭಗೊಂಡಾಗ ಅಲ್ಲಿನ ಕಾರ್ಮಿಕರು, ಅವರ ಕುಟುಂಬದವರಲ್ಲದೆ ಇಡೀ ಪ್ರದೇಶದ ಜನರೇ ಹಬ್ಬವನ್ನು ಆಚರಿಸಿದರು. ಎಡರಂಗ ಸರಕಾರವು ನೀಡಿದ 1 ಕೋಟಿ 78 ಲಕ್ಷ ರೂಪಾಯಿಗಳ ಸಹಾಯದಿಂದ ಅನ್ನಪೂರ್ಣ ಹತ್ತಿಗಿರಣಿ ಪುನರಾರಂಭಗೊಂಡಾಗ ಜನ ಹುಚ್ಚೆದ್ದು ಕುಣಿದರು. ಜನರಿಂದ ಆಯ್ಕೆಯಾದ ಸರಕಾರದ ಜನಪರ ನೀತಿಗಾಗಿ ಹರುಷದಿಂದ ಸ್ವಾಗತಿಸಿದರು.

ಇನ್ನೂ ಹಲವಾರು ಕಾರ್ಖಾನೆಗಳನ್ನು ಪುನರಾರಂಭಿಸಲು ಸರಕಾರ ಕ್ರಮ ಕೈಗೊಳ್ಳುತ್ತಿದೆ.

ಕರ್ನಾಟಕದಲ್ಲಿ

ಇದಕ್ಕೆ ವಿರುದ್ಧವಾದ ವ್ಯವಸ್ಥೆ ಕರ್ನಾಟಕದಲ್ಲಿ ಜರುಗುತ್ತಿದೆ. ಸ್ವತಂತ್ರಪೂರ್ವದಲ್ಲೇ ಸಹಕಾರಿ ಕ್ಷೇತ್ರದಲ್ಲಿ ಹಲವಾರು ಹತ್ತಿಗಿರಣಿಗಳು ಸ್ಥಾಪಿತಗೊಂಡು ಇದೀಗ ಅವಸಾನ ಹೊಂದುತ್ತಿವೆ.

ನೂರು ವರ್ಷಕ್ಕೂ ಹೆಚ್ಚು ಇತಿಹಾಸ ಉಳ್ಳ ಹುಬ್ಬಳ್ಳಿಯ ಮಹಾದೇವ ಜವಳಿಗಿರಣಿ ಕಾರ್ಮಿಕರು ಬೀದಿಪಾಲಾಗಿರುವುದು ಮಾತ್ರವಲ್ಲದೆ, 4-5 ವರ್ಷಗಳಿಂದ ತಮಗೆ ಬರಬೇಕಾದ ಗ್ರಾಚುಯಿಟಿ, ತುಟ್ಟಿಭತ್ತೆ, ಇತ್ಯಾದಿಗಳಿಗಾಗಿ ಪರಿತಪಿಸುತ್ತಿದ್ದಾರೆ. 80 ಕೋಟಿರೂ ಆಸ್ತಿಯನ್ನು ಆ ಗಿರಣಿ ಹೊಂದಿದ್ದರೂ ಕಾರ್ಮಿಕರಿಗೆ ನೀಡಬೇಕಾದ 12-14 ಕೋಟಿ ಬಾಕಿಯನ್ನು ತೀರಿಸಲಾಗಿಲ್ಲ.

ಇದೇ ದುಡಿಯುವ ಜನರ ಸರಕಾರಕ್ಕೂ ದುಡಿಸಿಕೊಳ್ಳುವ ಜನರ ಸರಕಾರಕ್ಕೂ ಇರುವ ಅದಮ್ಯ ವ್ಯತ್ಯಾಸ.

ಬಜೆಟ್ಟಿನ ರಾಜಕೀಯ ಅರ್ಥಶಾಸ್ತ್ರ

ಸೀತಾರಾಂ ಯೆಚೂರಿ

ಬಜೆಟ್ ಬಗ್ಗೆ ರಾಜಕೀಯ ಬೇಡ ಎಂಬ ಉಪದೇಶ ಕೇಳಲಾಗುತ್ತಿದೆ. ಇದು ರಾಜಕೀಯವಿಲ್ಲದ ಬಜೆಟ್ಟೇ? ಹಾಗಾದರೆ ಬಜೆಟ್‌ನ ರಾಜಕೀಯ ಏನು?

ಈಗಿನ ಬಜೆಟ್ಟನ್ನು ಹಾಡಿ ಹೊಗಳಲಾಗುತ್ತಿದೆ. ಇದರಲ್ಲಿ ಹೊಸತೇನಿದೆ? ಏನಿಲ್ಲ, ಆಶ್ಚರ್ಯವೂ ಇಲ್ಲ. ಈಹಿಂದೆ 1997-98 ರಲ್ಲಿ ಪಿ.ಚಿದಂಬರಂರವರ 'ಕನಸಿನ ಬಜೆಟ್' ಬಂದಾಗಲೂ ಹೀಗೆ ಆಗಿತ್ತು. ಅದು ಅರ್ಥವಿಲ್ಲದ ಭಾವೋದ್ರೇಕ - ಮರ ನೋಡಿ ಕಾಡು ಕಾಡು ಎಂದಂತೆ ಎಂದು ನಾವಾಗ ಹೇಳಿದ್ದೆವು. ವರ್ಷಾಂತ್ಯದ ವೇಳೆಗೆ ಅದು ಎಲ್ಲರಿಗೂ ಅರ್ಥವಾಯಿತು. ಏಕೆಂದರೆ ಕಂಪನಿ ವಲಯದಲ್ಲಿ ಹೊಸ ಹೂಡಿಕೆಯೇನೂ ಕಾಣಲಿಲ್ಲ. ಕೈಗಾರಿಕಾ ಬೆಳವಣಿಗೆ ಹೆಚ್ಚಲಿಲ್ಲ, ರಾಷ್ಟ್ರೀಯ ಉತ್ಪನ್ನದ ವೃದ್ಧಿ ದರದಲ್ಲೂ ತೀವ್ರ ಇಳಿತ ಕಂಡಿತು. ಇಲ್ಲಿರುವ ಸರಳ ಸಂಗತಿಯೆಂದರೆ ಕಂಪನಿ ವಲಯಕ್ಕೆ, ಬಂಡವಾಳಿಗರಿಗೆ ತೆರಿಗೆ ಕಡಿತ, ಬಕ್ಷೀಸುಗಳನ್ನು ಕೊಟ್ಟು ಆದಾಯ ಸಂಗ್ರಹಕ್ಕೆ ಪರೋಕ್ಷ ತೆರಿಗೆಗಳನ್ನು ಹೆಚ್ಚಿಸಿ ಜನಸಾಮಾನ್ಯರ ಮೇಲೆ ಹೊರೆ ಹಾಕುವ ಕಾರ್ಯತಂತ್ರ ಯಶಸ್ವಿಯಾಗುವುದಿಲ್ಲ, ಬದಲಿಗೆ ಆರ್ಥಿಕದಲ್ಲಿ ಒಟ್ಟು ಬೇಡಿಕೆ ಸಂಕುಚಿತಗೊಂಡು ಆರ್ಥಿಕ ಹಿಂಜರಿತ ಇನ್ನಷ್ಟು ಹೆಚ್ಚುತ್ತದೆ.

ಈ ತಂತ್ರ ಮೊದಲು ಅನುಸರಿಸಿದಾಗ ದುರಂತದಲ್ಲಿ ಕೊನೆಗೊಂಡಿತು. ಎರಡನೇ ಬಾರಿ ಅವಲಂಬಿಸಿದಾಗ ಪ್ರಹಸನವಾಗಿ ಬಿಡುತ್ತದೆ. ಜನಗಳ ಮತ್ತು ದೇಶದ ಮೇಲೆ ಮಾತ್ರ ಅಭೂತಪೂರ್ವ ದುಷ್ಪರಿಣಾಮ ಬೀರುತ್ತದೆ. **ಮಾಧ್ಯಮಗಳಲ್ಲಿ, ಕಂಪನಿ ವಲಯದಲ್ಲಿ ಹಿಗ್ಗಿನ ಹೊಳೆ ಸಹಜವೇ, ಏಕೆಂದರೆ ಈ ಬಜೆಟ್ ಕಂಪನಿ ವಲಯಕ್ಕಾಗಿ, ಕಂಪನಿ ವಲಯದಿಂದ ಕಂಪನಿ ವಲಯ ಮುಂದಿಟ್ಟಿರುವ ಬಜೆಟ್.** ತೆರಿಗೆ ಕಡಿತಗಳ ಮೂಲಕ 5500 ಕೋಟಿ ರೂ.ಗಳ ಬಕ್ಷೀಸು. ಸಣ್ಣ ಉಳಿತಾಯಗಾರರ ಹೊಟ್ಟೆಗೆ ಹೊಡೆದು ಬಡ್ಡಿ ದರಗಳಲ್ಲಿ ಇಳಿತ, ಕಾರ್ಮಿಕರನ್ನು ಮನಸೋ ಇಚ್ಛೆ ಸೇರಿಸಿಕೊಳ್ಳುವ, ಮನೆಗೆ ಕಳಿಸುವ ಧೋರಣೆಯ ಭರವಸೆ, ಸಾರ್ವಜನಿಕ ವಲಯವನ್ನು ಅಗ್ಗ ದರದಲ್ಲಿ ಮಾರುವ ಭರವಸೆ - ಕಂಪನಿ ವಲಯಕ್ಕೆ ಮತ್ತು ಅದನ್ನೇ ಹೆಚ್ಚೆಚ್ಚಾಗಿ ಅವಲಂಬಿಸಿರುವ ಮಾಧ್ಯಮಗಳಿಗೆ ಇನ್ನೇನು ತಾನೇ ಬೇಕು?

ಶ್ರೀಮಂತರಿಗೆ ಸಬ್ಸಿಡಿ!

ಸಬ್ಸಿಡಿಗಳಲ್ಲಿ ಎರಡು ವಿಧ. ಒಂದು, ಸರಕಾರ ತನ್ನ ಆದಾಯದಿಂದ ಖರ್ಚು ಮಾಡುವುದು, ಇನ್ನೊಂದು ಸರಕಾರ ತಾನು ವಸೂಲಿ ಮಾಡಬೇಕಾದ ಆದಾಯವನ್ನು ವಸೂಲಿ ಮಾಡದಿರಲು ನಿರ್ಧರಿಸುವುದು. ತೆರಿಗೆ ಕಡಿತಗಳು, ರಿಯಾಯ್ತಿಗಳು ಈ ಎರಡನೇ ಬಗೆಯವು. ಅಂದರೆ ಬಡವರಿಗೆ ಸಬ್ಸಿಡಿಗಳನ್ನು ಇಳಿಸಿ ಶ್ರೀಮಂತರಿಗೆ ಸಬ್ಸಿಡಿಗಳನ್ನು ಹೆಚ್ಚಿಸಲಾಗಿದೆ. ಈ ಬಜೆಟ್ಟಿನ ವರ್ಗಸ್ವರೂಪ ಇದರಿಂದ ಸ್ಪಷ್ಟ.

ಶ್ರೀಮಂತರಿಗೆ ಈ ಸಬ್ಸಿಡಿಗಳನ್ನು ನೀಡಿರುವುದು ಜನಸಾಮಾನ್ಯರ ಶೋಷಣೆಯನ್ನು ತೀವ್ರಗೊಳಿಸಿಯೇ. **ಸಾರ್ವಜನಿಕ ವಿತರಣಾ ವ್ಯವಸ್ಥೆ ಅಥವಾ ರೇಷನ್ ವ್ಯವಸ್ಥೆಯನ್ನು ವಿಕೇಂದ್ರೀಕರಿಸಲಾಗಿದೆ ಎಂಬುದು ಶುದ್ಧ ಮೋಸ.** ಆಗಲೇ ಹಣದ ಮುಗ್ಗಟ್ಟಿನಲ್ಲಿರುವ ರಾಜ್ಯ ಸರ್ಕಾರಗಳು ದೂರದ ಮಾರುಕಟ್ಟೆಗಳಿಂದ ಆಹಾರ ಧಾನ್ಯ ಸಂಗ್ರಹಿಸಿ, ತಮ್ಮ ಖರ್ಚಲ್ಲೇ ಸಾಗಿಸಿ ರೇಶನ್ ವ್ಯವಸ್ಥೆಯ ಮೂಲಕ ಹಂಚಬಹುದು ಎನ್ನುವ ಮಾತು ಈ ವ್ಯವಸ್ಥೆಯನ್ನು ಖಂಡಿತಾ ಕಳಚಿ ಹಾಕುವ ಸೂಚನೆ. ಅದೇ ರೀತಿ ರೈತರಿಂದ ಆಹಾರ ಧಾನ್ಯ ಸಂಗ್ರಹಿಸಲು ಕನಿಷ್ಟ ಬೆಂಬಲ ಬೆಲೆಯನ್ನು ಸುಮಾರಾಗಿ ರದ್ದು ಮಾಡಿಯೇ ಬಿಡಲಾಗಿದೆ. ಈ ಕ್ರಮಗಳ ಮೂಲಕ ಇವನ್ನು ಅವಲಂಬಿಸಿದ ಕೋಟ್ಯಾಂತರ ಜನಗಳು ಮತ್ತು ಕೃಷಿಯ ಮೇಲೆ ಒಂದು ಬೃಹತ್ ಆಘಾತ ನೀಡಲಾಗಿದೆ.

ದೇಶದ ಬಹಳ ಕಡೆ ಬರ ಪರಿಸ್ಥಿತಿಯಿರುವಾಗ ರೈತರ ಆತ್ಮಹತ್ಯೆಗಳು ಹೆಚ್ಚುತ್ತಿರುವಾಗ, ಕೃಷಿ ಉತ್ಪಾದನೆಯ ಹೆಚ್ಚಳ ದರ ಸತತ ಎರಡನೇ ವರ್ಷ ಇಳಿಮುಖವಾಗಿರುವಾಗ ಸರಕಾರ ಈ ಕ್ರಮಗಳನ್ನು ಕೈಗೊಳ್ಳುತ್ತಿದೆ! ಆಹಾರ ಧಾನ್ಯ ಉತ್ಪಾದನೆಯ ಹೆಚ್ಚಳ ದರ ಮೊತ್ತ ಮೊದಲ ಬಾರಿಗೆ ಜನಸಂಖ್ಯೆ ಹೆಚ್ಚಳದ ದರಕ್ಕಿಂತ ಕಡಿಮೆಯಾಗಿರುವ ಸಂದರ್ಭದಲ್ಲೇ ಈ ಕ್ರಮ ಕೈಗೊಳ್ಳಲಾಗುತ್ತಿದೆ ಎಂಬುದರ ಅರ್ಥವೇನು? ನಮ್ಮ ದೇಶದ ಆಹಾರ ಭದ್ರತೆಗೆ ಸಂಚಕಾರ ತಂದು ಈ ಬಜೆಟ್ಟಿನಲ್ಲಿ ಶ್ರೀಮಂತರಿಗೆ ಭಾರೀ ಭಕ್ಷೀಸು ನೀಡಲಾಗಿದೆ ಎಂಬುದೇ ಇದರ ಅರ್ಥವಲ್ಲವೇ?


ಉದಾರೀಕರಣದ ಅಜೆಂಡಾದೊಂದಿಗೆ ಕೋಮುವಾದಿ ಅಜೆಂಡಾದ ವಿಲೀನ!

ಆಮದುಗಳನ್ನು ಮುಕ್ತಗೊಳಿಸಿರುವುದರಿಂದ **ಬೆಲೆಗಳನ್ನು 'ರಕ್ಷಿಸಲು' ಆಮದು ಸುಂಕಗಳನ್ನು ಹೆಚ್ಚಿಸಲಾಗಿದೆ ಎಂಬುದು ಕೇವಲ ಕಣ್ಣೊರೆಸುವ ತಂತ್ರ.** ಉದಾಹರಣೆಗೆ ಆಮದು ಸುಂಕ ಹೆಚ್ಚಳ ನಂತರವೂ ಆಮದಾದ ಕೊಬ್ಬರಿ ಬೆಲೆ ಟನ್ನಿಗೆ 17,600 ರೂ. ಆಗುತ್ತದೆ. ಆದರೆ ಈಗಿನ ಮಾರುಕಟ್ಟೆ ಬೆಲೆ 21,500 ರೂ. ಇದೆ.

ಉದ್ಯೋಗವಕಾಶಗಳಲ್ಲೂ ಕಡಿತ

ಕೃಷಿಯ ನಂತರ ದೇಶಗಳಲ್ಲಿ ಜನರಿಗೆ ಅತಿಹೆಚ್ಚು ಉದ್ಯೋಗ ಒದಗಿಸಿರುವ ವಲಯವೆಂದರೆ ಸಣ್ಣ ಉದ್ದಿಮೆಗಳ ವಲಯ. ಇಲ್ಲಿ ಚರ್ಮದ ಸರಕುಗಳು, ಆಟಿಕೆಗಳು ಇತ್ಯಾದಿ ಸಣ್ಣ ಉದ್ದಿಮೆ ವಲಯಕ್ಕೆ ಮೀಸಲಾಗಿದ್ದ 14 ಕೈಗಾರಿಕೆಗಳನ್ನು ಈಗ ಮುಕ್ತಗೊಳಿಸಲಾಗಿದೆ. ಅಂದರೆ ಮೀಸಲಾತಿಯನ್ನು ತೆಗೆದುಹಾಕಲಾಗಿದೆ. ಈ ಮೂಲಕ **ಬಜೆಟ್ ಸಣ್ಣ ಉದ್ದಿಮೆ ವಲಯವನ್ನೂ ಧ್ವಂಸಗೊಳಿಸಿದೆ.**

ಅಧಿಕಾರಶಾಹಿಯನ್ನು ಕುಗ್ಗಿಸುವ ಹೆಸರಲ್ಲಿ ಮುಂದಿನ ಐದು ವರ್ಷಗಳಲ್ಲಿ **ಪ್ರತಿವರ್ಷ 66000 ಉದ್ಯೋಗವಕಾಶಗಳನ್ನು ಕಡಿತ ಮಾಡಲಾಗುತ್ತದೆ. ಅತ್ತ ನೇಮಕಾತಿಯ ಮೇಲೆ ನಿರ್ಬಂಧವೂ ಮುಂದುವರೆಯುತ್ತದೆ;** ರಾಷ್ಟ್ರೀಕೃತ ಬ್ಯಾಂಕುಗಳ ನೇಮಕಾತಿ ಮಂಡಳಿಯನ್ನು ರದ್ದು ಮಾಡಲಾಗಿದೆ.



ಜತೆಗೆ ರಿಟ್ರೆಂಚ್‌ಮೆಂಟ್ ಮತ್ತು ಲೇ ಆಫ್‌ಗಳನ್ನು ಸುಲಭಗೊಳಿಸಲು ಕಾರ್ಮಿಕ ಕಾನೂನುಗಳಲ್ಲಿ ಬದಲಾವಣೆಗಳ ಪ್ರಸ್ತಾಪವಿದೆ. 1999 ರಲ್ಲಿ ಉದ್ಯೋಗವಕಾಶ ಸಾರ್ವಜನಿಕ ವಲಯದಲ್ಲಿ ಹೆಚ್ಚಲೇ ಇಲ್ಲ. ಖಾಸಗೀ ವಲಯದಲ್ಲಿ ಕೇವಲ ಶೇ 0.11 ಹೆಚ್ಚಿತು ಎಂದು ಸರಕಾರದ ಆರ್ಥಿಕ ಸರ್ವೆಕ್ಷಣೆಯೇ ಒಪ್ಪಿಕೊಂಡಿದೆ. ಆದರೆ ಈ ಬಜೆಟ್ ಉದ್ಯೋಗವಕಾಶಗಳನ್ನು ಇನ್ನಷ್ಟು ಕಡಿತ ಮಾಡಲು ಮುಂದಾಗಿದೆ.

ಈ ರೀತಿ ಉದ್ಯೋಗವಕಾಶ ಕಡಿತವನ್ನು ಒಂದು ವಿಚಿತ್ರ ತರ್ಕದ ಮೂಲಕ ಸಮರ್ಥಿಸಿಕೊಳ್ಳಲಾಗುತ್ತಿದೆ. ರಿಟ್ರೆಂಚ್‌ಮೆಂಟ್, ಲೇ ಆಫ್, ಉದ್ಯೋಗ ಕಡಿತಗಳಿಂದ ಆರ್ಥಿಕ ಬೆಳವಣಿಗೆಗೆ ಪ್ರೋತ್ಸಾಹ ಸಿಗುತ್ತದಂತೆ. ಈ ಆರ್ಥಿಕ ಬೆಳವಣಿಗೆ ಉದ್ಯೋಗವಕಾಶ ಸೃಷ್ಟಿಗೆ ಅಗತ್ಯ ತಾನೆ? ಆದ್ದರಿಂದ ಭವಿಷ್ಯದಲ್ಲಿ ಉದ್ಯೋಗವಕಾಶ ಸೃಷ್ಟಿಸಲು ಇಂದು ನಿರುದ್ಯೋಗ ಸೃಷ್ಟಿಸಬೇಕಾಗಿದೆ!

ನಿರುದ್ಯೋಗಿಗಳಾಗದೆ ಉದ್ಯೋಗದಲ್ಲಿ ಉಳಿಯುವವರ ಗತಿಯಾದರೂ ಏನು? ಅವರ ಜೀವನ ಪರಿಸ್ಥಿತಿಯಲ್ಲಿ ತೀವ್ರವಾಗಿ ಹದಗೆಡುತ್ತದೆ. ಏಕೆಂದರೆ ಶ್ರೀಮಂತರಿಗೆ 5500 ಕೋಟಿ ರೂ. ಭಕ್ಷೀಸು ನೀಡಿದ ಈ ಬಜೆಟ್ಟಿನಲ್ಲಿ ಸರಕಾರ ಸಂಗ್ರಹಿಸಬೇಕೆಂದಿರುವ ಬಹುಪಾಲು ಆದಾಯವನ್ನು ಪರೋಕ್ಷ ತೆರಿಗೆಗಳಿಂದ ಅಂದರೆ ಅಬಕಾರಿ ಸುಂಕಗಳಿಂದ ಸಂಗ್ರಹಿಸುವ ಪ್ರಸ್ತಾವಗಳನ್ನು ಇಟ್ಟಿದೆ. ಅಂದರೆ ಕಾರು, ಹಗುರ ಪೇಯಗಳು ಮುಂತಾದ ನಗರಗಳ ಬಳಕೆ ಸರಕುಗಳ ಮೇಲೆ ಸುಂಕ ಇಳಿಸಿದರೆ, ಸಕ್ಕರೆ, ಬೆಂಕಿಪೊಟ್ಟಣ, ಚಹಾ, ಕಾಫಿ, ಹಲ್ಲಿನ ಬ್ರಶ್, ಬಲ್ಬ್, ಬಿಸ್ಕತ್ತು ಇತ್ಯಾದಿ ಸಾಮೂಹಿಕ ಬಳಕೆಯ ಸರಕುಗಳ ಮೇಲೆ ಸುಂಕ ಏರಿಸಲಾಗಿದೆ. **ಸಿರಿವಂತರಿಗೆ ತೆರಿಗೆ ಕಡಿತ, ಬೆಲೆ ಇಳಿಕೆಗೆ ಹಣ ಕೊಡಬೇಕಾದವರು ಭಾರತೀಯ ಜನಸಾಮಾನ್ಯರು.**

ಜತೆಗೆ ಡೀಸೆಲ್‌ನ ಮೇಲಿನ ಸುಂಕವನ್ನು ಏರಿಸಲಾಗಿದೆ. ಅಂದರೆ ಸರ್ವತ್ರ ಬೆಲೆ ಯೇರಿಕೆಗೆ ಆಹ್ವಾನ. ಇಂತಹ ಸನ್ನಿವೇಶದಲ್ಲಿ ಬಹುಪಾಲು ಸಂಬಳದಾರ ವರ್ಗಗಳ ಖರೀದಿ ಸಾಮರ್ಥ್ಯ ಕುಸಿಯುತ್ತಿದೆ. ಮೇಲ್ಮಧ್ಯಮ ವರ್ಗವನ್ನು ಇದು ತಟ್ಟಿದೆ. ಅಂದರೆ ಒಟ್ಟಾರೆಯಾಗಿ ದೇಶದೊಳಗಿನ ಬೇಡಿಕೆ ಕುಗ್ಗಿ, ಆರ್ಥಿಕ ಹಿಂಜರಿತ ತೀವ್ರಗೊಳ್ಳಲಿದೆ.

ಉದಾರೀಕರಣದ ಹೂರಣ

ಇದೀಗ ಉದಾರೀಕರಣದ ಸಿದ್ಧಾಂತ ಬಯಲಾಗುತ್ತಿರುವ ವಿಧಾನ. ಅಂದರೆ ಜನಗಳ ಪಾಲಿಗೆ ಕಮ್ಮಿ ಸರ್ಕಾರ, ಬಂಡವಾಳದ ಪಾಲಿಗೆ ಜಾಸ್ತಿ ಸರ್ಕಾರ. ಜನಗಳ ಕಲ್ಯಾಣಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಸರಕಾರ ಬಂಡವಾಳದ ಸೂಪರ್ ಲಾಭಗಳಿಗೆ ಅವಕಾಶ ಮಾಡಿಕೊಡಲು ಹೆಚ್ಚೆಚ್ಚು ಮುತುವರ್ಜಿ ವಹಿಸುತ್ತದೆ. ಶಿಕ್ಷಣ, ಆರೋಗ್ಯ, ಆಹಾರ ಭದ್ರತೆ, ಸಾಮಾಜಿಕ ಮತ್ತು ಆರ್ಥಿಕ ಮೂಲರಚನೆಗಳಿಗೆ ಮೀಸಲಿಟ್ಟ ಹಣದ ಪ್ರಮಾಣ 1993-94 ರಿಂದ ಸತತವಾಗಿ ಇಳಿಯುತ್ತಿದೆ. 1993-94 ರಲ್ಲಿ ಅದು ಒಟ್ಟು ರಾಷ್ಟ್ರೀಯ ಉತ್ಪನ್ನದ 18.7 ಶೇ ಇತ್ತು. 2000-01 ರಲ್ಲಿಇದು 17.8 ಶೇ ಕ್ಕೆ ಇಳಿದಿದೆ.

ಇನ್ನು ಆತಂಕದ ಸಂಗತಿಯೆಂದರೆ ಆರ್ಥಿಕದಲ್ಲಿ ಬಂಡವಾಳ ಸೃಷ್ಟಿಯ ದರವನ್ನು ಒಟ್ಟು ರಾಷ್ಟ್ರೀಯ ಉತ್ಪನ್ನದ 5.8 ಶೇ ದಿಂದ 3.9 ಶೇ ಕ್ಕೆ ಇಳಿದಿದೆ. 2000-01 ರ ಬಜೆಟ್ ಅಂದಾಜುಗಳ ಪ್ರಕಾರ ಒಂದು ಶೇಕಡಾ ಇಳಿಕೆಯೆಂದರೆ 20,000 ಕೋಟಿ ರೂ.ಗಳಷ್ಟಾಗುತ್ತದೆ!

ಅಂದರೆ ಜನಗಳ ನಗ್ನ ಶೋಷಣೆ ತೀವ್ರಗೊಳ್ಳುತ್ತಿದೆಯಷ್ಟೇ ಅಲ್ಲ ದೇಶದ ಆರ್ಥಿಕ ಬೆಳವಣಿಗೆಗೆ ಮತ್ತು ಆರ್ಥಿಕ ಆರೋಗ್ಯಕ್ಕೆ ಅನಿವಾರ್ಯವಾದ ಬಂಡವಾಳ ಶೇಖರಣೆಯನ್ನು ವ್ಯವಸ್ಥಿತವಾಗಿ ಧ್ವಂಸ ಮಾಡಲಾಗುತ್ತಿದೆ.

ಹಣಕಾಸು ಮಂತ್ರಿಗಳ ಅಬ್ಬರದ ಮಾತುಗಳಿಗೆ ಬಜೆಟ್ಟಿನಲ್ಲಿ ಆಧಾರಗಳಿಲ್ಲ. ಉದಾಹರಣೆಗೆ **ವಿದ್ಯಾರ್ಥಿಗಳಿಗೆ ಸಾಲದ ಅವಕಾಶ ಒದಗಿಸಿ ಉನ್ನತ ಶಿಕ್ಷಣಕ್ಕೆ ಆದ್ಯತೆ ನೀಡಲಾಗಿದೆ ಎಂಬ ಭಾವನೆ ಹಣಕಾಸು ಮಂತ್ರಿಗಳ ಭಾಷಣದಿಂದ ಮೂಡುತ್ತದೆ. ಆದರೆ ವಾಸ್ತವವಾಗಿ ಅದು 948.4 ಕೋಟಿ ರೂ.ಗಳಷ್ಟು. ಅಂದರೆ ಶೇ. 36.6 ಕಡಿತಗೊಂಡಿದೆ!**

ಈ ಉದಾರೀಕರಣದ ಅಜೆಂಡಾ ಯಾವುದೇ ಹಿಂಜರಿಕೆಯಿಲ್ಲದೆ ಭಾರತೀಯ ಆರ್ಥಿಕ ಆಸ್ತಿಗಳನ್ನು, ಆರ್ಥಿಕ ಸಂಪನ್ಮೂಲಗಳನ್ನು ಮತ್ತು ಮಾರುಕಟ್ಟೆಗಳನ್ನು ವಹಿಸಿಕೊಳ್ಳಲು ವಿದೇಶೀ ಬಂಡವಾಳಕ್ಕೆ ಅನುಕೂಲ ಕಲ್ಪಿಸುತ್ತದೆ. ಈ ಬಜೆಟ್ ದೇಶಿ ವಸ್ತುಗಳ ಬೆಲೆ ಹೆಚ್ಚಿಸುವ ಅಬಕಾರಿ ಸುಂಕಗಳ ಮೂಲಕ 4677 ಕೋಟಿ ರೂ. ಸಂಗ್ರಹಿಸಿ, ವಿದೇಶಿ ಸರಕುಗಳಿಗೆ ಅನುಕೂಲ ಮಾಡಿಕೊಡಲು 2182 ಕೋಟಿ ರೂ. ಗಳಷ್ಟು ಆಮದು ಸುಂಕ ಇಳಿಸಿದೆ. ಆಮದು ಸುಂಕಕ್ಕಿಂತ ಅಬಕಾರಿ ಸುಂಕದ ಪ್ರಮಾಣ ಹೆಚ್ಚಿಸುವುದೆಂದರೆ ವಿದೇಶೀ ಉತ್ಪಾದಕರಿಗಿಂತ ದೇಶೀ ಉತ್ಪಾದಕರಿಗೆ ಹೆಚ್ಚು ತೆರಿಗೆ ಹಾಕುವುದು! ಇದು ದೇಶೀ ಕೈಗಾರಿಕೆಗಳನ್ನು ನಾಶ ಮಾಡಿ ಆರ್ಥಿಕ ಹಿಂಜರಿತವನ್ನು ಹೆಚ್ಚಿಸುವುದಲ್ಲದೆ ಭಾರತೀಯ ಆರ್ಥಿಕದ ಮೇಲೆ ಹೆಚ್ಚೆಚ್ಚು ನಿಯಂತ್ರಣ ಪಡೆಯಲು ವಿದೇಶಿ ಬಂಡವಾಳಕ್ಕೆ ಅನುಕೂಲ ಕಲ್ಪಿಸುತ್ತದೆ; ಅದೇ ರೀತಿ **ಭಾರತೀಯ ಕೃಷಿಯನ್ನು ವ್ಯವಸ್ಥಿತವಾಗಿ ಬುಡಮೇಲು ಮಾಡಿ ವಿಪರೀತ ಸಬ್ಸಿಡಿಗಳಿಸಿರುವ ಅಮೆರಿಕಾ, ಯುರೋಪಿನ ಕೃಷಿ ಉತ್ಪನ್ನಗಳು ವಹಿಸಿಕೊಳ್ಳಲು ಅನುವು ಮಾಡಿಕೊಡುತ್ತಿದೆ.**

ಬಂಡವಾಳಿಗರ ಅತ್ಯುತ್ತಮ ಏಜೆಂಟ್!

ಈ ಉದಾರೀಕರಣ ಅಜೆಂಡಾದ ಮೂಲಕ ವಿದೇಶೀ ಬಂಡವಾಳಕ್ಕೆ ಮತ್ತು ಭಾರತೀಯ ದೊಡ್ಡ ವ್ಯಾಪಾರಸ್ಥರಿಗೆ ವಾಜಪೇಯಿ ಸರಕಾರ ನೀಡುತ್ತಿರುವ ಸಂಕೇತವೆಂದರೆ 'ನೋಡಿ, ನಾವೇ ನಿಮ್ಮ ಅತ್ಯುತ್ತಮ ಏಜೆಂಟರು' ಪ್ರತಿಯಾಗಿ ಅಧಿಕಾರದಲ್ಲಿ ಮುಂದುವರೆಯುವ ನಮಗೆ ಬೆಂಬಲ ಕೊಡಿ! ಅತ್ತ ಜನಸಮಾನ್ಯರಿಗೆ ನೀಡುವ ಸಂಕೇತವೆಂದರೆ ಪ್ರತಿಭಟನೆ ಏನಾದರೂ ಮಾಡಿದರೆ ನಿರ್ದಯವಾಗಿ ಹತ್ತಿಕ್ಕುತ್ತೇವೆ, ಜೋಕೆ! ಜತೆಗೆ ಜನಗಳ ಗಮನವನ್ನು ಬೇರೆಡೆ ಸೆಳೆಯಲು ಕೋಮು ಭಾವೋದ್ರೇಕವನ್ನು ಬಡಿದೆಬ್ಬಿಸಲಾಗುತ್ತದೆ. **ಒಂದೆಡೆ ಅಭೂತಪೂರ್ವ ಆರ್ಥಿಕ ಧಾಳಿ, ಇನ್ನೊಂದೆಡೆ ಕೋಮುವಾದಿ ಧ್ರುವೀಕರಣದ ಪ್ರಯತ್ನ.** ಈ ಮೂಲಕ ನಮ್ಮ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ನೆಲೆಗಟ್ಟನ್ನು ನಾಶ ಮಾಡುವುದಷ್ಟೇ ಅಲ್ಲ, ಉದಾರೀಕರಣಕ್ಕೆ ಹೆಚ್ಚುತ್ತಿರುವ ಪ್ರತಿರೋಧವನ್ನು ಅಸ್ತವ್ಯಸ್ತಗೊಳಿಸುವುದು. ಹೀಗೆ **ಉದಾರೀಕರಣದ ಅಜೆಂಡಾದೊಂದಿಗೆ ಆರ್‌ಎಸ್‌ಎಸ್ - ಬಿಜೆಪಿಯ ಕೋಮು ವಾದಿ ಅಜೆಂಡಾವನ್ನು ವಿಲೀನಗೊಳಿಸುವ ಪ್ರಯತ್ನವೇ ಈ ಬಜೆಟ್ಟಿನ ರಾಜಕೀಯ ಅರ್ಥಶಾಸ್ತ್ರ.** ○

ಬಜೆಟ್ 2001

ಸಾವು ಹೊಕ್ಕ ಮನೆಯಲ್ಲಿ ಹಾಕಿದ ಹಿಗ್ಗಿನ ಕೇಕೆಯಂತಿತ್ತು

"ಅಹ್ಹಾ ! ಓಹೋ!! ಎಂಥ ಅದ್ಭುತ!" ಸಂತೋಷದ ಸುಗ್ಗಿ ಸೂರೆಯಾಗುತ್ತಿದೆಲ್ಲಾ ! ಹರ್ಷದ ಹೊಳೆಯೇ ಹರಿಯುತ್ತಿದೆಯಲ್ಲಾ!" "ಅಯ್ಯೋ, ಇಷ್ಟೊಂದು ಸಂತೋಷ ಇರಬಾರದಪ್ಪ, ತಡೆಯುವುದಕ್ಕಾಗುವುದಿಲ್ಲ ಸ್ವಲ್ಪ ಕಡಿಮೆ ಸಂತೋಷದ ಸಮಾಚಾರ ಏನಾದರೂ ಇದ್ದರೆ ಹೇಳಿ!"

ಸಕ್ಕರೆಯಲ್ಲಿ ಅದ್ದಿದ ಇಂತಹ ಹಲವು ಮಾತುಗಳು ಸುರಿಮಳೆಯಾಗುತ್ತಿತ್ತು ಟಿ.ವಿ. ಗಳಲ್ಲಿ ಫೆ.28ರ ಸಂಜೆ. ಯಾರಿಗಪ್ಪಾ ಈ ಸಂತೋಷದ ಸುಗ್ಗಿ? ನಮ್ಮ ದೇಶದ ದೊಡ್ಡ ದೊಡ್ಡ ಕೈಗಾರಿಕಾ ಮಾಲೀಕರು ಅವರ ಸಂಘಗಳ ಮುಖ್ಯಸ್ಥರು ಅಂದು ಕುಣಿದಾಡಿದ್ದೂ ಕುಣಿದಾಡಿದ್ದೇ. ಬಿಜೆಪಿ



ಕೂಟದ ಕೇಂದ್ರ ಸರ್ಕಾರದ ಪರವಾಗಿ ಅರ್ಥಸಚಿವ ಯಶವಂತ ಸಿನ್ಹಾ ಲೋಕಸಭೆಯಲ್ಲಿ ಮಂಡಿಸಿದ ಬಜೆಟ್‌ನ ಸಂಗತಿಗಳನ್ನು ನೋಡಿ ಅವರಿಗಾದ ಹಿಗ್ಗನ್ನು ಈ ಹೋಲ್‌ಸೇಲ್ (ಸಗಟು) ವ್ಯಾಪಾರ, ವಹಿವಾಟುದಾರರು ಟಿ.ವಿ.ಮೂಲಕ ಹೀಗೆ ರೀಟೈಲಾಗಿ (ಕಿರುಕುಳವಾಗಿ) ಕಾಸಿಲ್ಲದೆ

ಪತ್ರಿಕೆ, ಟಿ.ವಿ.ಗಳ ನಲಿದಾಟ-ಜನರೆದೆಯ ಸಂಕಟ ಕೇಳುವವರಾರು?

ಮಾರುತ್ತಿದ್ದರು.

ಇವರ ಈ ಕುಣಿದಾಟ, ನಗುವಿನ ಬುಗ್ಗೆ ಜನಕ್ಕೆಲ್ಲಾ ಹರಿದು ಎಲ್ಲರೂ ನಲಿದಾಡುತ್ತಾರೇನೊ ಎಂಬ ಭ್ರಮೆಯಲ್ಲಿ ತೂಗಾಡುತ್ತಿದ್ದರು. ಆದರೆ ನೋಡುಗರ ಮನಸ್ಸಿನಲ್ಲಿ ತಳಮಳದ ಅಲೆಗಳು ಏಳತೊಡಗಿದ್ದವು. ಏನು, ಏಕೆ ಎಂಬುದು ಸ್ಪಷ್ಟವಾಗಿ ತಿಳಿಯದಿದ್ದರೂ ಮುಂದೇನೋ ಕಾದಿದೆ ಎಂಬ ಆತಂಕ ಸಾಮಾನ್ಯ ಜನರನ್ನು ಆವರಿಸತೊಡಗಿತ್ತು. ಅದರಲ್ಲಿ ಅಲ್ಪ ಸ್ವಲ್ಪ ವಿಷಯ ತಿಳಿದುಕೊಂಡವರು ಹಾಕಿದರಲ್ಲೊ ನಮ್ಮ ಬಾಯಿಗೆ ಮಣ್ಣು! ಇನ್ನು ನಾವು ಕೆಲಸ ಮಾಡುವಂತಿಲ್ಲವಲ್ಲೋ? ಇನ್ನು ನಮ್ಮ ಕೈಗಾರಿಕೆ ನಡೆಯುವುದಿಲ್ಲ. ನಮ್ಮ ಮಕ್ಕಳ ಕೆಲಸಕ್ಕೆ ಎಂದೆಂದೂ ಕಲ್ಲು ಬಿತ್ತು. ಅವರ ಭವಿಷ್ಯ ಏನಪ್ಪಾ? ಎಂದು ಚಿಂತೆ ಮಾಡತೊಡಗಿದ್ದರು.

ಆತಂಕ, ಭಯ, ಚಿಂತೆ, ಸ್ವಲ್ಪ ಸಿಟ್ಟು ಬೆರೆತ ಇಂತಹ ನೋಡುಗರ ಮುಂದೆ ಟಿ.ವಿ.ಗಳಲ್ಲಿ ಪತ್ರಿಕೆಗಳಲ್ಲಿ ತೋರಿಸುತ್ತಿದ್ದ ನಲಿದಾಟ ಸಾವು ಹೊಕ್ಕವರ ಮನೆಯಲ್ಲಿ ಹಾಕಿದ ಕೇಕೆಯಂತಿತ್ತು. ಶವಸಂಸ್ಕಾರಮಾಡುತ್ತಾ ದುಃಖಿತರಾದವರ ಮುಂದೆ ಹಿಗ್ಗಿನಿಂದ ಕುಣಿದಾಡುವುದು ಎಷ್ಟು ಅಸಹ್ಯಕರವೋ ಅಷ್ಟೇ ಅನಾಗರೀಕವಾಗಿತ್ತು. ಸ್ಮಶಾನದಲ್ಲಿನ ಶಾಕಿನಿಡಾಕಿನಿಗಳ ಸಂಭ್ರಮದಂತಿತ್ತು. ಇಡೀ ದೇಶದ ಎಲ್ಲೆಡೆ ರೈತರು ವಿದೇಶಿ ಕೃಷಿ ಉತ್ಪನ್ನಗಳ ಧಾಳಿಯಿಂದ ನಲುಗಿ, ಸಾಲತೀರಿಸಲಾರದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವಾಗ ಕೈಗಾರಿಕೆಗಳು ರೋಗಕ್ಕೆ ತುತ್ತಾಗಿ ಕಾರ್ಮಿಕರು ಬೀದಿಪಾಲಾಗುತ್ತಿರುವಾಗ ವಿದ್ಯಾವಂತರು ಉದ್ಯೋಗದ ಅಲೆದಾಟಕ್ಕೆ ಕೊನೆಯೇ ಇಲ್ಲದಿರುವಾಗ ಅವರ ಮೇಲೆ ಮತ್ತಷ್ಟು ಅಘಾತಗಳ ಮಳೆಸುರಿಸುವ ಬಜೆಟ್ ಕೋಟ್ಯಾಂತರ ಜನರಿಗೆ ಸಂಕಟವನ್ನು ತಂದಿತ್ತು. ಆದರೆ ಅವರ ಎದೆಯ ದನಿಯನ್ನು ಕೇಳುವವರಾರು? ಅದಕ್ಕೆ ಜಾಗವೆಲ್ಲಿ? ಟಿ.ವಿ. ಪತ್ರಿಕೆಗಳ ತುಂಬೆಲ್ಲಾ ಸಂತೋಷ ತೊಟ್ಟಿಕ್ಕುತ್ತಿತ್ತು. ಜನಸಮುದಾಯದಲ್ಲಿ ಆತಂಕ, ದುಃಖ, ಕೋಪ ಮಡುಗಟ್ಟಿತ್ತು. ಅಂದರೆ ಈ ಟಿ.ವಿ.ಗಳು ಯಾರಿಗಾಗಿ? ಪತ್ರಿಕೆಗಳು ಯಾರಿಗಾಗಿ? ಎಂಬ ಪ್ರಶ್ನೆ ಮತ್ತೆ ಮತ್ತೆ ಏಳುತ್ತಿತ್ತು.

ಜಿ.ಎನ್.ನಾಗರಾಜ್

ಬಜೆಟ್: ರೈತರ ಕೊರಳಿಗೆ ಉರುಳು



ಆಹಾರಕ್ಕಾಗಿ ಪರ ದೇಶಗಳನ್ನು ಎದುರು ನೋಡುವ ಅತ್ಯಂತ ದಯನೀಯ ಸ್ಥಿತಿಯಿಂದ ದೇಶವನ್ನು ಪಾರು ಮಾಡಿ, ಅಂತರ ರಾಷ್ಟ್ರೀಯ ಮಟ್ಟದಲ್ಲಿ ದೇಶಕ್ಕೆ ಗೌರವ ತಂದು ಕೊಟ್ಟ ಕೃಷಿಕರು ಇಂದು ಸರಣಿ ಆತ್ಮಹತ್ಯೆಗಳಿಗೆ ಮೊರೆ ಹೋಗುತ್ತಿದ್ದಾರೆ. 5 ದಶಕಗಳಲ್ಲಿ ಎಂದೂ ಕಂಡರಿಯದಂತ ರೀತಿಯಲ್ಲಿ ಸಾವಿರಾರು ರೈತರು ಆತ್ಮಹತ್ಯೆಗಳಿಗೆ ಗುರಿಯಾಗಿದ್ದಾರೆ. ಇದಕ್ಕೆ ಪ್ರಮುಖ ಕಾರಣ ಕೃಷಿ ಉತ್ಪನ್ನಗಳ ಬೆಲೆಗಳ ವಿಪರೀತ ಕುಸಿತ, ಆಮದು ಉದಾರೀಕರಣದಿಂದ ವಿದೇಶಗಳಿಂದ ಅಗ್ಗದ ದರದ ಉತ್ಪನ್ನಗಳು ದೇಶದೊಳಗೆ ಲಗ್ಗೆ ಹಾಕಿ ಇವುಗಳ ಜೊತೆ ಸ್ಪರ್ಧೆ ಮಾಡಲು ಸಾಧ್ಯವಾಗದೇ ದೇಶದ ರೈತ ಈ ದಾರುಣ ಸ್ಥಿತಿಗೆ ತಲುಪಿದ್ದಾನೆ. ಕೃಷಿ ರಂಗದಲ್ಲಿ ಉಂಟಾಗುತ್ತಿರುವ ತೀವ್ರತರ ಬದಲಾವಣೆಗಳ ಹಿನ್ನೆಲೆಯಲ್ಲಿ ಗ್ರಾಮೀಣ ನಿರುದ್ಯೋಗ ಹೆಚ್ಚಳಗೊಂಡು ಕೂಲಿಕಾರರ ಬದುಕು ತೀರ ಬಿಕ್ಕಟ್ಟಿಗೆ ಸಿಕ್ಕಿದೆ.

ಇಂತಹ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಮಂಡನೆಯಾದ ಕೇಂದ್ರ ಸರ್ಕಾರ ಬಜೆಟ್, ಈ ಪ್ರಶ್ನೆಗಳ ಕುರಿತು ಕೆಲವು ಪರಿಹಾರಾತ್ಮಕ ಕ್ರಮಗಳನ್ನು ನಿರೀಕ್ಷಿಸುವುದು ಸಹಜ. ಆದರೆ ಬಜೆಟ್ ಸೂಚನೆಗಳು ಪರಿಸ್ಥಿತಿಗೆ ತದ್ವಿರುದ್ಧವಾಗಿ ಬಂದಿವೆ.

ಏಪ್ರಿಲ್ 1, 2001ರಿಂದ ಆಮದು ನೀತಿ ಇನ್ನಷ್ಟು ಉದಾರೀಕರಣಗೊಳ್ಳುವ ಹಿನ್ನೆಲೆಯಲ್ಲಿ ಆಮದುಗಳನ್ನು ತಡೆಯಲು ದೇಶೀಯ ಕೃಷಿಯನ್ನು ಉಳಿಸಲು ಅಗತ್ಯವಿರುವ ಪ್ರಮಾಣದಲ್ಲಿ ಸುಂಕವನ್ನು ವಿಧಿಸುವ ಬದಲಿಗೆ ಆಹಾರ ಪದಾರ್ಥಗಳ ಮೇಲೆ ಹೊಸ ಸುಂಕವೆ ಇಲ್ಲ. ಕಾಫಿ, ಟೀ, ತೆಂಗು, ಕೊಬ್ಬರಿ ಇತ್ಯಾದಿ ಉತ್ಪನ್ನಗಳ ಮೇಲೆ ಸುಂಕ ಏರಿಕೆ ಮಾಡಿದ್ದರೂ ಏನೂ ಸಾಲದು. ಉದಾ: ಕೊಬ್ಬರಿ ಮೇಲೆ ಸುಂಕ ಏರಿಕೆ ಮಾಡಲಾಗಿದೆ. ಈ ಹೊಸ ಸುಂಕವು ಸೇರಿದರೆ ವಿದೇಶದಿಂದ ಬರುವ ಕೊಬ್ಬರಿ ಟನ್‌ನ ಬೆಲೆ 17,600 ರೂ ನಮ್ಮಲ್ಲಿರುವ ದರ ರೂ. 21,500ರೂ. ಇಂತಹ ಸುಂಕಗಳಿಂದ ದೇಶಿಯ ಉತ್ಪನ್ನಗಳನ್ನು ರಕ್ಷಿಸಲು ಸಾಧ್ಯವೇ ಇಲ್ಲ. ಜಪಾನ್‌ನಿಂದ ಆಮದಾಗುವ ಅಕ್ಕಿಯ ಮೇಲೆ ಶೇ. 100, ಅಮೇರಿಕಾ ಶೇಂಗಾ ಮೇಲೆ ಶೇ. 164 ರಷ್ಟು ಸುಂಕಗಳನ್ನು ವಿಧಿಸುತ್ತಿದೆ. ಕೊನೆಗೆ ಪಾಕಿಸ್ತಾನ್, ಶ್ರೀಲಂಕಾ ಸರ್ಕಾರಗಳು ಸುಂಕ ವಿಧಿಸುವಲ್ಲಿ ತೋರುವ ರಾಜಕೀಯ ದೃಢತೆಯನ್ನು ಭಾರತ ತೋರುತ್ತಿಲ್ಲ.

ಹೀಗಾಗಿ ಮುಂಬರುವ ದಿನಗಳಲ್ಲಿ ಕೃಷಿ ಉತ್ಪನ್ನಗಳ ಆಮದು ಇನ್ನಷ್ಟು ಹೆಚ್ಚಳವಾಗಿ ಕೃಷಿಕರು ಮತ್ತಷ್ಟು ಅಪಾಯಕಾರಿ ಸ್ಥಿತಿಯನ್ನು ಎದುರಿಸಬೇಕಾಗುತ್ತದೆ.

ಇತ್ತೀಚಿನ ದಶಕಗಳಲ್ಲಿ ಪ್ರಥಮ ಬಾರಿಗೆ ದೇಶದ ಜನಸಂಖ್ಯೆಯ ಬೆಳವಣಿಗೆಯ ವೇಗಕ್ಕಿಂತ ಆಹಾರ ಪದಾರ್ಥಗಳ ಬೆಳವಣಿಗೆ ವೇಗ ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಆಹಾರ ಭದ್ರತೆಯ ಪ್ರಶ್ನೆ ಬಾರಿ ಮಹತ್ವದ ಅಂಶವಾಗಿ ಮೂಡಿಬರಲಿದೆ.

ಆಮದು ನೀತಿ ಉದಾರೀಕರಣಗೊಳ್ಳುತ್ತಿರುವ ಮತ್ತು ಕೃಷಿ ಸಾಮಗ್ರಿಗಳ ಬೆಲೆಗಳು ವಿಪರೀತವಾಗುತ್ತಿರುವ ಹಿನ್ನೆಲೆಯಲ್ಲಿ ಕೃಷಿ ಉತ್ಪನ್ನಗಳ ಬೆಲೆಗಳ ಪ್ರಶ್ನೆ ಮುಂಬರುವ ದಿನಗಳಲ್ಲಿ ಬಾರಿ ಪ್ರಮುಖವಾಗುತ್ತಾ ಹೋಗುತ್ತದೆ. ರೈತರನ್ನು ರಕ್ಷಿಸಲು ಬೆಂಬಲ ಬೆಲೆ ಘೋಷಣೆ ಮಾಡಿ, ಸರ್ಕಾರಗಳು ಮುಖ್ಯವಾಗಿ ಕೇಂದ್ರ ಸರ್ಕಾರ ನಿಯಂತ್ರಣದ ಭಾರತೀಯ ಆಹಾರ ನಿಗಮ (ಎಫ್.ಸಿ.ಐ)ದ ಮೂಲಕ ಮಾರುಕಟ್ಟೆ ಮಧ್ಯ ಪ್ರವೇಶ ಹೆಚ್ಚು ಮಾಡಬೇಕಾದ ಪರಿಸ್ಥಿತಿ ತೀವ್ರವಾಗುತ್ತದೆ.

ಆದರೆ ಇಂತಹ ಸ್ಥಿತಿಯಲ್ಲಿ ಮಂಡನೆಯಾಗಿರುವ ಬಜೆಟ್, ಬೆಂಬಲ ಬೆಲೆ ಘೋಷಿಸುವ, ಎಫ್.ಸಿ.ಐ ಮೂಲಕ ಆಹಾರ ಪದಾರ್ಥಗಳ ಕೊಂಡುಕೊಳ್ಳುವ ಪ್ರಶ್ನೆಯಿಲ್ಲವೆಂದು ಸ್ಪಷ್ಟಪಡಿಸಿ, ಈ ಕೆಲಸವನ್ನು ಖಾಸಗಿ ಕಂಪನಿಗಳಿಗೆ, ಬಹುರಾಷ್ಟ್ರೀಯ ಕಂಪನಿಗಳಿಗೆ ವಹಿಸಿದೆ. ಇದರ ಪರಿಣಾಮವಾಗಿ ಮುಂಬರುವ ದಿನಗಳಲ್ಲಿ ಸಂಕಷ್ಟದಲ್ಲಿರುವ ರೈತರ ನೆರವಿಗೆ ಕೇಂದ್ರ ಬರುವುದಿಲ್ಲ, ಖಾಸಗಿ ಕಂಪನಿಗಳ ಮರ್ಜಿಯಲ್ಲಿ ರೈತರು ಬದುಕಬೇಕು. ಆರ್ಥಿಕವಾಗಿ ಗಂಭೀರವಾದ ಮಿತಿಗಳಿರುವ ರಾಜ್ಯ ಸರ್ಕಾರಗಳು ಅಲ್ಪ ಸ್ವಲ್ಪವಾದರೂ ಮಾಡಬಹುದು. ಬೆಲೆಗಳನ್ನು ಖಾಸಗಿ ಕಂಪನಿಗಳೇ ತೀರ್ಮಾನಿಸುವ ಸ್ಥಿತಿ ಉಂಟಾಗಿ ರೈತನ ಬೆಳೆಗೆ ಇನ್ನಷ್ಟು ಬೆಲೆ ಕುಸಿತ, ಫಲವಾಗಿ ದಾರಿದ್ರ ಹೆಚ್ಚಳ ನಿಶ್ಚಿತ. ಬಜೆಟ್‌ನ ಈ ಸೂಚನೆಯಿಂದ ರೈತರು ಒಂದು ಸಂಕಷ್ಟಕ್ಕೆ ಸಿಲುಕಿದ್ದಾರೆ ಮತ್ತೊಂದು ಕಡೆ ಎಫ್.ಸಿ.ಐ ಆಹಾರ ಪದಾರ್ಥಗಳನ್ನು ಸಂಗ್ರಹಿಸದ ಕಾರಣ ಸಾರ್ವಜನಿಕ ವಿತರಣೆ ವ್ಯವಸ್ಥೆಗೆ ಅಗತ್ಯವಿರುವ ಆಹಾರ ಪದಾರ್ಥಗಳ ಸರಬರಾಜು ಇಲ್ಲ. ಇದರಿಂದ ಪಡಿತರ ವ್ಯವಸ್ಥೆಯನ್ನೇ ನಾಶ ಪಡಿಸುವ ತಂತ್ರವು ಅಡಗಿದೆ.

ಈಗ ಸದ್ಯ ಬಡತನ ರೇಖೆಗಿಂತ ಕೆಳಗಿರುವ ಬಡವರಿಗೆ ರೇಶನ್ ಮೂಲಕ ಆಹಾರ ಪದಾರ್ಥಗಳನ್ನು ವಿತರಣೆ ಮಾಡಲು ಅಗತ್ಯವಿರುವ ಸಹಾಯ ಧನವನ್ನು ಕೇಂದ್ರ ರಾಜ್ಯ ಸರ್ಕಾರಗಳಿಗೆ ನೀಡುತ್ತದೆ. ಇನ್ನು ಮುಂದೆ ಈ ಜವಾಬ್ದಾರಿ ನಿರ್ವಹಿಸುವ ಹೊಣೆ ರಾಜ್ಯ ಸರ್ಕಾರಗಳದ್ದೆ, ಕೇಂದ್ರಕ್ಕೆ ಏನು ಸಂಬಂಧವಿಲ್ಲ, ಬಡತನ ರೇಖೆಗಿಂತ ಕೆಳಗೆ(ಬಿಪಿಎಲ್) ಮತ್ತು ಬಡತನ ರೇಖೆಗಿಂತ ಮೇಲೆ (ಎಪಿಎಲ್) ಯಾರು ಎಷ್ಟು ಪ್ರಮಾಣ ಎನ್ನುವುದರ ಬಗ್ಗೆ ಸಾಕಷ್ಟು ವಿವಾದಗಳಿವೆ. ನಾಳೆ ಕೇಂದ್ರ ಸರ್ಕಾರ ಯಾವುದೇ ಸಮೀಕ್ಷೆ ಪ್ರಕಾರ ಬಿಪಿಎಲ್ ಸಂಖ್ಯೆ ಶೇ. 36 ರಿಂದ ಶೇ. 26ಕ್ಕೆ ಇಳಿದಿದೆ ಎಂದರೆ ನಾವು ಒಪ್ಪಬೇಕು. ಇದು ಬೇರೆ ಮಾತು. ಆದರೆ ಇದೇ ಸಂದರ್ಭದಲ್ಲಿ ಬಿಪಿಎಲ್ ಅಲ್ಲದ ಜನಸಾಮಾನ್ಯರಿಗೆ ಯಾವುದೇ ರೀತಿಯ ಸಹಾಯ ಧನದ ರೇಷನ್ ಸೌಲಭ್ಯವಿಲ್ಲ. ನೀಡುವುದಾದರೆ ರಾಜ್ಯ ಸರ್ಕಾರಗಳಿಗೆ ಬಿಟ್ಟಿದ್ದು. ಆರ್ಥಿಕ ಆದಾಯ ಮಿತಿಗಳಿರುವ ರಾಜ್ಯಗಳು ಈ ಸೌಲಭ್ಯವನ್ನು ಜಾರಿ ಮಾಡುವುದು ಸಾಧ್ಯವಿಲ್ಲದ ಮಾತು. ದೇಶದಲ್ಲಿಯೇ ಅತಿ ಉತ್ತಮ ವ್ಯವಸ್ಥೆಯನ್ನು ಹೊಂದಿದ್ದ ಕೇರಳದ ಪಡಿತರ ವ್ಯವಸ್ಥೆ ಇನ್ನು ಮುಂದೆ ಸಾಧ್ಯವಿಲ್ಲದ ಸ್ಥಿತಿ. ಇದರ ಪರಿಣಾಮ ಅಗತ್ಯ ವಸ್ತುಗಳ ಬೆಲೆ ನಿಯಂತ್ರಣ ಮಾಡುವವರು ದೊಡ್ಡ ವ್ಯಾಪಾರಸ್ಥರು ಮಾತ್ರ. ದುಬಾರಿ ಬೆಲೆಗಳಿಂದ ಸಾಮಾನ್ಯ ಜನ ನರಳುವಂತ ಸ್ಥಿತಿ ಖಚಿತ.

ಹೆಚ್ಚುತ್ತಿರುವ ನಿರುದ್ಯೋಗ, ಬಡತನಗಳ ನಡುವೆ ಈ ಸ್ಥಿತಿಯು ಹೇಗಿರಬಹುದೆಂದು ಯೋಚಿಸಿ.

ಇಡೀ ಕೃಷಿ ಅಭಿವೃದ್ಧಿಯನ್ನೇ ತೀರ ಬಿಕ್ಕಟ್ಟಿಗೆ ಸಿಕ್ಕಿಸುವ ಮತ್ತೊಂದು ಅಂಶ ವಿದ್ಯುತ್ ಖಾಸಗೀಕರಣ. ಈ ಬಜೆಟ್ ಸ್ಪಷ್ಟವಾಗಿ ಆದೇಶ ನೀಡಿದೆ. ಎಲ್ಲಾ ರಾಜ್ಯ ಸರ್ಕಾರಗಳು ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣಕ್ಕೆ ಒಳಪಡಿಸಬೇಕು, ಕೃಷಿ ಬಳಕೆಗೆ ತಕ್ಷಣ ಮೀಟರ್‌ಗಳನ್ನು ಅಳವಡಿಸಬೇಕು, ಯಾವುದೇ ರೀತಿಯಲ್ಲಿ ಉತ್ಪಾದನಾ ವೆಚ್ಚ ಸಂಗ್ರಹ ಮಾಡಲು ಸಾಧ್ಯವಾಗಬೇಕೆಂದು ಸೂಚಿಸಿದೆ.

ಹೀಗೆ ಎಲ್ಲಾ ರೀತಿಯಲ್ಲಿ ಪರಿಸ್ಥಿತಿಯನ್ನು ತಿಳಿಗೊಳಿಸಿ ರೈತರ ನೆರವಿಗೆ ಬರುವ ಬದಲಿಗೆ ದೇಶದ ಬಂಡವಾಳಗಾರರನ್ನು ಮುಖ್ಯವಾಗಿ ಬಹು ರಾಷ್ಟ್ರೀಯ ಕಂಪನಿಗಳನ್ನು ಸಂತೃಪ್ತಿಪಡಿಸುವ WTO ಆದೇಶಗಳನ್ನು ಚಾಚು ತಪ್ಪದೆ ದೇಶ ಅಭಿವೃದ್ದಿಗೆ ಅತ್ಯಂತ ಮಾರಕವಾದ ಬಜೆಟ್‌ನ್ನು ಅರ್ಥಿಕ ಮಂತ್ರಿ ಮಂಡಿಸಿದ್ದಾರೆ.

ಆಳುವ ವರ್ಗಗಳು ಸಾಮ್ರಾಜ್ಯಶಾಹಿಗಳಿಗೆ ಶರಣಾಗಿರಬಹುದು, ಆದರೆ, ಈ ದೇಶದ ದುಡಿಯುವ ಜನ ರೈತರು, ಕಾರ್ಮಿಕರು ವಿವಿಧ ವಿಭಾಗದ ದೇಶ ಪ್ರೇಮಿಗಳು ಈ ದೇಶದ ಆರ್ಥಿಕ ಸ್ವಾತಂತ್ರ್ಯವನ್ನು ನಾಶ ಮಾಡಲು ಬಿಡುವುದಿಲ್ಲವೆಂದು ಹೋರಾಟಕ್ಕೆ ಸಿದ್ದರಾಗಬೇಕಿದೆ. ಈ ಕ್ರಿಯೆ ಈಗಾಗಲೇ ಶುರು ಆಗಿದ್ದು ಮುಂದಿನ ದಿನಗಳಲ್ಲಿ ಇನ್ನಷ್ಟು ವ್ಯಾಪಕ, ನಿರಂತರ, ಸಮರ ಶೀಲವಾಗಿ ಮೂಡಿಬರಲಿದೆ.

- ಜಿ.ಸಿ.ಬಯ್ಯಾರೆಡ್ಡಿ

ರೈತ ವಿರೋಧಿ ಬಜೆಟ್ ವಿರೋಧಿಸಿ ಹೊಸಕೋಟೆಯಲ್ಲಿ ಪ್ರತಿಭಟನೆ



ಚಿನ್ನದ ನಾಡಿನಲ್ಲಿ ಸಾಂಸ್ಕೃತಿಕ ಹಬ್ಬ

ಅಚ್ಯುತ

70ರ ದಶಕದಲ್ಲಿ ಕರ್ನಾಟಕರಾಜ್ಯದ ಸಾಂಸ್ಕೃತಿಕ ರಂಗದಲ್ಲಿ ಅಲೆಯನ್ನೇ ಎಬ್ಬಿಸಿ ದುಡಿಯುವ ಜನತೆಯ ನೋವು ನಲಿವುಗಳಿಗೆ ಸ್ಪಂಧಿಸುತ್ತಾ ರಾಜ್ಯದ ಉದ್ದಗಲಕ್ಕೂ ಹಲವಾರು ಘಟಕಗಳನ್ನು ಹೊಂದಿ ನಿರಂತರ ಚಟುವಟಿಕೆಗಳನ್ನೂ ನಡೆಸಿಕೊಂಡು ಬರುತ್ತಿರುವ ಸಮುದಾಯ ಸಂಘಟನೆಗೆ ಈಗ 25 ವರ್ಷಗಳು.

ಸಮುದಾಯ 1979ರಲ್ಲಿ ಹಮ್ಮಿಕೊಂಡ 'ಹೊಸ ಮೌಲ್ಯಗಳತ್ತ ಸಮುದಾಯ ಜಾಥಾ' ಬೀದರ ಮತ್ತು ಕೆಜಿಎಫ್‌ಗಳಿಂದ ಎರಡು ತಂಡಗಳಾಗಿ ಹೊರಟು ಒಂದು ತಿಂಗಳುಗಳ ಕಾಲ ರಾಜ್ಯಾದ್ಯಂತ ಸಂಚರಿಸಿ ಧಾರವಾಡದಲ್ಲಿ ಸಮಾರೋಪಗೊಂಡಿತು. ಈ ಜಾಥಾದ ಸ್ಪೂರ್ತಿಯಿಂದ ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ಸಮುದಾಯದ ಘಟಕಗಳು ಅಸ್ತಿತ್ವಕ್ಕೆ ಬಂದವು. ಹೀಗೆ ಅಸ್ತಿತ್ವಕ್ಕೆ ಬಂದ ಘಟಕಗಳಲ್ಲಿ ಪ್ರಮುಖವಾದ ಒಂದು ಘಟಕವೇ ಸಮುದಾಯ ಕೆಜಿಎಫ್ ಘಟಕ.

1979ರ ಜಾಥಾದ ಸಿದ್ಧತೆ ಕೆಜಿಎಫ್ ನಲ್ಲಿ ನಡೆಯುತ್ತಿದ್ದಾಗ ಅಲ್ಲಿ ಅಸ್ತಿತ್ವದಲ್ಲಿದ್ದ ಕರ್ನಾಟಕ ಕಲೆ ಮತ್ತು ಸಾಹಿತ್ಯ ಮಂಡಳಿಯ (Karnataka Art & Literature forum) ಪದಾಧಿಕಾರಿಗಳು ಸಕ್ರಿಯವಾಗಿ ಭಾಗವಹಿಸಿ ಜಾಥಾದಲ್ಲಿ ಸೇರಿಕೊಂಡರು. ಇದರಿಂದ ಸ್ಪೂರ್ತಿ ಪಡೆದು ಬಂದ ಇವರು 1980 ಸೆಪ್ಟೆಂಬರ್ ತಿಂಗಳಲ್ಲಿ ಕರ್ನಾಟಕ ಕಲೆ ಮತ್ತು ಸಾಹಿತ್ಯಮಂಡಳಿಯನ್ನು ಸಮುದಾಯದ ಘಟಕವಾಗಿ ಪರಿವರ್ತಿಸಿದರು.

ಹೀಗೆ 1980ರಲ್ಲಿ ಆರಂಭಗೊಂಡ ಈ ಘಟಕವು 1981ರಲ್ಲಿ 17 ದಿನಗಳ ರೈತನತ್ತ ಜಾಥಾ, ಬರಗಾಲದ ಜಾಥಾ, ಚುನಾವಣಾ ಸಂದರ್ಭಗಳ ಜಾಥಾ ಗಳನ್ನು ಸಂಘಟಿಸಿದ್ದು ಮಾತ್ರವಲ್ಲದೆ ಕೋಲಾರ ಜಿಲ್ಲೆಯ ಸಾಕ್ಷರತಾ ಆಂದೋಳನದಲ್ಲಿ ತನ್ನನ್ನು ಸಕ್ರಿಯವಾಗಿ ತೊಡಗಿಸಿಕೊಂಡಿತು. 1985ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ನಡೆಸಿದ ಜನಜಾಗೃತಿ ಬೀದಿನಾಟಕ ಪ್ರದರ್ಶನದ ಸಂದರ್ಭದಲ್ಲಿ ಸ್ಥಳೀಯ ಅಣ್ಣಾ ಡಿಎಂಕೆಯ ಗೂಂಡಾಗಳು ಕಲಾವಿದರ ಮತ್ತು ಕಾರ್ಯಕರ್ತರ ಮೇಲೆ ನಡೆಸಿದ ಹಲ್ಲೆಯಲ್ಲಿ ಸಮುದಾಯದ ಆಗಿನ ಅಧ್ಯಕ್ಷ ಬಿ.ಆರ್. ಶೆಲ್ವಪಿಳ್ಳೆ ಮತ್ತು ತಾರಾನಾಥ್ ಗಾಯಗೊಂಡರು. ಇದನ್ನು ಪ್ರತಿಭಟಿಸಿ ಕರಪತ್ರಗಳನ್ನು ಪ್ರಕಟಿಸಿದ್ದು ಮಾತ್ರವಲ್ಲದೆ ಬೀದಿನಾಟಕಗಳನ್ನು ಇನ್ನೂ ಹೆಚ್ಚಿನ ಕಡೆ ಪ್ರದರ್ಶಿಸಲಾಯಿತು.

ಜಿಲ್ಲೆಯ ಸಾಂಸ್ಕೃತಿಕ ವೈವಿಧ್ಯತೆಗನುಗುಣವಾಗಿ ಕಳೆದ 20 ವರ್ಷಗಳಲ್ಲಿ 37 ರಂಗನಾಟಕಗಳು ಹಾಗೂ ಸುಮಾರು 40ಕ್ಕೂ ಹೆಚ್ಚು ಬಿದಿನಾಟಕಗಳನ್ನು ಕನ್ನಡ, ತಮಿಳು, ತೆಲುಗು ಭಾಷೆಗಳಲ್ಲಿ ಪ್ರದರ್ಶಿಸಲಾಗಿದೆ. ಕತ್ತಲೆದಾರಿದೂರ, ಕುರಿ, ಹುತ್ತವ ಬಡಿದರೆ, ಒಂದು ಲೋಕಕಥೆ, ದಂಗೆಯ ಮುಂಚಿನ ದಿನಗಳು, ತಾಯಿ, ತಣ್ಣೀರ್ ತಣ್ಣೀರ್, ಕದಲಿಕ, ಅಶೋಕವನ, ಸೂರ್ಯಶಿಕಾರಿ, ಚಾರ್ವಾಕ, ಕೊಂದುಕೂಗಿತ್ತು ನೋಡಾ, ರಾವಿನದಿಯ ದಂಡೆಯಲ್ಲಿ, ಪರಿಹಾರ ಮುಂತಾದ ಹಲವಾರು ನಾಟಕಗಳು ಯಶಸ್ವಿ ಪ್ರದರ್ಶನಗಳೆನಿಸಿಕೊಂಡವು. ಈಗಲೂ ಮಹಿಳಾತಂಡ, ಮಕ್ಕಳತಂಡಗಳಿವೆ.

ಸ್ಥಳೀಯವಾಗಿ ಚಟುವಟಿಕೆಗಳನ್ನು ನಡೆಸಿದ್ದು ಮಾತ್ರವಲ್ಲದೆ ಜಿಲ್ಲೆಯ ಬೇರೆ ಬೇರೆ ಕಡೆಗಳಲ್ಲಿ ರಂಗತರಬೇತಿ ಶಿಬಿರಗಳನ್ನು ನಡೆಸಲಾಗಿದೆ. ರಾಬರ್ಟ್‌ಸನ್ ಪೇಟೆ, ಕೋಲಾರ ನಗರಗಳಲ್ಲಿ ಎರಡು ತಂಡಗಳು ಅಸ್ತಿತ್ವಕ್ಕೆ ಬಂದವು. ಸದ್ಯ ರಾಬರ್ಟ್‌ಸನ್ ಪೇಟೆ ತಂಡ ನಿಷ್ಕ್ರಿಯವಾಗಿದೆ. ಕೋಲಾರ ಘಟಕ ಮತ್ತೆ ಚಟುವಟಿಕೆ ಆರಂಭಿಸಿದೆ. ಗೌರೀಬಿದನೂರಿನಲ್ಲಿ 1981ರಲ್ಲಿ ಆರಂಭಗೊಂಡ ಘಟಕ 6-7 ವರ್ಷ ಸಕ್ರಿಯವಾಗಿತ್ತು.

ಸಮುದಾಯ 20 ಜನಸಂಸ್ಕೃತಿ ಉತ್ಸವ : 20ನೇ ವರ್ಷದ ಕಾರ್ಯಕ್ರಮವನ್ನು ಒಂದು ವರ್ಷಗಳ ಕಾಲ ವಿವಿಧ ಹಂತಗಳಲ್ಲಿ ನಡೆಸಬೇಕೆಂದು ತೀರ್ಮಾನಿಸಿ ಸ್ಥಳೀಯ ಸುಭಾಷಿಣಿ ಕಾಲೇಜಿನ ಉಪನ್ಯಾಸಕರಾಗಿರುವ ಜಿ.ಎನ್. ಕೃಷ್ಣೇಗೌಡರ ಅಧ್ಯಕ್ಷತೆಯಲ್ಲಿ ಉತ್ಸವ ಸಮಿತಿಯನ್ನು ರಚಿಸಲಾಯಿತು. ಇದರ ಕಾರ್ಯದರ್ಶಿಯಾಗಿ ಅಚ್ಯುತರವರನ್ನು ಆರಿಸಲಾಯಿತು.

ಮೊದಲ ಹಂತದ ಕಾರ್ಯಕ್ರಮ : 1999 ಅಕ್ಟೋಬರ್ ತಿಂಗಳಲ್ಲಿ ಅಚ್ಯುತರವರ ನಿರ್ದೇಶನದಲ್ಲಿ ಮಕ್ಕಳಿಗೆ ಒಂದು ರಂಗ ತರಬೇತಿ ಶಿಬಿರವನ್ನು ನಡೆಸಿ ಬಿ.ವಿ ಕಾರಂತರ 'ಪಂಜರ ಶಾಲೆ' ನಾಟಕವನ್ನು ಬಿಇಎಂಎಲ್ ಕಲಾಕ್ಷೇತ್ರದಲ್ಲಿ ದಿನಾಂಕ 11.11.99ರಂದು ನಡೆದ ಉತ್ಸವದ ಉದ್ಘಾಟನಾ ಸಂದರ್ಭದಲ್ಲಿ ಪ್ರದರ್ಶಿಸಲಾಯಿತು. ಬಿ.ಇ.ಎಂ.ಎಲ್, ಕೆ.ಜಿ.ಎಫ್ ಸಂಕೀರ್ಣದ ಮಾನವ ಸಂಪನ್ಮೂಲ ಅಧಿಕಾರಿಯಾಗಿರುವ ಎಂ.ಆರ್. ವೇಣುಗೋಪಾಲ್‌ರವರು ಉದ್ಘಾಟನಾ ಕಾರ್ಯಕ್ರಮ ನೆರವೇರಿಸಿದರು. ಸ್ಥಳೀಯ ಕನ್ನಡ ಮಿತ್ರರು ಸಂಸ್ಥೆಯ ಅಧ್ಯಕ್ಷ ಮಧುಸೂದನ ಡಿಸಿಎಂ, ಬಿಇಎಂಸಿ, ನಾಟಕ ಅಕಾಡೆಮಿ ಪ್ರಶಸ್ತಿ ವಿಜೇತ ಬಿ.ಆರ್. ಮಲ್ಲಿಕಾರ್ಜುನಯ್ಯರವರು ಅತಿಥಿಗಳಾಗಿ ಭಾಗವಹಿಸಿದರು. ಪ್ರೇಕ್ಷಕರು ಕಿಕ್ಕಿರಿದು ಸೇರಿದರು.

ಎರಡನೇ ಹಂತದ ಕಾರ್ಯಕ್ರಮ:

2000 ಜುಲೈ ತಿಂಗಳಲ್ಲಿ ಉದಾರೀಕರಣ ಜಾಗತೀಕರಣ, ಖಾಸಗೀಕರಣಗಳಿಂದಾಗಿ ಆಗುತ್ತಿರುವ ದುಷ್ಪರಿಣಾಮಗಳ ಬಗ್ಗೆ ಜನಜಾಗೃತಿ ಮೂಡಿಸಲು 'ಇನ್ನಾತಕೆ ಕುಂತಿರುವಿರೋ' ಬೀದಿನಾಟಕದ ಕನಿಷ್ಟ 25 ಪ್ರದರ್ಶನಗಳ ಕಾರ್ಯಕ್ರಮವನ್ನು ಸ್ಥಳೀಯ ವೆಂಕಟೇಶ್ವರ ಸ್ವಾಮಿ ದೇವಸ್ಥಾನದ ಮುಖ್ಯಸ್ಥ ಕುಪ್ಪುಸ್ವಾಮಿಯವರು ಉದ್ಘಾಟಿಸಿದರು. ಈ ನಾಟಕಕ್ಕೆ ಜನರಿಂದ ಒಳ್ಳೆಯ ಪ್ರತಿಕ್ರಿಯೆ ಬಂತು. ಡಾ| ರಾಜಕುಮಾರ್ ಅಪಹರಣದಿಂದಾಗಿ ಹೆಚ್ಚಿನ ಪ್ರದರ್ಶನಗಳನ್ನು ನಡೆಸಲಾಗಲಿಲ್ಲ.

ಮೂರನೇ ಹಂತದ ಕಾರ್ಯಕ್ರಮ :

ಕೆಜಿಎಫ್ ಸಮುದಾಯದಲ್ಲಿ ಕಲಾವಿದರಾಗಿ ಬೆಳೆದು ಈಗ ಬೇರೆ ಜಿಲ್ಲೆಗಳಲ್ಲಿ ನೆಲೆಸಿ ನಿರಂತರ ರಂಗಚಟುವಟಿಕೆಗಳನ್ನು ನಡೆಸುತ್ತಿರುವ ನಿರ್ದೇಶಕರ ನಾಟಕಗಳ ಪ್ರದರ್ಶನದ ಮೂರು ದಿನಗಳ **'ರಂಗ ಸಮ್ಮಿಲನ ನಾಟಕೋತ್ಸವ'**ವನ್ನು ಸೆಪ್ಟೆಂಬರ್ 16,17,18, 2000 ರಂದು ನಡೆಸಲಾಯಿತು. ಇದರ ಉದ್ಘಾಟನೆಯನ್ನು ಸ್ಥಳೀಯ ಕನ್ನಡ ಮಿತ್ರರು ಸಂಸ್ಥೆಯ ಮಧುಸೂದನ ನೆರವೇರಿಸಿದರು. ಸಮುದಾಯದ ಪ್ರಧಾನ ಕಾರ್ಯದರ್ಶಿ ಎಂ.ಜಿ.ವೆಂಕಟೇಶ್, ಬಿಇಎಂಎಲ್ ಕಾರ್ಮಿಕ ಕಲ್ಯಾಣ ನಿಧಿಯ ಕಾರ್ಯದರ್ಶಿ ಲಕ್ಷ್ಮಣಕುಮಾರ್ ಅತಿಥಿಗಳಾಗಿ ಭಾಗವಹಿಸಿದರು. ಬೆಂಗಳೂರಿನ ರಂಗ ಸಮುದ್ರ ತಂಡದ "ಕಾಲಜ್ಞಾನಿ ಕನಕ" ನಿರ್ದೇಶನ ಎಸ್. ಕೃಷ್ಣಮೂರ್ತಿ (ಕಿಟ್ಟಿ) ಕುದುರೆಮುಖದ ಸಮತ ತಂಡದ "ಮಾರನಾಯಕನ ದೃಷ್ಟಾಂತ" ನಿರ್ದೇಶನ ಭಾಸ್ಕರ ನೆಲ್ಲಿತೀರ್ಥ, ಮೈಸೂರಿನ ಕಲಾನಿಕೇತನ ತಂಡದ "ಮಾರೀಚನ ಬಂಧುಗಳು" ನಿರ್ದೇಶನ ಕೆ. ಮಲ್ಲೇಶಪ್ಪ ನಾಟಕಗಳು ಪ್ರದರ್ಶನಗೊಂಡವು. ಪ್ರೇಕ್ಷಕರು ಎಂದಿನಂತೆ ಉತ್ಸಾಹದಿಂದ ಭಾಗವಹಿಸಿದರು.

ನಾಲ್ಕನೇ ಹಂತದ ಕಾರ್ಯಕ್ರಮ :

2000 ಡಿಸೆಂಬರ್ 10 ಮತ್ತು 11 ನೇ ತಾರೀಖು ಸ್ಥಳೀಯ ಬಯಲು ರಂಗಮಂದಿರದಲ್ಲಿ ನಡೆದ ಚಿತ್ರಕಲೆ, ಕರಕುಶಲ ಪ್ರದರ್ಶನಗಳ "ಚಿತ್ತಾರ" ಇದರಲ್ಲಿ ಸ್ಥಳೀಯ ಹವ್ಯಾಸಿ ಚಿತ್ರಕಲಾವಿದರು, ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ಸ್‌ನ ವಿದ್ಯಾರ್ಥಿಗಳು, ಬೂದಿಕೋಟೆಯ ಚಿತ್ರಕಲಾವಿದರು ತಮ್ಮ ಚಿತ್ರಗಳೊಂದಿಗೆ ಭಾಗ ವಹಿಸಿದ್ದು ಮಾತ್ರವಲ್ಲದೆ ಸ್ಥಳೀಯ ಮಹಿಳೆಯರು ತಾನೇ ರಚಿಸಿದ ಕರಕುಶಲ ವಸ್ತುಗಳನ್ನು ಪ್ರದರ್ಶಿಸಿದರು. ಚಿತ್ರರಚನೆಯ ಪ್ರಾತ್ಯಕ್ಷಿಕೆ, ಹಾಡಿನ ಕಾರ್ಯಕ್ರಮ, ಶುಭಾಷಯ ಪತ್ರಗಳ ರಚನೆ ಮತ್ತು ಮಾರಾಟ, ಮಕ್ಕಳಿಗೆ ಸ್ಥಳದಲ್ಲೇ ಚಿತ್ರಬರೆಯುವ ಸ್ಪರ್ಧೆ ಹೀಗೆ ಅವಿರತವಾಗಿ ಕಾರ್ಯಕ್ರಮ ನಡೆಯಿತು.



ಮಕ್ಕಳ ಅಭಿನಯದ 'ಪಂಜರ ಶಾಲೆ' ನಾಟಕದ ದೃಶ್ಯ

ಚಿತ್ರ ಬರೆಯುವ ಸ್ಪರ್ಧೆಯಲ್ಲಿ 350ಕ್ಕೂ ಹೆಚ್ಚು ಮಂದಿ ವಿವಿಧ ವಯೋಮಿತಿಯ ಮಕ್ಕಳು ಭಾಗವಹಿಸಿದರು. ಮಕ್ಕಳು ರಚಿಸಿದ ಎಲ್ಲಾ ಚಿತ್ರಗಳನ್ನೂ ಪ್ರದರ್ಶಿಸಲಾಯಿತು. ಎರಡನೇ ದಿನ ಸಂಜೆ "ಚಿತ್ರಕಲೆ, ಕರಕುಶಲಕಲೆ - ರಂಗಭೂಮಿಯ ಸಂಬಂಧ" ಕುರಿತು ವಿಚಾರಸಂಕಿರಣವೇರ್ಪಡಿಸಲಾಯಿತು. ಇದರಲ್ಲಿ ಬೆಂಗಳೂರಿನ ಕಿಟ್ಟಿ, ಸ್ಥಳೀಯ ಚಿತ್ರಕಲಾವಿದ ಅರವಿಂದ ಕಟ್ಟಿ, ಅಚ್ಯುತರವರು ತಮ್ಮ ವಿಚಾರಗಳನ್ನು ಮಂಡಿಸಿದರು. ಸ್ಥಳೀಯ ಕನ್ನಡ ಉಪನ್ಯಾಸಕ ದಯಾನಂದರವರು ಅಧ್ಯಕ್ಷತೆ ವಹಿಸಿದರು. ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಬೆಂಗಳೂರಿನ ಗುಂಡಣ್ಣ ಅತಿಥಿಯಾಗಿ ಭಾಗವಹಿಸಿದರು. ಮಕ್ಕಳು ಹೆತ್ತವರು, ಜನಸಾಮಾನ್ಯರು ಭಾಗವಹಿಸಿದ ಈ ಎರಡು ದಿನಗಳ ಚಿತ್ತಾರ ಕಾರ್ಯಕ್ರಮ ವಿಶಿಷ್ಟವಾಗಿ ಮೂಡಿಬಂತು.

ಸಾಂಸ್ಕೃತಿಕ ಕಾರ್ಯಕ್ರಮಗಳೇನಿದ್ದರೂ ಅವು ಬೆಂಗಳೂರಿನಲ್ಲೇ ನಡೆಯಬೇಕು. ಇಲ್ಲಿ ನಡೆಯುವುದೆಲ್ಲವೂ ರಾಜ್ಯಮಟ್ಟದ್ದೇ. ಅವು ಬಿತ್ತರಿಸುವ ಸಂದೇಶ, ಗುಣಮಟ್ಟ ಬೇರೆಯದೇ ಪ್ರಶ್ನೆ ಆದರೆ ಪತ್ರಿಕೆ, ಟಿ.ವಿ.ಗಳಲ್ಲಿ ಅದೇ ಸುದ್ದಿಗಳು. ಇಂತಹ ಸ್ಥಿತಿಯಲ್ಲಿ ರಾಜ್ಯದ ಎರಡು ಭಿನ್ನ ಮೂಲೆಗಳಲ್ಲಿ ತಿಂಗಳು ಪೂರ್ತಿ ವಿಶಿಷ್ಟವಾದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಜನಮನ ಹೊಕ್ಕು ಪ್ರಭಾವಿಸಿದವು. ಧಾರವಾಡ ಸಮುದಾಯಕ್ಕೆ 25 ವರ್ಷ, ಕೆ.ಜಿ.ಎಫ್. ಘಟಕಕ್ಕೆ 20 ತುಂಬಿದ ನೆನಪಿನಲ್ಲಿ ನಡೆದ ಅಭೂತಪೂರ್ವ, ಅದ್ಭುತ ಜನಸಂಸ್ಕೃತಿ ಉತ್ಸವಗಳ ವಿಶಿಷ್ಟ ವರದಿಗಳು ಇಲ್ಲಿವೆ

ಐದನೇ ಹಂತದ ಕಾರ್ಯಕ್ರಮ :

2001 ಜನವರಿ 16 ರಿಂದ 21ರವರೆಗೆ 6ದಿನಗಳ ಕಾಲ ನಡೆದ "ಸೌಹಾರ್ದ ರಂಗ ಮೇಳ" ನಾಟಕೋತ್ಸವ ಇದರ ಉದ್ಘಾಟನೆಯನ್ನು ಬಿಇಎಂಎಲ್ ಕೆಜಿಎಫ್ ಸಂಕೀರ್ಣದ ಎಕ್ಸಿಕ್ಯುಟಿವ್ ಡೈರೆಕ್ಟರ್‌ರಾಗಿರುವ ಆರ್. ಸಿ. ಸುತಾರ್‌ರವರು ನೆರವೇರಿಸಿದರು. ಸಮುದಾಯ ಸಾಂಸ್ಕೃತಿಕ ಚಳುವಳಿಯ ಸ್ಥಾಪಕರಲ್ಲೊಬ್ಬರಾಗಿರುವ ಪ್ರಸನ್ನರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು. ಸ್ಥಳೀಯ ಕನ್ನಡ ಮಿತ್ರರು ಸಂಸ್ಥೆಯ ಅಧ್ಯಕ್ಷ ಮಧುಸೂದನ, ಬಿಇಎಂಎಲ್ ಕಾರ್ಮಿಕ ಸಂಘದ ಅಧ್ಯಕ್ಷ ಸಿ. ವೇಣುಗೋಪಾಲನ್ ಕಾರ್ಮಿಕ ಕಲ್ಯಾಣ ನಿಧಿಯ ಕಾರ್ಯದರ್ಶಿ ಲಕ್ಷ್ಮಣಕುಮಾರ್ ಅತಿಥಿಗಳಾಗಿ ಭಾಗವಹಿಸಿದರು.

16-1-2001 ರಂದು ಸಮುದಾಯ ಬಿಇಎಂಎಲ್ ಕೆ.ಜಿ.ಎಫ್ ಘಟಕದ ಮಹಿಳಾ ನಾಟಕ **ಷಾಪುರದ ಸೀನಿಂಗಿ** ರಚನೆ ಬಿ. ಸುರೇಶ, ನಿರ್ದೇಶನ ಅಚ್ಯುತ. 17.1.2001 ರಂದು ಸಮುದಾಯ ಬಾಗೇಪಲ್ಲಿ ಘಟಕದಿಂದ ಕ್ರಾಂತಿಗೀತೆಗಳ ಕಾರ್ಯಕ್ರಮ ನಿರ್ದೇಶನ ಓಬಳರಾಜು.

ಜನವರಿ 18 ರಂದು ಸಮುದಾಯ ಬಿಇಎಂಎಲ್ ಘಟಕದ ತೆಲುಗು ನಾಟಕ "ಮಾ ಭೂಮಿ" ನಿರ್ದೇಶನ. ಶ್ರೀ ಹನುಮಂತಪ್ಪ.

ಜನವರಿ 19 ರಂದು ಸ್ಥಳೀಯ ರಂಗವರ್ಷ ತಂಡದಿಂದ "ಗಂಗಭಾರತ" ನಿರ್ದೇಶನ : ಶ್ರೀ ಬಿ.ಆರ್. ಮಲ್ಲಿಕಾರ್ಜುನಯ್ಯ.

ಜನವರಿ 20 ರಂದು ಸಮುದಾಯ ಬಿಇಎಂಎಲ್ ಘಟಕದ ತಮಿಳುನಾಟಕ "ಮದುರೈಕಾಂಡಂ" ನಿರ್ದೇಶನ ಶ್ರೀ ಆರ್. ಚೊಕ್ಕಲಿಂಗಂ.

ಜನವರಿ 21 ಸಮುದಾಯ ಕೋಲಾರ ತಂಡದಿಂದ "ಮುತ್ತು ಚೇರ" ನಿರ್ದೇಶನ ಕೃಷ್ಣಮೂರ್ತಿ ಆನೂಡಿ. ಈ ನಾಟಕಗಳ ಯಶಸ್ವಿ ರಂಗಮೇಳ ಕಾರ್ಯಕ್ರಮ ನಡೆಯಿತು. ಇದೇ ಸಂದರ್ಭದಲ್ಲಿ ಸಮುದಾಯದ ವಯೋವೃದ್ಧ ಕಲಾವಿದೆ ಶ್ರೀಮತಿ ಹೇಮಲತಾ ದೇವಿಯವರನ್ನು ಹಾಗೂ ಸಮುದಾಯ ಹಿತೈಷಿ ಮತ್ತು ಪೋಷಕರಾಗಿರುವ ಈ ಸತ್ಯ ನಾರಾಯಣ ಶ್ರೇಷ್ಠಿಯವರನ್ನು ಸನ್ಮಾನಿಸಲಾಯಿತು. ಈ ನಾಟಕೋತ್ಸವ ಕೋಲಾರ ಸಮುದಾಯ ಘಟಕವನ್ನು ಮತ್ತೆ ಚಟುವಟಿಕೆಗೆ ತೊಡಗಿಸಿದೆ, ಸ್ಥಳೀಯ ಇತರ ರಂಗ ತಂಡಗಳನ್ನು ಚಟುವಟಿಕೆಗೆ ಪ್ರೇರೇಪಿಸಿದೆ.

ಮುಂದಿನ ಹಂತದ ಕಾರ್ಯಕ್ರಮ ಸ್ಮರಣ ಸಂಚಿಕೆ ಬಿಡುಗಡೆ ವಿಚಾರ ಸಂಕಿರಣ ಮತ್ತು ಜನಸಂಸ್ಕೃತಿ ಉತ್ಸವದ ಸಮಾರೋಪ ಸಮಾರಂಭ. ಈ ಕಾರ್ಯಕ್ರಮವನ್ನು ಮಾರ್ಚ್ 2001ರಲ್ಲಿ ನಡೆಸಲು ನಿರ್ಧರಿಸಿದೆ. ○

ಎಳೆಯ ಕೊರಳಲ್ಲೂ ಪರಿವರ್ತನೆಯ ಹಾಡು

ತನ್ನ ಪುಟ್ಟ ಮಗನೊಂದಿಗೆ ಜನಸಂಸ್ಕೃತಿ ಉತ್ಸವದಲ್ಲಿ ಪಾಲ್ಗೊಂಡ ತಾಯಿಯೊಬ್ಬರ ಅನಿಸಿಕೆ, ಭಾವ, ತುಮುಲಗಳೇನು? ಹಂಬಲ, ಆಶಯಗಳೇನು? ಕಹೋನಾ ಪ್ಯಾರ್ ಹೈ ಎನ್ನುತ್ತಿದ್ದ ಮಗ ಈಗ .....



ಮಹಿಳಾ ತಂಡದ 'ಷಾಪುರದ ಸೀನಿಂಗಿ' ನಾಟಕದ ಒಂದು ದೃಶ್ಯ

ಸಮುದಾಯದ ಬಿಎಂಎಲ್ -ಕೆಜಿಎಫ್ ಘಟಕ ಇಪ್ಪತ್ತು ವರ್ಷ ತುಂಬಿದ ವರ್ಷವನ್ನು ವಿಶಿಷ್ಟವಾಗಿ ಆಚರಿಸಿಕೊಂಡಿತು.

ಸಿನಿಮಾ, ಟಿವಿಯ ಕೃತಕ ಸಂಸ್ಕೃತಿಯನ್ನಷ್ಟೇ ನಮ್ಮ ಮುಂದಿನ ಪೀಳಿಗೆಗೆ ಉಣಿಸಲೇ ಬೇಕಾದ ಪರಿಸ್ಥಿತಿಯಲ್ಲಿ, ಕೆ.ಜಿ.ಎಫ್‌ನ ನಾಗರೀಕರಿಗೆ ಇನ್ನೊಂದು ಬದಲಿವ್ಯವಸ್ಥೆ ಇದೆ ಎಂದು ತೋರಿಸಿಕೊಟ್ಟದ್ದು ಸಮುದಾಯದ ಬಿಇಎಂಎಲ್-ಕೆಜಿಎಫ್ ಘಟಕ.

ಬಂಧುಗಳ ಮನೆಗೆ ಹೋದ ನನಗೆ ಅವರು ಸಮುದಾಯದ ಒಬ್ಬ ಸದಸ್ಯರು ಈ ವರ್ಷ ಜನ ಸಂಸ್ಕೃತಿ ಉತ್ಸವವನ್ನಾಗಿ ಆಚರಿಸುತ್ತಿದ್ದೇವೆ ಎಂದು

ಮುಂದಿನ ಪುಟಕ್ಕೆ

ಮರುಚಿಂತನೆಗೆ ಚಾಲನೆ: ಸಮುದಾಯ ಬೆಳ್ಳಿ ಹಬ್ಬ



ಧಾರವಾಡದಲ್ಲಿ ಬೀದಿನಾಟಕಗಳು, ಚಿತ್ರ ಕಲಾ ಪ್ರದರ್ಶನಗಳು, ಕವಿಗೋಷ್ಠಿ, ವಿಚಾರಸಂಕಿರಣ ಇತರೆ ವೈವಿಧ್ಯಮಯ ಕಾರ್ಯಕ್ರಮಗಳು

ವರದಿ: **ಸಿ.ಆರ್.ಭಟ್, ಬಿ.ಐ.ಈಳಗೇರ, ಸೋಶೇಕಡ ಚಾಡರ**

ಸಮುದಾಯ ಹುಬ್ಬಳ್ಳಿ-ಧಾರವಾಡ ಘಟಕದ ಆಶ್ರದಲ್ಲಿ ಧಾರವಾಡದ ಕಡಪಾ ಮೈದಾನ ಮತ್ತು ಕರ್ನಾಟಕ ವಿದ್ಯಾವರ್ಧಕ ಸಂಘದ ಶತಮಾನೋತ್ಸವ ಕಲಾಭವನದಲ್ಲಿ ಡಿಸೆಂಬರ್ 28 ರಿಂದ ಜನವರಿ 1ರ ವರೆಗೆ ಐದು ದಿನಗಳ ಕಾಲ ಸಮುದಾಯ 25 ಬೆಳ್ಳಿ ಹಬ್ಬದ ಸಂದರ್ಭ ರಾಜ್ಯಮಟ್ಟದ ಬೀದಿ ನಾಟಕ ಉತ್ಸವ ನಡೆಯಿತು. ಈ ಉತ್ಸವವನ್ನು ಅಮರ ಕಲಾವಿದ ಸಪ್ದರ ಹಶ್ಮಿ ಸ್ಮಾರಕವಾಗಿ ಏರ್ಪಡಿಸಲಾಗಿದ್ದು, "ಸಾಂಸ್ಕೃತಿಕ ರಂಗದ ಮೇಲೆ ಜಾಗತೀಕರಣದ ದಾಳಿ ಎಂಬ ವಿಷಯದ ಸುತ್ತ ಬೀದಿ ನಾಟಕಗಳ ಪ್ರದರ್ಶನ, ಚಿತ್ರಕಲಾ ಪ್ರದರ್ಶನ, ಕವಿ ಗೋಷ್ಠಿ, ವಿಚಾರ ಸಂಕಿರಣ, ಮುಂತಾದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಖ್ಯಾತ ಚಲನಚಿತ್ರ ನಿರ್ದೇಶಕರಾದ ಎಮ್ ಎಸ್.ಸತ್ಯು ಉತ್ಸವವನ್ನು ಉದ್ಘಾಟಿಸಿದರು. ಬೀದಿ ನಾಟಕದಲ್ಲಿ ಕಲಾವಿದರ ಮತ್ತು ಜನರ ಮಧ್ಯೆ ಅಂತರವಿರಬಾರದು, ಜನರ ಸಮಸ್ಯೆಗಳ ಕುರಿತು ಕಲಾ ತಂಡಗಳಿಗೆ ತೀವ್ರ ಕಾಳಜಿ ಇರಬೇಕು, ಸಫ್ದರ್ ಹಶ್ಮಿಯ ಸಾಮಾಜಿಕ ಬದ್ಧತೆ ಈ ದಿಸೆಯಲ್ಲಿ ಅದ್ವಿತೀಯ ಹಾಗೂ ಅವಿಸ್ಮರಣೀಯವಾಗಿದೆ. ದೆಹಲಿಯಲ್ಲಿ ರಾಜಕೀಯ ಪ್ರೇರಿತ ಕೊಲೆಗಡುಕರಿಂದ ಹತ್ಯೆ ಆದ ನಂತರ ಅವರ ಶವ ಸಂಸ್ಕಾರದ ಮೆರವಣಿಗೆಯಲ್ಲಿ ಅಭಿಮಾನಿಗಳು ಹತ್ತು ಕಿಲೋ ಮೀಟರ್ ಉದ್ದಕ್ಕೂ ನೆರೆದಿದ್ದರು. ಎಂದು ನೆನಪಿಸಿಕೊಟ್ಟರು. ಭಾರತ ಬಹು ಸಂಸ್ಕೃತಿಗಳ ದೇಶವಾಗಿದೆ, ಯಾವುದೇ ಧರ್ಮದವರು ತಮ್ಮ ರಾಷ್ಟ್ರ ಭಕ್ತಿಯ ಕುರಿತು ಸಂಘ ಪರಿವಾರದಿಂದ ಪ್ರಮಾಣ ಪತ್ರ ಪಡೆಯಬೇಕಾಗಿಲ್ಲ. ಅದು ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಮತ್ತು ನಂತರದ 50 ವರ್ಷಗಳಲ್ಲಿ ಸಾಬೀತಾಗಿದೆ ಎಂದರು ಸತ್ಯು. ಸಮಕಾಲೀನ ಪರಿಸ್ಥಿತಿಯಲ್ಲಿ 'ಜಾಗತೀಕರಣ' ಮತ್ತು 'ಕೋಮುವಾದ'ಗಳ ಅಪಾಯಗಳ ಹಾಗೂ ಅನಾಹುತಗಳ ಕುರಿತು ಸತ್ಯು ಎಚ್ಚರಿಕೆ ನೀಡಿದರು. ಸಂವಿಧಾನ ಪರಾಮರ್ಶೆ, ಬಾಬ್ರಿ ಮಸೀದಿ ಕೆಡವಿದ್ದಲ್ಲೇ ರಾಮ ಮಂದಿರ ಕಟ್ಟುವ ಹಟವಾದ, ಪ್ರಧಾನಿ ವಾಜಪೇಯಿ ಇತ್ತೀಚಿಗೆ ಸಂಘ ಪರಿವಾರದ ಅಜಂಡಾ ಬೆಂಬಲಿಸಿ ತನ್ನ ಮುಖವಾಡ ಕಳಚಿ ಹಾಕಿದ್ದು ಇತ್ಯಾದಿಗಳ ಕುರಿತು ಸತ್ಯು ತನ್ನ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಸಮುದಾಯದ ಸ್ಥಾಪಕ ಅಧ್ಯಕ್ಷರೂ ಖ್ಯಾತ ರಂಗ ನಿರ್ದೇಶಕರೂ ಆದ ಪ್ರಸನ್ನ ಉತ್ಸವದ ಉದ್ಘಾಟನಾ ಸಮಾರಂಭದ ಅಧ್ಯಕ್ಷರಾಗಿದ್ದರು. ಧಾರವಾಡದ ಸಮುದಾಯ ಉತ್ಸವ ಸಾಂಸ್ಕೃತಿಕ ರಂಗದಲ್ಲಿ ಸಮಕಾಲೀನ ಸವಾಲುಗಳನ್ನು ಎದುರಿಸಲು ಮರುಚಿಂತನೆಗೆ ಚಾಲನೆ ನೀಡಲಿದೆ ಎಂದರು. ಬೀದಿ ನಾಟಕಗಳು ಸಿಗ್ರೆಟ್, ಲಘು ಪಾನೀಯ, ಒಳ ಉಡುಪು, ವಿದ್ಯುತ್ ಖಾಸಗೀಕರಣ, ಮುಂತಾದ ಪ್ರಚಾರಗಳಿಗೆ ಬಳಸುವುದನ್ನು ಪ್ರಸನ್ನ ಲೇವಡಿ ಮಾಡಿದರು. ಬೀದಿ ನಾಟಕಗಳು ಹಣದ ಆಸೆ ಆಮಿಷೆಗಳಿಗೆ ಬಲಿಯಾಗದೆ ಸಾಮಾಜಿಕ ಜವಾಬ್ದಾರಿಯಿಂದ ರೈತ-ಕಾರ್ಮಿಕರ ಜ್ವಲಂತ ಸಮಸ್ಯೆಗಳ ಕುರಿತು ತಮ್ಮ ಗಮನ ನೀಡಲು ಕರೆ ಕೊಟ್ಟರು. ಹಿಂದಿ ಮಾತ್ರ ರಾಷ್ಟ್ರ ಭಾಷೆ ಅಲ್ಲ ಭಾರತದ ಎಲ್ಲಾ ಭಾಷೆಗಳು ರಾಷ್ಟ್ರ ಭಾಷೆಗಳಾಗಿವೆ. ಕರ್ನಾಟಕವು ಸೇರಿದಂತೆ ಎಲ್ಲಾ ರಾಜ್ಯಗಳಲ್ಲಿ "ರಾಷ್ಟ್ರೀಯ ನಾಟಕ ಶಾಲೆ"ಗಳನ್ನು ಸ್ಥಾಪಿಸಬೇಕೆಂದರು.

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಅಧ್ಯಕ್ಷರಾದ ಡಾ.ಎ.ಮುರಿಗೆಪ್ಪ ಅವರು ಸಿ.ಆರ್.ಭಟ್ ಮತ್ತು ಸಿ.ಕೆ.ಗುಂಡಣ್ಣ ಇವರ ಸಂಪಾದಕತ್ವದಲ್ಲಿ ಪ್ರಕಟವಾದ ವಿವಿಧ ಬರಹಗಾರರ ಲೇಖನಗಳಿರುವ 'ಸಮುದಾಯ-25 ಜನಸಂಸ್ಕೃತಿ ಉತ್ಸವ, ಜಾಥಾಗಳು' ಎಂಬ ಪುಸ್ತಕ ಬಿಡುಗಡೆ ಮಾಡಿದರು. ಹುಬ್ಬಳ್ಳಿಯ ಬೇಂದ್ರೆ ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಪ್ರೊ. ಕೆ.ಎಸ್.ಶರ್ಮಾ ಚಿತ್ರಕಲಾ ಪ್ರದರ್ಶನ ಉದ್ಘಾಟಿಸಿದರು. ಸಾಂಸ್ಕೃತಿಕ ಆಂದೋಲನ ಸಾಮಾಜಿಕ ಕ್ರಾಂತಿಗೆ ಪ್ರೇರಣೆ ಆಗಿರಬೇಕೆಂದರು. ಉತ್ಸವದ 5 ದಿನಗಳಲ್ಲಿ 1986 ರಲ್ಲಿ ಅಣುಯುದ್ಧ ವಿರೋಧಿ ಹಾಗೂ ವಿಶ್ವ ಶಾಂತಿಯ ಸಂದೇಶ ಹೊತ್ತ ನೂರು ಅಡಿಗಳ



ಸ್ವರ್ಣಸಂಚಿಕೆ ಬಿಡುಗಡೆ - ಈಳಗೇರಾ, ಡಾ|| ಮುರಿಗೆಪ್ಪ, ಪ್ರಸನ್ನ, ಎಂ.ಎಸ್.ಸತ್ಯು

ಸಮುದಾಯದ ವರ್ಣ ಚಿತ್ರವನ್ನು ಮರು ಪ್ರದರ್ಶಿಸಲಾಯಿತು. ಜೊತೆಗೆ ಸಿನಿಮಾ, ರಂಗಭೂಮಿ, ಶಾಸ್ತ್ರೀಯ ಸಂಗೀತ, ನೃತ್ಯ, ಜನಪದ ಮುಂತಾದ ವಿವಿಧ ಕ್ಷೇತ್ರಗಳ ಗಣ್ಯಾತೀಗಣ್ಯರ ಛಾಯಚಿತ್ರಗಳನ್ನು ಪ್ರದರ್ಶಿಸಲಾಯಿತು. ಪುಸ್ತಕಗಳ ಪ್ರದರ್ಶನ ಹಾಗೂ ಪ್ರಸಾರಗಳನ್ನು ಹಮ್ಮಿಕೊಳ್ಳಲಾಗಿತ್ತು.

ಪ್ರಸಿದ್ಧ ಬಂಡಾಯ ಸಾಹಿತಿ, ಸಂಕ್ರಮಣ ಪತ್ರಿಕೆಯ ಸಂಪಾದಕ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಪ್ರೊ. ಚಂದ್ರಶೇಖರ ಪಾಟೀಲ - ಚಂಪಾ ಅವರ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿ ನಡೆಯಿತು. ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಜಾಗತೀಕರಣದ ಸಂದರ್ಭ ನಾವು ಧ್ವನಿ ಎತ್ತಬೇಕಾದುದು ಏಕಧ್ರುವ ಶಕ್ತಿ ಕೇಂದ್ರದ ಮೂಲಕ ಬಲಿಷ್ಟ ಹಾಗೂ ಬಡ ರಾಷ್ಟ್ರಗಳ ನಡುವಿನ ಅಸಮಾನ ಒಪ್ಪಂದಗಳ ಅನಾಹುತಗಳ ವಿರುದ್ಧವೇ ಹೊರತು ವಿಜ್ಞಾನ, ತಂತ್ರಜ್ಞಾನ, ಕಲೆ, ಸಾಹಿತ್ಯ, ಸಂಸ್ಕೃತಿ, ಸರಕು ಸಾಮಗ್ರಿಗಳ ಪರಸ್ಪರ ಕೊಡು ಕೊಳ್ಳುವ ಸಹಕಾರ ಸೌಹಾರ್ದತಾ ಆಧಾರದ ವಿನಿಮಯಗಳನ್ನಲ್ಲ ಎಂದ ಚಂಪಾ 'ಕೋಮುವಾದ' ಜಾಗತೀಕರಣದ ಇನ್ನೊಂದು ಮುಖ ಎಂದು ವಿವರಿಸಿದರು ಚಂಪಾ. ಸ್ವದೇಶಿ ನೆಪದಿಂದ 'ಹಿಂದುತ್ವವಾದ'ವನ್ನು ದೇಶ ವಿದೇಶಗಳಲ್ಲಿ ಜನರ ಮೇಲೆ ಬಲವಂತದಿಂದ ಹೇರಿ ಬಹುಸಂಸ್ಕೃತಿಗಳ ನಡುವಿನ ಸಹಬಾಳ್ವೆಯನ್ನು ಹಾಳುಗೆಡಹುತ್ತಿರುವ ಸಂಘ ಪರಿವಾರದ ಫ್ಯಾಸಿಸ್ಟ್ ಪ್ರವೃತ್ತಿಯನ್ನು ಕಟುವಾಗಿ ಟೀಕಿಸಿದರು. ಸಮುದಾಯ, ಬಂಡಾಯ ಸಾಹಿತ್ಯ ಮುಂತಾದ ಸಾಂಸ್ಕೃತಿಕ ಸಂಘಟನೆಗಳು ಸಮಕಾಲೀನ ಸವಾಲುಗಳನ್ನು ವಿಶಾಲ ತಳಹದಿಯ ಐಕ್ಯತೆಯಿಂದ ಎದುರಿಸಬೇಕೆಂದರು. ಕವಿಗೋಷ್ಠಿಯಲ್ಲಿ ಶ್ರೀಮತಿ ಯರಾದ ಸುಕನ್ಯಾ ಮಾರುತಿ, ಕಮಲಾ ಹೆಮ್ಮಿಗೆ, ಅನಿತಾ ಪರ್ವತಿಕರ, ಸೀತಾ ಚಪ್ಪರ, ಜಯಂತಿ ರೇವಡಿ ಮತ್ತು ಶ್ರೀಯುತರಾದ ಸಂಜೀವ ಕುಲಕರ್ಣಿ, ಜಗದೀಶ ಮಂಗಳೂರಮಠ, ಅಶೋಕ ಶೆಟ್ಟರ, ಎಂ.ಬಿ.ದಿಲಶಾಧ, ಗಂಗಾಧರ ಗಡದ, ತುರುವಿನ ಹಾಳಚಂದ್ರು, ಶಂಕರಯ್ಯ ಆರ್ ಘಂಟಿ, ಪ್ರಹ್ಲಾದ ಅಗಸನಕಟ್ಟಿ, ಶ್ರೀ ಶೈಲ ಹುದ್ದಾರ, ರಾಜೀವ ನದಾಫ,

ಪುಟ 10 ಕ್ಕೆ

.... ಪರಿವರ್ತನೆಯ ಹಾಡು

ತಿಳಿಸುತ್ತಾ ಅವರ ಯೋಜನೆಗಳನ್ನು ವಿವರಿಸಿದಾಗ ಬಿಇಎಂಎಲ್ ಕಾಲೋನಿಯ ಜನರ ಬಗ್ಗೆ ಒಂದು ರೀತಿಯ ಹೊಟ್ಟೆಕಿಚ್ಚಾಯಿತು.

ಬೆಂಗಳೂರಿನಲ್ಲಿ ವಾಸವಾಗಿರುವ ಒಂದು ಚಿಕ್ಕ ಮಗುವಿನ ತಾಯಿಯಾಗಿರೋ ನಾನು (ನನ್ನ ವಾಸಸ್ಥಳದಿಂದ) ಎಲ್ಲೋ ದೂರದಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲೋ ಅಥವಾ ಇನ್ನೆಲ್ಲೋ ಸೆಂಟರ್ ಪ್ಲೇಸ್‌ನಲ್ಲಿ ನಡೆಯುವ ನಾಟಕೋತ್ಸವ ಅಥವಾ ಇನ್ನಾವುದೇ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ತಾಕತ್ತಿಲ್ಲದೇ (ಮಗುವನ್ನು ರಾತ್ರಿಯ ಹೊತ್ತು ಅಷ್ಟು ದೂರ ಕರೆದುಕೊಂಡು ಹೋಗಲು ಸಾಧ್ಯವಾಗದೇ) ನನ್ನ ಮಗನಿಗೆ 'ಕಹೋ ನ ಪ್ಯಾರ್ ಹೇ' ಹಾಡು , ನೃತ್ಯದ ಸಂಸ್ಕೃತಿಯನ್ನಷ್ಟೇ ಪರಿಚಯ ಮಾಡಿಕೊಡಲು ಸಾಧ್ಯತೆಯನ್ನಷ್ಟೇ ಹೊಂದಿರುವ ನನ್ನ ದುರದೃಷ್ಟಕ್ಕೆ ಹಳಿದುಕೊಳ್ಳುತ್ತಿರುವಾಗ ನನಗೆ ದೂರದ ಆಸೆಯೊಂದು ಮಿಂಚಿತು. ನಿಮ್ಮ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನನ್ನ ಮಗನಿಗೆ ತೋರಿಸಲು ನನಗೆ ಆಸೆ ಆ ಸಮಯದಲ್ಲಿ ನಿಮ್ಮ ಮನೆಗೆ ಬಂದು ಇರಬಹುದಾ' ಎಂದು ನನ್ನ ಬಂಧುವನ್ನು ಕೇಳಿದಾಗ ಅವರು ತಮ್ಮ ಎಲ್ಲಾ ತೊಂದರೆ ತಾಪತ್ರಯಗಳ ನಡುವೆ, ನನ್ನ ಮಗುವಿನೊಂದಿಗೆ ನನಗೆ ಆತಿಥ್ಯ ನೀಡಿದಕ್ಕಾಗಿ ಅವರಿಗೆ ನಾನು ಚಿರಋಣಿ.

ಬರಿಯ 'ಕಹೋನ ಪ್ಯಾರ್ ಹೈ ಕ್ಯಾಸೆಟ್ಟನ್ನೇ ಹಾಕಿ ಕೇಳುತ್ತಿದ್ದ (ಅದು ಬೇಡ ಅಂತ ಹೇಳ್ತಾ ಇಲ್ಲ ನಾನು) ನನ್ನ ಮಗ, ಅಮ್ಮ 'ಲಾಲ್ ಝುಂಡಾ ...... ಕಾಮ್ರೇಡ್' ಕ್ಯಾಸೆಟ್ ಹಾಕಿ ಎಂದು ಅದರ ಎರಡು ಸಾಲುಗಳನ್ನು ಕಲಿತು ಅವನ ಬಾಲ ಭಾಷೆಯಲ್ಲಿ ಹಾಡುವಾಗ ನನಗೆ ಸ್ವರ್ಗ (ಅಂಥಹುದೇನಾದರೂ ಇದ್ದರೆ) ಕಂಡಷ್ಟು ಖುಷಿಯಾಯಿತು. ಇದು ಜನ ಸಂಸ್ಕೃತಿ ಉತ್ಸವದ ಪರಿಣಾಮ.

ಜನಸಂಸ್ಕೃತಿ ಉತ್ಸವದ ಕೊನೆಯ ಹಂತದ ಕಾರ್ಯಕ್ರಮದ ಭಾಗವಾಗಿ 6 ದಿನಗಳಷ್ಟು ಕಾಲ (2001ನೇ ಜನವರಿ 16 ರಿಂದ 21) ನಾಟಕ ಸೆನ್ನಾನ,



ಸೌಹಾರ್ದ ರಂಗಮೇಳ ಉದ್ಘಾಟನೆಯಲ್ಲಿ ರಮೇಶ ಚಂದ್ರ ಸುತಾರ್, ಪ್ರಸನ್ನ ಮತ್ತು ವೇಣುಗೋಪಾಲ್

ಹಾಡುಗಳು ನನಗಂತೂ ಹಸಿದವನಿಗೆ ಮೃಷ್ಟಾನ್ನ ಭೋಜನ ಸಿಕ್ಕಿದಂತಾಯ್ತು.

'ಷಾಪುರದ ಸೀನಿಂಗಿ' ಮಹಿಳೆಯರೇ ನಡೆಸಿಕೊಟ್ಟ ನಾಟಕವಾಗಿ ಖುಷಿಕೊಟ್ಟರೆ ಓಬಲ ರಾಜು ಅವರ ಹಾಡು, ಕುಣಿತ ನನ್ನ ಮಗನ ಆಸಕ್ತಿಯನ್ನ ಸೆಳೆದುಕೊಂಡದ್ದಕ್ಕಾಗಿ ಖುಷಿ ಕೊಟ್ಟಿತು. **ಎಲ್ಲಾ ಭಾಷೆಯ ಜನರಿಗೂ (ಕನ್ನಡ, ತಮಿಳು, ತೆಲುಗು) ತಮ್ಮ ಭಾಷೆಯಲ್ಲಿ ನಾಟಕ ನೋಡಲು ಅವಕಾಶ ಮಾಡಿಕೊಟ್ಟಿದ್ದು ಈ ಉತ್ಸವದ ಇನ್ನೊಂದು ವೈಶಿಷ್ಟ್ಯ.**

ಸಮುದಾಯ ಬಿಇಎಂಎಲ್‌ನ ಇಪ್ಪತ್ತು ವರ್ಷದ ನಡಿಗೆಯಲ್ಲಿ ಸಹಕಾರನೀಡಿದ ಹಿರಿಯರನ್ನು ಸನ್ಮಾನಿಸಿದ್ದು ಈ ಉತ್ಸವದ ಮತ್ತೊಂದು ವಿಶೇಷತೆ.

ಮುಖ್ಯ ಅತಿಥಿಗಳಾಗಿ ಬಂದ ಲೋಕಲ್ ಪ್ರತಿಷ್ಠಿತರ ಮಾತನ್ನು ಕೇಳಿದಾಗ ನಾಟಕದ ಸಹೃದಯ ಪ್ರೇಕ್ಷಕರನ್ನು ನೋಡಿದಾಗ ಸಮುದಾಯ ಬಿಇಎಂಎಲ್‌ನ ಸಾಧನೆಯ ಬಗ್ಗೆ ಹೆಮ್ಮೆಯಾಗುತ್ತದೆ.

ಸಹೃದಯ ಪ್ರೇಕ್ಷಕರೊಂದಿಗೆ ಕುಳಿತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವೀಕ್ಷಿಸುವುದೂ ಒಂದು ವಿಶೇಷವಾದ ಅನುಭವ ಎಂದು ನನ್ನ ಅನಿಸಿಕೆ. ಈ ಬಗ್ಗೆ ನಾನು ಮಾತನಾಡಿದಾಗ, ಸಮುದಾಯದ ಒಬ್ಬ ಸದಸ್ಯ ' ನಾವು ಮೊದಲು ನಾಟಕ ಮಾಡುವಾಗ ಆಗಾಗ್ಗ ಮಕ್ಕಳು ಗಲಾಟೆ ಮಾಡಬಾರದು' ಎಂದು ಅನೌನ್ಸ್ ಮಾಡಬೇಕಾಗಿತ್ತು. ಆದರೆ ಈಗ ಅದರ ಅಗತ್ಯತೆ ಇಲ್ಲ ಎಂದರು. ಅವರ ಮಾತು ಅಕ್ಷರಶಃ ನಿಜ ಎಂದು ನನ್ನ ಅನುಭವವೇ ಹೇಳುತ್ತಿದೆ.

ನಾನು ನನ್ನ ಈ ಅನುಭವವನ್ನು ಹೇಳುತ್ತಾ ಸಮುದಾಯ ಬಿಇಎಂಎಲ್ ನವರಿಗೆ ಅವರ ಜನ ಸಂಸ್ಕೃತಿ ಉತ್ಸವದ ವಿವರವನ್ನು ಐಕ್ಯರಂಗದಲ್ಲಿ ಓದುವ ಕಾತುರವನ್ನೂ ತೋಡಿಕೊಳ್ಳುತ್ತೇನೆ. ಹಾಗೆಯೇ ಬೆಂಗಳೂರು ಸಮುದಾಯವನ್ನು 'ನೀವು ನಿಮ್ಮ ನಾಟಕ ಪ್ರದರ್ಶನ ಹಾಗೇ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಬೆಂಗಳೂರಿನ ಬೇರೆ ಬೇರೆ ಸ್ಥಳಗಳಲ್ಲಿ (Residential places) ಪ್ರದರ್ಶಿಸಲು ಸಾಧ್ಯವಿಲ್ಲವೆ? ನೀವೇನಾದರೂ ಈ ನಿಟ್ಟಿನಲ್ಲಿ ಪ್ರಯತ್ನ ಮಾಡಿದರೆ ನನ್ನಂಥ ಎಷ್ಟೋ ತಾಯಂದಿರಿಗೆ ತಮ್ಮ ಮಕ್ಕಳಿಗೆ ಕೃತಕ ಸಂಸ್ಕೃತಿಯ ಬದಲು ಸಹಜ ಸಂಸ್ಕೃತಿಯನ್ನು ಪರಿಚಯ ಮಾಡಿಕೊಡುವ ಹಂಬಲವನ್ನು ಪೂರೈಸುವಂತಾಗುತ್ತದೆ ಎಂದು ಕೇಳಿಕೊಳ್ಳಬಯಸುತ್ತೇನೆ.

- ವಿಶಾಲ

ಸಮುದಾಯ ಸಂಘಟನೆ

ಕಳೆದ 20 ವರ್ಷಗಳಿಂದಲೂ ಕ್ಲಿಪ್ತ ಸಮಯದಲ್ಲಿ ಸರ್ವಸದಸ್ಯರ ಸಭೆ. ಸಮ್ಮೇಳನಗಳನ್ನು ನಡೆಸಿ ಪದಾಧಿಕಾರಿಗಳ ಹಾಗೂ ಕಾರ್ಯಕಾರಿ ಸಮಿತಿಗೆ ಚುನಾವಣೆಗಳನ್ನು ನಡೆಸಿಕೊಂಡು ಬರುತ್ತಿದೆ. ಸದಸ್ಯತ್ವ ಮಾಡಬೇಕೆಂದು ಸಮುದಾಯ ರಾಜ್ಯ ಸಮ್ಮೇಳನ ತೀರ್ಮಾನ ತೆಗೆದುಕೊಂಡ ನಂತರ ಪ್ರತಿ ಎರಡು ವರ್ಷಕ್ಕೊಮ್ಮೆ ಸದಸ್ಯರ ನವೀಕರಣ ನಡೆದು ಹೊಸ ಸದಸ್ಯರನ್ನು ಸೇರಿಸಲಾಗುತ್ತದೆ.

ಕಳೆದ 1999ರಲ್ಲಿದ್ದ ಸದಸ್ಯರ ಸಂಖ್ಯೆ ಒಟ್ಟು 106. 25 ಮಂದಿ ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ 9 ಮಂದಿ ಪದಾಧಿಕಾರಿಗಳಿದ್ದಾರೆ. ಸಮುದಾಯದ ಸಂವಿಧಾನಕ್ಕೆ ಅನುಗುಣವಾಗಿ ಕಾರ್ಯ ಕಲಾಪಗಳು, ಚುನಾವಣೆಗಳು ನಡೆಯುತ್ತವೆ.

ಕೋಲಾರ ಜಿಲ್ಲಾ ಮಟ್ಟದಲ್ಲಿ ಒಂದು ಸಂಘಟನಾ ಸಮಿತಿಯನ್ನು ರಚಿಸಲಾಗಿದೆ. ಕೋಲಾರ, ಬಾಗೇಪಲ್ಲಿ, ಕೆ.ಜಿ.ಎಫ್ ಸಮುದಾಯಗಳ ಪ್ರತಿನಿಧಿಗಳಲ್ಲದೆ ಇತರ ಕೆಲವು ತಾಲೂಕುಗಳ ಪ್ರತಿನಿಧಿಗಳೂ ಈ ಸಂಘಟನಾ ಸಮಿತಿಯಲ್ಲಿದ್ದಾರೆ. ಜಿಲ್ಲೆಯಲ್ಲಿ ಸಮುದಾಯ ಸಾಂಸ್ಕೃತಿಕ ಸಂಘಟನೆಯನ್ನು ವಿಸ್ತರಿಸುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ.

ಮಹಿಳೆ ಮತ್ತು ಸಬಲೀಕರಣ..........

ಪುಟ 4 ರಿಂದ

ಪುಂಗಿಯಿಂದ ಹೊರಬಿದ್ದಿರುವ ಸಬಲೀಕರಣ. ಮಹಿಳಾ ಸಶಕ್ತೀಕರಣ ಇಷ್ಟೊಂದು ಸರಳವಾಗಿರುವುದಾದರೆ ಇಷ್ಟು ವರ್ಷ ಕಾಯ್ದದ್ದೇಕೆ?

ಉಳಿತಾಯ ಮನೋಭಾವನೆಯನ್ನ ಪ್ರೇರೇಪಿಸುವುದು ಸ್ವಾಗತಾರ್ಹ. ಉಳಿತಾಯ ಯೋಜನೆಗಳನ್ನ ರೂಪಿಸುವುದು ಇನ್ನೂ ಸ್ವಾಗತಾರ್ಹ. ಆದರೆ ಸಣ್ಣ ಉಳಿತಾಯವೆ ಸರ್ವರೋಗಕ್ಕೆ ಮದ್ದು ಎನ್ನುವುದು ಸರಿಯೇ? ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸದೆ, ಪಡಿತರ ವ್ಯವಸ್ಥೆಯ ಮೂಲಕ ಜೀವನಾವಶ್ಯಕ ವಸ್ತುಗಳನ್ನು ಪೂರೈಸದೆ ಕೃಷಿ ಕೂಲಿಕಾರರಿಗೆ ಕನಿಷ್ಠ ಕೂಲಿ ನಿಗದಿ ಮಾಡದೆ ಸ್ವ-ಸಹಾಯ ಗುಂಪುಗಳ ಮೂಲಕವೇ ಬಡ ಮಹಿಳೆಯರನ್ನ ಸಬಲೀಕರಿಸುತ್ತೇವೆಂದರೆ ಸಾಧ್ಯವೆ?

ಜೀವನಾವಶ್ಯಕ ವಸ್ತುಗಳ ಬೆಲೆಗಳನ್ನ ಒಂದೇ ಸಮನೆ ಏರಿಸುತ್ತಾ ಉದ್ಯೋಗ ಹಾಗೂ ಕೂಲಿಯನ್ನು ಕಡಿತ ಮಾಡುತ್ತಾ ಉಳಿತಾಯ ಮಾಡಿ ಎಂದು ಕರೆ ನೀಡುವುದು ಸಾಧುವೆ? ಉಳಿತಾಯ ಮಾಡುವುದಾದರು ಹೇಗೆ? ದರೋಡೆ ಮಾಡುವ ಮೂಲಕವೆ? ಅಥವಾ ಗಂಜಿಯನ್ನೂ ಕುಡಿಯದೆ ಹಣ ಕೂಡಿಡುವುದೆ? ಅದನ್ನೂ ಸರ್ಕಾರವೆ ತಿಳಿಸಿದ್ದರೆ ಒಳ್ಳೆಯದಿತ್ತು.

ಸ್ವ-ಸಹಾಯ ಗುಂಪುಗಳ ಸಾಧನೆ ಹಾಗೂ ಯಶಸ್ಸಿನ ಕುರಿತು ನಮ್ಮ ಸರ್ಕಾರ ಕೇರಳಾ ರಾಜ್ಯವನ್ನು ಉದಾಹರಿಸಿರುವುದು ಸರಿಯಷ್ಟೆ. ಆದರೆ ಕೇರಳದ ಪಡಿತರ ವ್ಯವಸ್ಥೆ, ಕೂಲಿ ವ್ಯವಸ್ಥೆ, ಉದ್ಯೋಗ ಹಂಚಿಕೆ, ವಿದ್ಯಾಭ್ಯಾಸ ವಿವರಿಸುವುದನ್ನ ಮರೆತಿದೆಯಷ್ಟೇ. 14 ಜೀವನಾವಶ್ಯಕ ವಸ್ತುಗಳನ್ನು ಅರ್ಧಬೆಲೆಗೆ ವಿತರಿಸುವ ಕೇರಳವೆಲ್ಲಿ. ಅಕ್ಕಿ, ಗೋಧಿ, ಸಕ್ಕರೆಯನ್ನೂ ಕಸಿಯುತ್ತಿರುವ ಕರ್ನಾಟಕವೆಲ್ಲಿ. ಕೇರಳ ಎಲ್ಲ ಸಾಧನೆಗಳಲ್ಲೂ ಮುಂದೆ. ಕರ್ನಾಟಕ ಸ್ವ-ಸಹಾಯ ಗುಂಪುಗಳ ರಚನೆಯಲ್ಲಿ ಮಾತ್ರ ಕೇರಳವನ್ನು ಅನುಕರಣೆ ಮಾಡಿದರೆ ಅಲ್ಲೂ ಹಿಂದೆಯೆ.

ಎರಡನೆಯದಾಗಿ ಆರ್ಥಿಕ ಚಟುವಟಿಕೆಗಳನ್ನ ನಡೆಸುವ ಮೂಲಕ ಮಹಿಳೆಯರನ್ನ ಸ್ವಾವಲಂಬಿಗಳನ್ನಾಗಿಸುವ ಸರ್ಕಾರದ ಘೋಷಣೆ ಸಂತೋಷಕರ. ಆದರೆ ಶುಂಠಿ, ಅರಿಶಿನ, ಹಪ್ಪಳ, ಉಪ್ಪಿನಕಾಯಿ, ಸಂಡಿಗೆ, ಹಾಲು ಹಾಲಿನ ಪುಡಿ ಸಗಣಿ ಎಲ್ಲವನ್ನೂ ವಿದೇಶದಿಂದ ತರಿಸಲು ಮುಕ್ತ ಅನುಮತಿ ನೀಡಿ ಆಮದು ಸುಂಕ ಕಡಿಮೆ ಮಾಡಿ ಸ್ವಾವಲಂಬನೆ ಸಾಧಿಸುವುದು ಹೇಗೆ ಅರ್ಥವಾಗುತ್ತಿಲ್ಲ. ಇದು ಯಾವ ಅರ್ಥಶಾಸ್ತ್ರಜ್ಞರ ಸಲಹೆಯೋ ಏನೋ ತಿಳಿಯದು. ಗೃಹ ಕೈಗಾರಿಕೆಗಳು, ಗಾರ್ಮೆಂಟ್ಸ್, ಬೀಡಿ, ಗೋಡಂಬಿ, ಕಾಫಿ, ಟೀ, ಅಷ್ಟೇ ಏಕೆ ಇಡಿಯಾಗಿ ಕೃಷಿ ಕ್ಷೇತ್ರಗಳು ಮುಳುಗಡೆಯಾಗುತ್ತಿರುವಾಗ "ಮಹಿಳೆಯರನ್ನ ಮಾತ್ರ" ಅದ್ಯಾವ ದೋಣಿಯಿಂದ ಮೇಲೆತ್ತುವರೋ ತಿಳಯುತ್ತಿಲ್ಲ. ಸ್ವಾವಲಂಬನೆ ಸಾಧಿಸುವುದು ಹೇಗೆ ಹೊಳೆಯುತ್ತಿಲ್ಲ.

ಮೂರನೆಯದಾಗಿ ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ಮಹಿಳೆಯರನ್ನ ತೊಡಗಿಸಿ ಆದಾಯ ಹೆಚ್ಚಿಸಿ ಬಡತನ ನಿರ್ಮೂಲನೆ ಮಾಡುವ ಪ್ರಸ್ತಾಪ ಮುಖ್ಯವಾದುದು. ಕೃಷಿ ರಂಗ ದಾಳಿಗೆ ಸಿಲುಕಿ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವಾಗ, ಮಹಿಳೆಯರು ದುಡಿಮೆ ಮಾಡುವ ಅಸಂಘಟಿತ ವಲಯವನ್ನು ಉದಾರೀಕರಣದ ಭೂತ ನುಂಗಿ ನೀರು ಕುಡಿಯುತ್ತಿರುವಾಗ ಆದಾಯೋತ್ಪನ್ನ ಚಟುವಟಿಕೆಗಳು ಎಲ್ಲಿ ನಡೆಯುತ್ತವೆ ತಿಳಿಸಬೇಕು. ಮೂಲಾದಾಯವೂ ಇಲ್ಲದೆ ಆದಾಯೋತ್ಪನ್ನ ಚಟುವಟಿಕೆಗಳ ದಾರಿಯೂ ಕಾಣದೆ ಮೈ ಮಾರಿ ಬದುಕುತ್ತಿರುವ ಕುಟುಂಬ ಸಲಹುತ್ತಿರುವ ಮಹಿಳೆಯರ ಸಂಖ್ಯೆ ಹೆಚ್ಚಾಗುತ್ತಿರುವ ಬಗ್ಗೆ ಸರ್ಕಾರಕ್ಕೆ ತಿಳಿಯದೆ? ಘೋಷಣೆಯ ಜೊತೆಗೆ ನಿರ್ದಿಷ್ಟ ಕಾರ್ಯಕ್ರಮ ಆಳುವ ಜನರಿಗೆ ಬೇಡವೆ? (ಇಷ್ಟಾದರು ಆಸ್ತಿ ಹಕ್ಕಿನ ಪ್ರಸ್ತಾಪವಿಲ್ಲ) ಎಂಬುದನ್ನ ಮರೆಯುವಂತಿಲ್ಲ.

ನಾಲ್ಕನೆಯದಾಗಿ ಸಾಲ ನೀಡುವಂತಹ ಸಂಸ್ಥೆಗಳಿಂದ ಮಹಿಳೆಯರಿಗೆ ಸಾಲ ಕೊಡಿಸುವ ಭರವಸೆ ಬೇರೆ. ಮಹಿಳೆಯರಿಗೆ ಸಾಲ-ಸೌಲಭ್ಯ ನೀಡಿ ಆರ್ಥಿಕ ಚಟುವಟಿಕೆಗಳನ್ನ ನಡೆಸಲು ಸಹಕಾರಿಯಾಗುವ ಸಲುವಾಗಿ 'ಡ್ವಾಕ್ರಾ' ಯೋಜನೆಯನ್ನು ಘೋಷಿಸಿ ಸಾಕಷ್ಟು ಪ್ರಚಾರ ಗಿಟ್ಟಿಸಿ ಅದರ ಅಗತ್ಯ ಇರುವಾಗಲೆ ಅದನ್ನ ಹಿಂತೆಗೆದ ರೀತಿ ನಮಗೆ ಚೆನ್ನಾಗಿಯೇ ನೆನಪಿದೆ. ಇದ್ದಿದ್ದರಲ್ಲಿ ಒಳ್ಳೆಯದಿದ್ದ ಡ್ವಾಕ್ರಾ ಯೋಜನೆಯನ್ನೇ ರದ್ದುಪಡಿಸಿ ಅದರ ಬದಲಿಗೆ 'ಸ್ವ-ಸಹಾಯ' ಗುಂಪುಗಳನ್ನು ಪ್ರತಿಪಾದಿಸಿ ಈಗ ಅದೇ ಹಳೇ ರಾಗ ಹಾಡಿದರೆ ಕೇಳುವವರು ಯಾರು? ಸಾಲ ಕೊಡಿಸುವ ಪ್ರಾಮಾಣಿಕ ಕಾಳಜಿಯಿದ್ದರೆ ಡ್ವಾಕ್ರಾ ಯೋಜನೆಯನ್ನ ಉಳಿಸಿಕೊಳ್ಳುವ ಪ್ರಾಮಾಣಿಕತೆ ಪ್ರದರ್ಶಿಸಬಹುದಿತ್ತು.

ಆದರೆ ಮಹಿಳೆಯರ ವಿಚಾರದಲ್ಲಿ ಸಾಧಿಸುವುದಕ್ಕಿಂತ ಘೋಷಿಸುವುದೇ ಹೆಚ್ಚು ಎನ್ನುವುದೇ ವಾಸ್ತವ. ಸರ್ಕಾರಗಳು ಅಥವಾ ಆಳುವ ಜನರಿಗೆ ನಿಜವಾಗಿಯೂ ಮಹಿಳೆಯರ ಸಶಕ್ತೀಕರಣದಲ್ಲಿ ನಂಬಿಕೆಯಿದ್ದರೆ ಶೇ.33 ಮಹಿಳಾ ಮೀಸಲಾತಿ ಮಸೂದೆ ವಿಚಾರದಲ್ಲಿ ಹತ್ತಾರು ಅವತಾರ ತಾಳುವ ಅಗತ್ಯ ಬೀಳುತ್ತಿರಲಿಲ್ಲ. ಮಹಿಳೆಯ ಮತ ಬೇಕು. ರಾಜಕೀಯ ಪಾತ್ರ ಬೇಡ. ಮಹಿಳೆಗೆ ಬಲ ಬೇಕು ಮನೆಗಷ್ಟೇ ಸೀಮಿತವಾಗಿರಬೇಕು. ಮಹಿಳೆ ದುಡಿಬೇಕು. ಆಕೆಗೆ ಆರ್ಥಿಕ ಸ್ವಾತಂತ್ರ್ಯ ಆಸ್ತಿಹಕ್ಕು ಮಾತ್ರ ಬೇಡ. ಈ ಧೋರಣೆಗಳು ಆಳುವವರ ತಲೆಯಲ್ಲಿ ಅಂತರ್ಗತವಾಗಿರುವಾಗ ಘೋಷಣೆಗಳು ಮಾತ್ರವೇ ಬದಲಾವಣೆ ತರುವುದಿಲ್ಲ. ಜಾರಿಗಾಗಿ ರಾಜಕೀಯ ಇಚ್ಛಾಶಕ್ತಿ, ಬದ್ಧತೆ, ನಿರ್ದಿಷ್ಟ ಕಾರ್ಯಕ್ರಮಗಳು ಬೇಕು. ಸಶಕ್ತೀಕರಣವನ್ನು ಸಾಧಿಸಲು ಮಹಿಳೆಯರ ಬೇಡಿಕೆಗಳನ್ನ ಮನ್ನಿಸಬೇಕು. ಸರ್ವತೋಮುಖ ಅಭಿವೃದ್ಧಿಗೆ ಸಮಗ್ರ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಇದು ರಾಜ್ಯದ ಮಹಿಳೆಯರ ಆಶಯ.

ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಹಬ್ಬದ ರೀತಿಯಲ್ಲಿ ಅದ್ದೂರಿಯಾಗಿ ಆಚರಿಸುತ್ತಿರುವ ಸಂದರ್ಭದಲ್ಲಿ ಅದರ ಹಿನ್ನೆಲೆ, ಮಹತ್ವವನ್ನು ಗೌಣಗೊಳಿಸದೆ ಮಹಿಳೆಯರ ಹಕ್ಕುಗಳನ್ನು ಮಾನ್ಯ ಮಾಡಬೇಕಾದುದು ಕರ್ತವ್ಯ.

ಉಳಿತಾಯದ ಸೂತ್ರಗಳನ್ನ ಅಲ್ಲಗಳೆಯುವ ಪ್ರಯತ್ನವೇನೂ ನಮದಲ್ಲ. ಆದರೆ ಉಳಿತಾಯಕ್ಕೆ ಪೂರಕ ವಾತಾವರಣ ನಿರ್ಮಾಣ ಮಾಡಬೇಕು. ಮಹಿಳೆಯರನ್ನು ಆರ್ಥಿಕವಾಗಿ ಸಾಮಾಜಿಕವಾಗಿ ರಾಜಕೀಯವಾಗಿ ಸರಿಸಮಾನವಾಗಿ ಗುರುತಿಸುವ ಕೆಲಸ ನಡೆಯಬೇಕು. ರಾಜಕೀಯ ಮೀಸಲಾತಿ ನೀಡುವ ಮೂಲಕ ಸರಿಸಮಾನ ಹೆಜ್ಜೆ ಹಾಕಲು ಅವಕಾಶ ಕಲ್ಪಿಸಬೇಕು. ಸಾಮಾಜಿಕ ಮುಖ್ಯವಾಹಿನಿಯಲ್ಲಿ ಮುನ್ನಡೆಯುವ ಮುಕ್ತ ಅವಕಾಶ ಕಲ್ಪಿಸಬೇಕು. ಅಡಿಗೆ ಕೋಣೆಯಿಂದ ಅಂತರಿಕ್ಷದವರೆಗೆ ಮಹಿಳೆಯನ್ನ ಎರಡನೇ ದರ್ಜೆಯ ಪ್ರಜೆಯಾಗಿಯೆ ಕಾಣುವ ಪ್ರವೃತ್ತಿಗಳು ಬದಲಾಗಬೇಕು. ಸಾಮಾಜಿಕ ನ್ಯಾಯ ಸಿಗುವಂತಾಗಬೇಕು. ಮಹಿಳೆಯರ ಮೇಲೆ ಅವ್ಯಾಹತವಾಗಿ ನಡೆಯುತ್ತಿರುವ ದಾಳಿಗಳಿಗೆ ಕಡಿವಾಣ ಹಾಕಬೇಕು. ಜಾತಿ ಧರ್ಮ ಮತಗಳ ಹೆಸರಿನಲ್ಲಿ ನಡೆಸುವ ದಬ್ಬಾಳಿಕೆಗಳು ನಿಲ್ಲಬೇಕು. ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಮೂಲಕ ಮಹಿಳೆಯರ ಆರ್ಥಿಕ ಸ್ವಾತಂತ್ರ್ಯಕ್ಕೆ ಅವಕಾಶ ನೀಡಬೇಕು. ಈ ಕ್ರಮಗಳಿಲ್ಲದೆ "ಸ್ವ-ಸಹಾಯ" ಸಂಘಗಳೇ ಸಬಲೀಕರಣ ಸಾಧಿಸುತ್ತವೆ ಎಂಬ ಭ್ರಮೆಗಳನ್ನು ಹರಡುವುದು ತಪ್ಪು.

ಸ್ವ-ಸಹಾಯ ಗುಂಪುಗಳನ್ನು ರಚಿಸುವ ಮೂಲಕ ಮಹಿಳೆಯರನ್ನ ಸಂಘಟಿಸಿ ಸಾಮಾಜಿಕ ಜಾಗೃತಿ ಮೂಡಿಸುವ ಕೆಲಸ ಅಗತ್ಯವಾಗಿ ಆಗಬೇಕು. ಆದರೆ ಈ ಕೆಲಸಕ್ಕೆ ಕೊಡುತ್ತಿರುವ ಆದ್ಯತೆ ನಿರಾಶಾದಾಯಕವೆ. ಮಹಿಳಾ ಸಂಘಟನೆಗಳು, ಪ್ರಗತಿಪರ ಸಂಘ ಸಂಸ್ಥೆಗಳು ಇರುವೆಡೆಯಲ್ಲಿ ಸ್ವಲ್ಪ ಮಟ್ಟಿನ ಪ್ರಯತ್ನಗಳನ್ನ ನಡೆಸುತ್ತಿರುವುದರ ಹೊರತು ಸರ್ಕಾರದ ಕಡೆಯಿಂದ ಸಾಮಾಜಿಕ ಜಾಗೃತಿಗೆ ಪ್ರಯತ್ನಗಳೇನೂ ಆಗುತ್ತಿಲ್ಲ. ಗುಂಪಿನ ಪ್ರತಿ ಸದಸ್ಯರು ವರ್ಷಕ್ಕೆ 600 ರೂಪಾಯಿ ಸಂಗ್ರಹ ಮಾಡಿದ ಮಾತ್ರಕ್ಕೆ ಸರ್ಕಾರ ಸಾಧನೆಯ ಪುಂಗಿ ಊದಬೇಕಿಲ್ಲ.

ಮಕ್ಕಳಿಗೆ ಉಣಿಸುವ ಹಾಲು ಅಪರೂಪಕ್ಕೆ ಮನೆಗೆ ತರುವ ತರಕಾರಿ, ಹಣ್ಣು ಮುಂತಾದವನ್ನೂ ಕಡಿತಗೊಳಿಸಿ ಬಡ ಮಹಿಳೆಯರೆ ಮಾಡುವ ಉಳಿತಾಯ ಸರ್ಕಾರದ ಸಾಧನೆಯಾಗಲು ಹೇಗೆ ಸಾಧ್ಯ? ಸಶಕ್ತೀಕರಣ ಬೇಕು ಮಹಿಳೆಯರ ಹೋರಾಟದಿಂದ ಸಾಧ್ಯವಾಗಬೇಕು? ಮಹಿಳೆಯರ ಅಂತರರಾಷ್ಟ್ರೀಯ ಹೋರಾಟದ ಸ್ಫೂರ್ತಿ ಬೇಕು. ಆ ಮೂಲಕ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಯಶಸ್ವಿಯಾಗಬೇಕು. ○

ಧಾರವಾಡ: ಸಮುದಾಯ 25..........

ಪುಟ 9 ರಿಂದ

ಮಾಲತೇಶ ಕರ್ಜಗಿ ಭಾಗವಹಿಸಿ ಯಶಸ್ವಿಗೊಳಿಸಿದರು.

'ಸಾಂಸ್ಕೃತಿಕ ರಂಗದ ಮೇಲೆ ಜಾಗತೀಕರಣದ ದಾಳಿ' ಎಂಬ ಕುರಿತು ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ಕರ್ನಾಟಕ ವಿಶ್ವ ವಿದ್ಯಾಲಯದ ಭೌತಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ಸಂಪಿಗೆ ತೋಂಟದಾರ್ಯ ವಹಿಸಿದ್ದರು. ಹಿಂದೆ ಸಿನಿಮಾ ಮಾಧ್ಯಮವನ್ನು ಜನಪರವಾಗಿ ಬಳಸಿಕೊಂಡಿದ್ದು, ಈಗ ಟಿ.ವಿ.ಮಾಧ್ಯಮವನ್ನು ಜನಪರವಾಗಿ ಬಳಸಿಕೊಳ್ಳಬೇಕೆಂದು ಅವರು ಕರೆ ನೀಡಿದರು. ಸಿಪಿಐ(ಎಂ) ಮಾಜಿ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ ಅಂತರಾಷ್ಟ್ರೀಯ ಹಣಕಾಸು ಬಂಡವಾಳ ಜಗತ್ತಿನ ಎಲ್ಲಾ ದೇಶಗಳ ಸಾರ್ವಭೌಮತೆಯ ಗಡಿಗಳನ್ನು ಅಳಿಸಿ ಹಾಕಿ ಜಗತ್ತನ್ನೇ ತನ್ನ ಮಾರುಕಟ್ಟೆಯನ್ನಾಗಿ ಪರಿವರ್ತಿಸುತ್ತಿರುವುದನ್ನು ಕಣ್ಣಿಗೆ ಕಟ್ಟುವಂತೆ ತಿಳಿಸಿದರು. ಜಾಹೀರಾತು ಸಂಸ್ಕೃತಿಯ ಮೂಲಕ ಜನ ಸಂಸ್ಕೃತಿಯ ಮೇಲಾಗುತ್ತಿರುವ ದಾಳಿಯ ಕುರಿತು ಗಮನ ಸೆಳೆದರು. 'ಇಪ್ಟಾ'ದ ರಾಜ್ಯ ಸಂಚಾಲಕರೂ, ಸಿಪಿಐ ಮುಖಂಡರೂ ಆದ ಡಾ. ಸಿದ್ದನಗೌಡ ಪಾಟೀಲ ಜಾಗತೀಕರಣದಿಂದ ಸಂಭವಿಸಬಹುದಾದ ಅನಾಹುತಗಳ ಕುರಿತು ಕಮ್ಯುನಿಸ್ಟರು ಹತ್ತು ವರ್ಷಗಳ ಹಿಂದೆಯೇ ಎಚ್ಚರಿಕೆ ನೀಡಿ ಅವುಗಳ ವಿರುದ್ಧ ನಿರಂತರವಾಗಿ ರಾಜಿ ಇಲ್ಲದ ಹೋರಾಟ ನಡೆಸುತ್ತಾ ಬಂದಿರುವುದನ್ನು ತಿಳಿಸಿದರು. ಸಮುದಾಯದ ಪ್ರಧಾನ ಕಾರ್ಯದರ್ಶಿ ಎಂ.ಜಿ.ವೆಂಕಟೇಶ ಮಾತನಾಡುತ್ತಾ, ಸ್ವಾತಂತ್ರ್ಯಾನಂತರದ ನಾಲ್ಕು ದಶಕಗಳಲ್ಲಿ ಆರ್ಥಿಕ ಯೋಜನೆ ಹಾಗೂ ಅಭಿವೃದ್ಧಿಗೆ ಸಚಿವರಿದ್ದರೆ ಈಗ ಕೆಲವು ವರ್ಷಗಳಿಂದ ದೇಶದ ಸ್ವಾವಲಂಬನೆ ಹಾಗೂ ಸಾರ್ವಭೌಮತೆಯ ಭದ್ರತಳಪಾಯವಾದ ಸಾರ್ವಜನಿಕ ಕ್ಷೇತ್ರದ ಸಂಸ್ಥೆಗಳ ಖಾಸಗೀಕರಣಕ್ಕಾಗಿ ಮತ್ತು ಅವುಗಳಲ್ಲಿರುವ ಸರ್ಕಾರದ ಬಂಡವಾಳ ಹಿಂತೆಗೆಯುವುದಕ್ಕಾಗಿ ಪ್ರತ್ಯೇಕ ಸಚಿವರು ಇರುವುದು ವಿಪರ್ಯಾಸ ಎಂದು ವಿಷಾದಿಸಿದರು. ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಕಾರ್ಯದರ್ಶಿ ಕೆ.ನೀಲಾ ಜಾಗತೀಕರಣದಿಂದ ಮಹಿಳೆ ಮತ್ತು ಮಕ್ಕಳ ಮೇಲಿನ ದುಷ್ಪರಿಣಾಮಗಳ ಕುರಿತು ತಿಳಿಸಿದರು.

ಉತ್ಸವದ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಖ್ಯಾತ ಬಂಡಾಯ ಸಾಹಿತಿಗಳೂ, ವಿಮರ್ಶಕರೂ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ, ಸಮುದಾಯದೊಂದಿಗೆ ಪ್ರಾರಂಭದಿಂದಲೂ ತೊಡಗಿಸಿಕೊಂಡವರೂ ಆದ ಪ್ರೊ. ಬರಗೂರು ರಾಮಚಂದ್ರಪ್ಪ ವಹಿಸಿದ್ದರು. ಜಾಗತೀಕರಣದ ಅನಾಹುತಗಳ ಕುರಿತು ದಿವ್ಯ ನಿರ್ಲಕ್ಷ್ಯ ತೋರಿಸಿ ವಿಜ್ಞಾನ ತಂತ್ರಜ್ಞಾನಗಳ 'ಹುಸಿ ಆಧುನಿಕತೆ' ಮೆರೆಸುತ್ತಿರುವ ಮತ್ತು ಶ್ರಮ ಸಂಸ್ಕೃತಿಯನ್ನು ಹಾಗೂ ಬಹು ಸಂಸ್ಕೃತಿಯನ್ನು ಮರೆ ಮಾಚಿಸಿ ಮತೀಯ ಹಾಗೂ ಧಾರ್ಮಿಕ ಮೂಲಭೂತವಾದಿಗಳ 'ಹುಸಿ ಸಂಸ್ಕೃತಿ' ಯನ್ನು ಪ್ರತಿಪಾದಿಸುತ್ತಿರುವವರ ವಿರುದ್ಧ ಬರಗೂರು ಕಿಡಿ ಕಾರಿದರು. ಕಳೆದ ಕಾಲು ಶತಮಾನಗಳಲ್ಲಿ ಸಮುದಾಯದ ಸಾಧನೆಗಳನ್ನು ಅಭಿನಂದಿಸುತ್ತಾ, ಸಾಂಸ್ಕೃತಿಕ ರಂಗದಲ್ಲಿ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಸಮುದಾಯ ಇತರ ಸಾಂಸ್ಕೃತಿಕ ಸಂಘಟನೆಗಳ ಸಹಕಾರದೊಂದಿಗೆ ವಿಶಾಲ ತಳಹದಿಯಲ್ಲಿ ಜನ ಸಂಸ್ಕೃತಿಯನ್ನು ಇನ್ನಷ್ಟು ಬಲಗೊಳಿಸಲಿ ಎಂದು ಹಾರೈಸಿದರು.

ಉತ್ಸವದ ಸ್ಮರಣ ಸಂಚಿಕೆಯನ್ನು ರಂಗಾಯಣದ ನಿರ್ದೇಶಕರೂ, ಸಮುದಾಯದ ರಾಜ್ಯ ಅಧ್ಯಕ್ಷರೂ ಆದ ಸಿ.ಬಸವಲಿಂಗಯ್ಯನವರು ಬಿಡುಗಡೆ ಮಾಡಿದರು. ಬಡವರ ರಂಗಭೂಮಿ ವ್ಯಾಪಾರಿ ರಂಗಭೂಮಿಯಾಗುತ್ತಿರುವುದನ್ನು ತಡೆಗಟ್ಟಲು ಅವರು ಕರೆ ನೀಡಿದರು. ಈಗ ಪುನಃ ಗಾಂಧಿ ಹುಟ್ಟಿ ಬರಬೇಕು, ಗೋಡ್ಸೆ ಅಲ್ಲ ಎಂದರು. ನಮಗೆ ತ್ಯಾಗಮಯಿ ಜಂಗಮರು ಬೇಕು. ಅಂತಃಪುರ ಸೇರುವ ಸ್ಥಾವರಕ್ಕೆ ಅಂಟಿಕೊಳ್ಳುವ ಸ್ವಾಮಿಗಳಲ್ಲ ಎಂದರು. ಸಮುದಾಯ ಜನಪರವಾಗಿ ಗಟ್ಟಿಯಾಗಿ ನಿಲ್ಲಬೇಕು ಎಂದರು. ಮುಕ್ತಾಯ ಸಮಾರಂಭದಲ್ಲಿ ಕಳೆದ 25 ವರ್ಷಗಳಲ್ಲಿ ಸಮುದಾಯದ ಹುಬ್ಬಳ್ಳಿ-ಧಾರವಾಡ ಘಟಕ ಕಟ್ಟಿ ಬೆಳೆಸಲು ಅಪಾರ ಸೇವೆ ಸಲ್ಲಿಸಿದ ಪಿ.ಗಂಗಾಧರ ಸ್ವಾಮಿ, ಶೀಲಾ ಗಂಗಾಧರ ಸ್ವಾಮಿ, ಪ್ರೊ. ಎಸ್.ಆರ್. ತೋಂಟದಾರ್ಯ, ಸಿ.ಆರ್.ಭಟ್, ಸಿ.ಬಸವಲಿಂಗಯ್ಯ, ಡಾ.ಎಚ್.ಎ.ಪಾರ್ಶ್ವನಾಥ, ಡಾ.ಎ.ಮುರಿಗೆಪ್ಪ, ಡಾ.ವಿ.ಎನ್.ದೇಶಪಾಂಡೆ, ಚಿ.ಬಿ.ಸೊಲಬಕ್ಕನವರ, ಶ್ರೀ ದೇಶಿ ಜೋಶಿ ಇವರಿಗೆ ನೆನಪಿನ ಕಾಣಿಕೆ ನೀಡಿ ಶಾಲು ಹೊದಿಸಿ ಅಭಿನಂದಿಸಲಾಯಿತು. ○

ಹೊಸ ಭರವಸೆ ಹುಟ್ಟಿಸಿದ ನಾಟಕ ಸ್ಪರ್ಧೆ

ಐದು ದಿನಗಳ ಉತ್ಸವದಲ್ಲಿ ಹೊಸಪೇಟೆಯ ಭಾವೈಕ್ಯತಾ ವೇದಿಕೆಯ 'ನಾವು ಮನುಜರು', ಶೇಷಗಿರಿಯ ಗಜಾನನ ಯುವಕ ಮಂಡಳಿಯ 'ನ್ಯಾಯದ ಬಾಗಿಲು', ಧಾರವಾಡದ ರಂಗ ಗಂಗಾ ತಂಡದ 'ಜಾಗೃತಿ', ಧಾರವಾಡ ಅನನ್ಯ ಕಲಾ ಮಹಿಳಾ ತಂಡದ 'ಸರ್ವಧರ್ಮ ದೇವಾಲಯ', ಹರಿಹರದ ಸಮುದಾಯದ ಮಕ್ಕಳ ತಂಡದ 'ಮಿಲೇನಿಯಮ್ ಮಳೆರಾಯ', ರಾಮದುರ್ಗದ ಜಾಗೃತಿ ಕಲಾ ತಂಡದ 'ಬರಡಿದ ಬದುಕು', ಧಾರವಾಡ ಇಪ್ಟಾ ತಂಡದ 'ಸ್ವಾತಂತ್ರ್ಯ-50', ಹಾವೇರಿಯ ಕೆ.ಇ.ಬಿ. ಕಲಾ ತಂಡದ 'ಕರೆಂಟಪ್ಪನ ಖಾನಾವಳಿ', ಮುಗಳಿಯ ಮಲ್ಲಿಕಾರ್ಜುನ ಯುವ ಸಂಘದ 'ದಬ್ಬಾಳಿಕೆ', ಹರಿಹರದ ಎಂ.ಆರ್.ಬಿ. ಸಾಂಸ್ಕೃತಿಕ ಕಲಾ ತಂಡದ 'ನಾವೆಲ್ಲರೂ ಒಂದೇ' ಎಂಬ ಹತ್ತು ಬೀದಿ ನಾಟಕಗಳು ಸ್ಪರ್ಧೆಯಲ್ಲಿ ಪ್ರದರ್ಶನಗೊಂಡವು. ಮೊದಲ 5 ನಾಟಕಗಳು ಅನುಕ್ರಮವಾಗಿ ಪ್ರಥಮ, ದ್ವಿತೀಯ, ತೃತೀಯ ಹಾಗೂ ಪ್ರೋತ್ಸಾಹಕರ ಬಹುಮಾನಗಳನ್ನು ಪಡೆದವು ಕೊನೆಯ ಎರಡುದಿನಗಳಲ್ಲಿ ಬೆಂಗಳೂರಿನ ಸಮುದಾಯ ತಂಡ 'ಕೇಸರಿ ಬಿಳಿ ಹಸಿರು' ಮತ್ತು 'ಸ್ತ್ರೀ' ಬೀದಿ ನಾಟಕಗಳನ್ನು ಪ್ರದರ್ಶಿಸಿತು.

ಹೊಸ ಸಹಸ್ರಮಾನದಲ್ಲಿ 'ಕೆಂಪುಹೂವು'

ಡಿಸೆಂಬರ್ 31 ರಂದು ರಾತ್ರಿ ಹೊಸ ಸಹಸ್ರಮಾನದ ಹಾಗೂ ಹೊಸ ವರ್ಷದ ನಿರೀಕ್ಷೆಯಲ್ಲಿ ಹಮ್ಮಿಕೊಂಡ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು, ರಜನಿ ಗರುಡರಿಂದ ನಿರ್ದೇಶಿಸಲ್ಪಟ್ಟ ಸಪ್ದರ್ ಹಶ್ಮಿಯ 'ಕೆಂಪು ಹೂವು' ಎಂಬ ತೊಗಲು ಬೊಂಬೆ ಮಕ್ಕಳ ನಾಟಕ ಪ್ರದರ್ಶನವು ಒಂದಾಗಿತ್ತು. ಮರುದಿನ ಮುಂಜಾನೆ ಸಮುದಾಯ ಕಲಾವಿದರು ಧಾರವಾಡದ ಮುಖ್ಯ ಬಡಾವಣೆಗಳಲ್ಲಿ ಹಾಡು ಹೇಳುತ್ತಾ ಸಾಂಸ್ಕೃತಿಕ ಜಾಥಾ ನಡೆಸಿದರು. ಐದು ದಿನಗಳ ಉತ್ಸವದಲ್ಲಿ ಇನ್ನೂರಕ್ಕೂ ಹೆಚ್ಚು ಕಲಾವಿದರು ಭಾಗವಹಿಸಿದ್ದರು. ಐದು ದಿನಗಳಲ್ಲಿಯೂ ಉತ್ಸವದ ವಿವಿಧ ಕಾರ್ಯಕ್ರಮಗಳಿಗೆ ಜನರು ಕಿಕ್ಕಿರಿದು ಬಂದು ಪ್ರೋತ್ಸಾಹಿಸಿದರು. ರೂ. 2000 ಕ್ಕೂ ಹೆಚ್ಚು ಬೀದಿ ನಿಧಿ ಸಂಗ್ರಹ ಮಾಡಲಾಯಿತು. ರೂ. 60000 ಕ್ಕೂ ಹೆಚ್ಚು ಸಾರ್ವಜನಿಕ ದೇಣಿಗೆ ಹಾಗೂ ಸ್ಮರಣ ಸಂಚಿಕೆಗೆ ಜಾಹೀರಾತುಗಳ ಮೂಲಕ ಸಂಗ್ರಹವಾಯಿತು. ಸಮುದಾಯದ ಬೆಳ್ಳಿ ಹಬ್ಬದ ಸಂದರ್ಭ ಧಾರವಾಡದಲ್ಲಿ ನಡೆದ ರಾಜ್ಯಮಟ್ಟದ ಬೀದಿ ನಾಟಕ ಉತ್ಸವ ಸಮುದಾಯದ ಇತಿಹಾಸದಲ್ಲಿ ಇನ್ನೊಂದು ಮುಖ್ಯ ಮೈಲುಗಲ್ಲಾಯಿತು, ಹೊಸ ಭರವಸೆ ಮೂಡುವಂತಾಯಿತು.



ಕುಸಿದು ಬೀಳುತ್ತಿರುವ ದಿಗ್ಬಂಧನ

ಇರಾಕ್ ಮೇಲೆ ಬರ್ಬರ ದಾಳಿ

ಫೆಬ್ರವರಿ ೧೬ ರಂದು ಇರಾಕ್‌ನ ರಾಜಧಾನಿ ಬಾಗ್ದಾದ್ ಮೇಲೆ ಅಮೆರಿಕ ಮತ್ತು ಬ್ರಿಟನ್‌ನ ೫೦ ಯುದ್ಧ ವಿಮಾನಗಳು ನಾಗರಿಕರು ಮತ್ತು ನಾಗರಿಕ ಸ್ಥಾವರಗಳ ಮೇಲೆ ದಾಳಿ ಮಾಡಿವೆ. ಅಮೆರಿಕದ ಹೊಸ ಅಧ್ಯಕ್ಷ ಜಾರ್ಜ್ ಬುಶ್(ಜೂನಿಯರ್) ರ ಮೊದಲ ಅಂತರ್ರಾಷ್ಟ್ರೀಯ ಕಾರ್ಯಾಚರಣೆಗೆ ಕಾರಣ ಏನು? ಇರಾಕ್ ಮೇಲೆ ಅಂತರ್ರಾಷ್ಟ್ರೀಯ ಕಾನೂನುಬಾಹಿರ ದಿಗ್ಬಂಧನ ಕುಸಿದುಬೀಳುತ್ತಿದ್ದು, ಅದನ್ನು ಹೇಗಾದರೂ ಕಾಪಾಡ ಬಯಸುವ, ಅಮೇರಿಕದ ಹತಾಶೆಯ ಕ್ರಮ. ಆದರೂ ಮಧ್ಯ ಏಶ್ಯಾದಲ್ಲಿ ಆಸ್ಫೋಟಕ ಸ್ಥಿತಿ ಉಂಟು ಮಾಡಿ ಜಾಗತಿಕ ಶಾಂತಿ ಮತ್ತು ಭದ್ರತೆಗೆ ಮಾರಕವಾಗಬಲ್ಲ ಕ್ರಮ ಎಂದು ವಿವರಿಸುವ ಲೇಖನ.

ಶರತ್ ಚಂದ್ರ

ಅಮೆರಿಕದ ಹೊಸ ಅಧ್ಯಕ್ಷ ಜಾರ್ಜ್ ಬುಶ್(ಜೂನಿಯರ್) ತಮ್ಮ ಮೊದಲ ಪ್ರಮುಖ ಅಂತರ್ರಾಷ್ಟ್ರೀಯ ಕ್ರಮವಾಗಿ ಇರಾಕ್‌ನ ರಾಜಧಾನಿ ಬಾಗ್ದಾದ್ ಮೇಲೆ 50 ಯುದ್ಧ ವಿಮಾನಗಳಿಂದ ಬರ್ಬರ ದಾಳಿಗೆ ಆಜ್ಞೆ ಮಾಡಿದ್ದಾರೆ. ಅವರ ಜತೆ ಸೇರಿದ್ದು ಬ್ರಿಟನ್ ಮಾತ್ರ. ಉಳಿದ ಎಲ್ಲರೂ ಈ ದಾಳಿಯನ್ನು ಖಂಡಿಸಿದ್ದಾರೆ. ರಶ್ಯಾ, ಚೀನಾ ಮತ್ತು ಫ್ರಾನ್ಸ್(1998 ರ ವರೆಗೆ ಎಲ್ಲಾ ಅಮೆರಿಕದ ಬರ್ಬರ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದ ಅಮೆರಿಕದ ಮಿತ್ರ) ಭದ್ರತಾ ಸಮಿತಿಯಲ್ಲಿ ಇದನ್ನು ತೀವ್ರವಾಗಿ ಖಂಡಿಸಿವೆ. 1991 ರಲ್ಲಿ ಅಮೆರಿಕದ ಇರಾಕ್-ವಿರೋಧಿ ಕೂಟದ ಸದಸ್ಯರಾಗಿದ್ದ ಎಲ್ಲಾ ಅರಬ್ ದೇಶಗಳೂ ಈ ಕ್ರಮವನ್ನು ತೀವ್ರವಾಗಿ ಖಂಡಿಸಿವೆ.

ಅಮೆರಿಕ ಈ ದಾಳಿಗೆ ಕೊಟ್ಟಿರುವ ಕಾರಣ - ಇರಾಕ್ ಪುನಃ ತನ್ನ ರಕ್ಷಣಾ ಸಾಮರ್ಥ್ಯ ಬಲಪಡಿಸಿಕೊಳ್ಳುತ್ತಿದೆ. ಇದು ಇರಾಕ್‌ನ ಅರಬ್ ನೆರೆಹೊರೆಯ ದೇಶಗಳಿಗೆ ಅಪಾಯ. ಇದು ಕುಂಟುನೆಪ ಎಂದು ಬೇರೆ ಹೇಳಬೇಕಾಗಿಲ್ಲವಲ್ಲ. ಏಕೆಂದರೆ ಈ 'ಅಪಾಯ' ಇದೆ ಎಂದು ಹೇಳಲಾದ ಅರಬ್ ದೇಶಗಳೇ ಅಮೆರಿಕನ್ ಕ್ರಮವನ್ನು ತೀವ್ರವಾಗಿ ಖಂಡಿಸಿವೆ. ಅರಬರಿಗೆ ತೀವ್ರ ಅಪಾಯ ಇರುವುದು ಅಮೆರಿಕದ ಪ್ರಬಲ ಬೆಂಬಲ ಇರುವ ಇಸ್ರೇಲ್‌ಗಳಿಂದ. ಪ್ರತಿದಿನ ಇಸ್ರೇಲಿಗಳು ಅರಬರನ್ನು ಕೊಲ್ಲುತ್ತಿದ್ದಾರೆ. ಕೇವಲ ಕಳೆದ ಐದು ತಿಂಗಳಲ್ಲಿ 400 ಅರಬರನ್ನು ಕೊಂದಿದ್ದಾರೆ. ಅರಬರ ಬಗ್ಗೆ 'ಮೊಸಳೆ ಕಣ್ಣೀರು' ಸುರಿಸುವ ಅಮೆರಿಕ ಇಸ್ರೇಲಿನ ಈ ಕ್ರಮಗಳ ಬಗ್ಗೆ ಏನೂ ಮಾಡುತ್ತಿಲ್ಲ. ಮಾತ್ರವಲ್ಲ ಅದನ್ನು ಬೆಂಬಲಿಸುತ್ತಿದೆ. ಬ್ರಿಟಿಷ್ ಈ ದಾಳಿಗೆ ಕೊಟ್ಟಿರುವ ಕಾರಣ, ಬ್ರಿಟಿಷ್ ಪೈಲಟ್‌ಗಳಿಗೆ ಇರಾಕ್ ಅಪಾಯಕಾರಿಯಾಗಿದೆ ಅಂತ! ಇದಲ್ಲದೆ ಅಮೆರಿಕ, ಬ್ರಿಟನ್‌ಗಳು ಇರಾಕ್ ಮೇಲೆ ವಿಶ್ವಸಂಸ್ಥೆ ಭದ್ರತಾ ಸಮಿತಿ ಹೊರಿಸಿರುವ ಅಂತರ್ರಾಷ್ಟ್ರೀಯ ದಿಗ್ಬಂಧನ, 'ಹಾರಾಟ-ರಹಿತ ಪ್ರದೇಶ'ಗಳ ಉಸ್ತುವಾರಿಯಲ್ಲಿ ತೆಗೆದುಕೊಳ್ಳುತ್ತಿರುವ 'ಮಾಮೂಲಿ ಕ್ರಮ' ಎಂದು ಹೇಳಿ ನಿಜ ಸಂಗತಿಯನ್ನು ಹೊರಬಿಟ್ಟಿವೆ. ಆದರೆ ಈ ಕ್ರಮಗಳನ್ನು ನಿರ್ಧರಿಸುವ ಭದ್ರತಾ ಸಮಿತಿಯ ಉಳಿದ ಯಾವ ಸದಸ್ಯರೂ ಈ 'ವಿವರಣೆ'ಯನ್ನು ಒಪ್ಪಿಲ್ಲ.

ಬಾಗ್ದಾದ್ ಮೇಲೆ ಅಮೆರಿಕದ ಬರ್ಬರ ದಾಳಿ 'ಇರಾಕ್ ಮೇಲೆ ದಿಗ್ಬಂಧನ ತೆಗೆಯುವಲ್ಲಿ ಅಡಚಣೆ ಉಂಟುಮಾಡುವ ಕ್ರಮವಾಗಿದೆ.

ಅಮೆರಿಕದ ಹೊಸ ಬುಷ್ ಸರ್ಕಾರದ ಮೊದಲ ಅಂತರ್ರಾಷ್ಟ್ರೀಯ ಕ್ರಮವಾಗಿದ್ದು ಐದು ಜನರನ್ನು ಕೊಂದು, ಹಲವರನ್ನು ಗಾಯಗೊಳಿಸಿದ ಬಾಗ್ದಾದ್ ಮೇಲೆ ಬಾಂಬ್ ದಾಳಿ ತೀವ್ರ ಖಂಡನೀಯ. ಹೊಸ ರಿಪಬ್ಲಿಕನ್ ಸರ್ಕಾರದ ಉದ್ಧಟತನದ ಮತ್ತು ಆಕ್ರಾಮಕ ಸ್ವರೂಪ ಬಯಲುಪಡಿಸುವ ಈ ಕ್ರಮದ ಉದ್ದೇಶ ಇರಾಕ್ ಮೇಲೆ ವಿಧಿಸಿರುವ ದಿಗ್ಬಂಧನವನ್ನು ಹಿಂತೆಗೆಯಲು ಹೊರಟಿರುವ ವಿಶ್ವಸಂಸ್ಥೆಯ ಕ್ರಮಗಳಿಗೆ ಅಡಚಣೆ ಉಂಟುಮಾಡುವುದು ಆಗಿದೆ.

ಇರಾಕ್ ಸಾರ್ವಭೌಮತೆ ಉಲ್ಲಂಘಿಸುವ ಈ ಬಾಂಬ್ ದಾಳಿ ಕಾನೂನುಬಾಹಿರವಾಗಿದೆ. ಎಲ್ಲಾ ಅಂತರ್ರಾಷ್ಟ್ರೀಯ ದಿಗ್ಬಂಧನಗಳನ್ನು ಖಂಡಿಸಬೇಕು ಮತ್ತು ಕೊನೆಗೊಳಿಸಬೇಕು. ವಾಜಪೇಯಿ ಸರ್ಕಾರ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಮೇಲಿನ ಹೊಣೆಯಾಗಿದೆ.

ಕೊಲ್ಲಿಯುದ್ಧದ ನಂತರವೂ ಮುಂದುವರೆದ ನರಮೇಧ

ಒಂದು ರೀತಿಯಲ್ಲಿ ಈ ದಾಳಿಯನ್ನು ಅಮೆರಿಕ, ಬ್ರಿಟನ್ ಮಾಮೂಲಿ 'ಕ್ರಮ' ಎಂದು ಬಣ್ಣಿಸಿರುವುದು ನಿಜ ಸಂಗತಿ. ಯಾಕೆಂದರೆ 1991 ರ 'ಕೊಲ್ಲಿ ಯುದ್ಧದ ನಂತರದ 10 ವರ್ಷಗಳಲ್ಲಿ ಅಂತರ್ರಾಷ್ಟ್ರೀಯ ದಿಗ್ಬಂಧನ, 'ಹಾರಾಟ-ರಹಿತ ಪ್ರದೇಶ', 'ಸಾಮೂಹಿಕ ಹತ್ಯೆಯ ಅಸ್ತ್ರಗಳನ್ನು ಪತ್ತೆ ಮಾಡಿ ನಾಶ ಮಾಡುವ' ಹೆಸರಿನಲ್ಲಿ ಇವು ಪ್ರತಿ-ದಿನ ಇರಾಕ್ ಮೇಲೆ ಒಂದಲ್ಲ ಒಂದು ರೀತಿಯ ದಾಳಿ ನಡೆಸುತ್ತಿದೆ. ಅಮೆರಿಕದ ಕಾರ್ಯಾಚರಣೆಗಳಿಂದ ಕಳೆದ 10 ವರ್ಷದ 'ಶಾಂತಿ' ಕಾಲದಲ್ಲಿ ಇರಾಕಿನ 300 ನಾಗರಿಕರು ಪ್ರತಿದಿನ ಸಾಯುತ್ತಿದ್ದಾರೆ. ಇನ್ನೊಂದು ದೇಶದ ಆಂತರಿಕ ವಿಷಯಗಳಲ್ಲಿ ಮಧ್ಯ ಪ್ರವೇಶ ಮಾಡುವುದು, ಆದೇಶದ ನಾಗರಿಕರ ಕೊಲೆ ಮಾಡುವುದು, ಆ ದೇಶದ ಸಂಪತ್ತನ್ನು ಲೂಟಿ ಮಾಡುವುದು, ಇವೆಲ್ಲ ಇವರಿಗೆ 'ಮಾಮೂಲಿ' ಕ್ರಮಗಳು.



ಅಮೆರಿಕಾ ದಾಳಿಯಿಂದ ಗಾಯಗೊಂಡ ಇರಾಕ್ ಪ್ರಜೆಗಳಿಗೆ ಚಿಕಿತ್ಸೆ - ಇಲ್ಲೂ ದಿಗ್ಬಂಧನದ ಕರಾಳ ಛಾಯೆ

ಎರಡು ಲಕ್ಷ ಇರಾಕಿ ನಾಗರಿಕರು 'ಕೊಲ್ಲಿಯುದ್ಧ' ಸಮಯದಲ್ಲಿ ಅಮೆರಿಕದ ಬರ್ಬರತೆಗೆ ಬಲಿಯಾಗಿದ್ದರು. ಕಳೆದ 10 ವರ್ಷಗಳಲ್ಲಿ ದಿಗ್ಬಂಧನ, ದಾಳಿಗಳಿಂದ 15 ಲಕ್ಷ ನಾಗರಿಕರು ಸತ್ತಿದ್ದಾರೆ. ಅಮೆರಿಕ 'ಕೊಲ್ಲಿ ಯುದ್ಧ'ದಲ್ಲಿ ಬಳಸಿದ ಅಸ್ತ್ರಗಳಲ್ಲಿನ ರಾಸಾಯನಿಕಗಳ(ಅಣು ವಿಕಿರಣ ಸೇರಿದಂತೆ) ಪರಿಣಾಮ ಮಾತ್ರವಲ್ಲ, ಆಹಾರ ಮತ್ತು ಔಷಧಿಗಳ ಪೂರೈಕೆ ದಿಗ್ಬಂಧನದಿಂದಾಗಿ ಕಡಿತ ವಾದದ್ದು - ಈ ಸಾವಿಗೆ ನೇರ ಕಾರಣ ಎಂಬುದು ಈಗ ಮುಚ್ಚಿಕೊಳ್ಳಲಾಗದ ಸತ್ಯವಾಗಿ ಹೊಮ್ಮಿದೆ. 10 ವರ್ಷಗಳಲ್ಲಿ ಅಮೆರಿಕದ 'ಮಾಮೂಲಿ ಕ್ರಮ'ಗಳಿಗೆ ಬಲಿಪಶುಗಳಾಗಿರುವ 15 ಲಕ್ಷ ನಾಗರಿಕರಲ್ಲಿ 6 ಲಕ್ಷ ಐದು ವರ್ಷಕ್ಕಿಂತ ಕಡಿಮೆ ಇರುವ ಮಕ್ಕಳು. ಇದಲ್ಲದೆ ಮಕ್ಕಳಲ್ಲಿ ರಕ್ತ ಕ್ಯಾನ್ಸರ್ ಭಾರಿ ಪ್ರಮಾಣದಲ್ಲಿ ಹೆಚ್ಚಿದ್ದು, ಜಗತ್ತಿನಲ್ಲೇ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿದೆ. ಮಗು ಹುಟ್ಟುವಾಗ ತಾಯಿಯ ಮರಣದ ಸಂಖ್ಯೆ 10 ವರ್ಷಗಳಲ್ಲಿ ಇಮ್ಮಡಿಯಾಗಿದೆ. ಇರಾಕಿ ಮಹಿಳೆಯರಲ್ಲಿ ಶೇಕಡಾ 70 ಜನ ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಅಮೆರಿಕದ ಬಾಂಬ್ ದಾಳಿಗೆ ಗುರಿಯಾದ ದಕ್ಷಿಣ ಇರಾಕ್‌ನಲ್ಲಿ ಸಾವು, ಮಕ್ಕಳಲ್ಲಿ ರಕ್ತ ಕ್ಯಾನ್ಸರ್, ತಾಯಂದಿರ ಮರಣದ ಪ್ರಮಾಣ ಅತಿ ಹೆಚ್ಚು ಎಂಬುದು ಅಮೆರಿಕದ ಆಕ್ರಾಮಕ ಕ್ರಮಗಳ ನೇರ ಪ್ರಭಾವ ಎಂಬುದನ್ನು ರುಜುವಾತು ಪಡಿಸುತ್ತಿದೆ. ಕೊಲ್ಲಿ ಯುದ್ಧದ ಮೊದಲು ಇರಾಕ್ ಅರಬ್ ಯಾಕೆ ಮೂರನೇ ಜಗತ್ತಿನ ದೇಶಗಳಲ್ಲೇ ಅತ್ಯಂತ ಹೆಚ್ಚಿನ ಜೀವನಮಟ್ಟ, ಆರೋಗ್ಯದ ಮಟ್ಟ ಹೊಂದಿದ್ದ ದೇಶ ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ಬೇರೆ ಹಲವು ದೇಶಗಳಲ್ಲೂ ಅಮೆರಿಕ ಇರಾಕಿ ಜನತೆಯನ್ನು ಕೊಲ್ಲುತ್ತಿದೆ. 1996 ರ ನಂತರ ದಿಗ್ಬಂಧನ ಸ್ವಲ್ಪ ಸಡಿಲಿಸಿದ್ದರ ಪ್ರಯೋಜನ ನಾಗರಿಕ ಪೂರೈಕೆ, ಆರ್ಥಿಕ ಪುನರ್ ನಿರ್ಮಾಣದಲ್ಲಿ ಆಗದಂತೆ ಅಮೆರಿಕ ಶತ ಪ್ರಯತ್ನ ಮಾಡುತ್ತಿದೆ. ವಿಶ್ವಸಂಸ್ಥೆಯ ನಿರ್ಣಯದಂತೆ ಇರಾಕ್ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ತನ್ನ ತೈಲದ ರಫ್ತಿನಿಂದ 32 ಶತಕೋಟಿ ಡಾಲರುಗಳ ಗಳಿಸಿದ್ದರಲ್ಲಿ ಕೇವಲ ಕಾಲು ಭಾಗ(ಅಂದರೆ 8 ಶತಕೋಟಿ ಡಾಲರು) ವನ್ನು ಮಾತ್ರ ಇರಾಕ್ ತನ್ನ ನಾಗರಿಕರ ಆಹಾರ, ಔಷಧಿ, ಇತರ ಆರ್ಥಿಕ ಪುನರ್ರಚನೆಯ ಅಗತ್ಯ ಸರಕುಗಳ ಆಮದು, ಉತ್ಪಾದನೆಗೆ ಬಳಸಲು ಸಾಧ್ಯವಾಗಿದೆ. ಇರಾಕ್ ಗಳಿಸಿದ 11 ಶತಕೋಟಿ ಡಾಲರುಗಳಷ್ಟು ಹಣ ಅಮೆರಿಕನ್ ಮತ್ತು ಇತರ ಪಾಶ್ಚಿಮಾತ್ಯ ದೇಶಗಳಲ್ಲಿ ಅದನ್ನು ಇರಾಕ್ ಸರ್ಕಾರಕ್ಕೆ ಬಿಡುಗಡೆ ಮಾಡಲಾಗದು ಎಂಬ ನೆಪದಲ್ಲಿ ಕಾನೂನು-ಬಾಹಿರವಾಗಿ ತಡೆಹಿಡಿಯಲಾಗಿದೆ. ಇನ್ನೊಂದು 10 ಶತಕೋಟಿ ಡಾಲರುಗಳು ಇರಾಕ್ ಮೇಲೆ ಯುದ್ಧ ಮತ್ತು ಅಪಾರ ಕಷ್ಟನಷ್ಟ ಹೊರಿಸಿದ ವಿಶ್ವಸಂಸ್ಥೆಯ ಯುದ್ಧಕೋರರಿಗೆ 'ದಂಡ'ವಂತೆ. ಇದಲ್ಲದೆ ಮಿಲಿಟರಿ ಮತ್ತು ನಾಗರಿಕ ಅಗತ್ಯಗಳ 'ಉಭಯ ಬಳಕೆ' ಸಾಧ್ಯತೆ ಇರುವ ಎಲ್ಲಾ ತಂತ್ರಜ್ಞಾನ, ಉಪಕರಣ, ಸರಕುಗಳ ಮೇಲೆ ನಿಷೇಧದ ಹೆಸರಲ್ಲಿ ವಿದ್ಯುತ್, ನೀರಿನ ಪಂಪ್‌ಗೆ, ಔಷಧಿಗಳಿಗೆ ಬೇಕಾದ ಅಗತ್ಯ ಸರಕು, ಉಪಕರಣಗಳನ್ನು ಬೇಕಂತಲೇ ತಡೆ ಹಿಡಿಯಲಾಗಿದೆ.

ಭುಗಿಲೇಳುತ್ತಿರುವ ಅರಬ್ ಕೋಪ


ಇರಾಕ್ ಮೇಲೆ ವಿಶ್ವಸಂಸ್ಥೆ ದಿಗ್ಬಂಧನ, ಅದರ ಪಾಲನೆಯಲ್ಲಿ ಅಮೇರಿಕದ ಅತಿರೇಕಗಳ ಒಟ್ಟು ಪರಿಣಾಮದ ಮೇಲಿನ ಚಿತ್ರಣ ಜಗಜ್ಜಾಹೀರಾಗಿದೆ. ಅದನ್ನು ಕಿತ್ತುಹಾಕಬೇಕು. ಕನಿಷ್ಟ ದೊಡ್ಡ ಪ್ರಮಾಣದಲ್ಲಿ ಸಡಿಲಿಸಬೇಕು ಎಂದು ಸ್ಪಷ್ಟ ಅಂತರ್ರಾಷ್ಟ್ರೀಯ ಒಮ್ಮತ ಮೂಡುತ್ತಿದೆ. ಕೊಲ್ಲಿಯುದ್ಧ ಮತ್ತು ಆ ನಂತರದ ವರ್ಷಗಳಲ್ಲಿ ಅಮೆರಿಕ ಕಟ್ಟಿದ್ದ 'ದುಷ್ಟಕೂಟ' ಯಾವಾಗಲೋ ಮುರಿದು ಬಿದ್ದಿದೆ. ಈ 'ದುಷ್ಟಕೂಟ' ದಲ್ಲಿದ್ದ ಅಮೆರಿಕದ ನಿಕಟ ಮಿತ್ರ ಫ್ರಾನ್ಸ್ ಈಗ ದಿಗ್ಬಂಧನವನ್ನು ಬಲವಾಗಿ ವಿರೋಧಿಸುತ್ತಿದೆ. ಇರಾಕ್ ಜತೆ ಯಾವುದೇ ಆರ್ಥಿಕ ವ್ಯವಹಾರ ಇಟ್ಟುಕೊಳ್ಳಬಾರದು ಎಂಬುದನ್ನು ಫ್ರಾನ್ಸ್ ಧಿಕ್ಕರಿಸಿದೆ. ಫ್ರಾನ್ಸ್‌ನ ವಿಮಾನಯಾನ ಇರಾಕಿಗೆ ಆರಂಭವಾಗಿದೆ. ಕಳೆದ ವರ್ಷ ಬಾಗ್ದಾದ್‌ನಲ್ಲಿ ನಡೆದ ವಾಣಿಜ್ಯ ಮೇಳದಲ್ಲಿ 45 ದೇಶಗಳಿಂದ (ಪಾಶ್ಚಿಮಾತ್ಯ ದೇಶಗಳು ಸೇರಿದಂತೆ) 1500 ಕಂಪನಿಗಳು ಭಾಗವಹಿಸಿದ್ದುವು ಎಂಬುದು ಇದಕ್ಕೆ ನೇರ ಪುರಾವೆ. ಇದಕ್ಕೆ ಇರಾಕ್ ಬಗ್ಗೆ ಮಾನವೀಯ ಅನುಕಂಪ ಮಾತ್ರವಲ್ಲ ಕಾರಣ. ಫ್ರಾನ್ಸ್, ರಶ್ಯಾ ಸೇರಿದಂತೆ ಇರಾಕ್ ಜತೆ ಘನಿಷ್ಟ ಆರ್ಥಿಕ ಸಂಬಂಧ ಇದ್ದ ಹಲವು ದೇಶಗಳಿಗೆ ದಿಗ್ಬಂಧನದಿಂದ ಭಾರಿ ಹಾನಿ ಉಂಟಾಗಿದೆ. ಹೀಗೆ ಅಮೆರಿಕದ ಅತಿರೇಕಗಳಿಂದಾಗಿ ದಿಗ್ಬಂಧನದಿಂದ ಭಾರಿ ಹಾನಿ ಉಂಟಾಗಿದೆ. ಹೀಗೆ ಅಮೇರಿಕದ ಅತಿರೇಕಗಳಿಂದಾಗಿ ದಿಗ್ಬಂಧನ ಕುಸಿಯಲು ಆರಂಭವಾಗಿದೆ. ಧಾಳಿಯ ಕೆಲವೇ ದಿನಗಳಲ್ಲಿ ಇರಾಕ್ ಮತ್ತು ವಿಶ್ವಸಂಸ್ಥೆ ನಡುವೆ ದಿಗ್ಬಂಧನ ಕೊನೆಗೊಳಿಸಲು ಪ್ರಮುಖ ಮಾತುಕತೆಗಳು ನಡೆಯಲಿದ್ದುವು. ಈ ಮಾತುಕತೆಗಳಲ್ಲಿ ದಿಗ್ಬಂಧನ ಕೊನೆಗೊಳಿಸಲು ಯಾವುದೇ ಅವಮಾನಕಾರಿ ಶರತ್ತುಗಳಿಗೆ ಒಪ್ಪುವುದಿಲ್ಲ ಎಂದು ಇರಾಕ್ ಸ್ಪಷ್ಟಪಡಿಸಿತ್ತು, ಇರಾಕ್ ಜನತೆಯ ನರಮೇಧಕ್ಕೆ ಕಾರಣವಾಗಿರುವ ಈ ದಿಗ್ಬಂಧನ ಕೊನೆಗೊಳಿಸಬೇಕು ಎಂದು ಭದ್ರತಾ ಸಮಿತಿಯ ಸದಸ್ಯ ದೇಶಗಳು ನಿರ್ಧರಿಸಿವೆ. ಈ ಮಾತುಕತೆಗೆ ಅಡ್ಡಗಾಲು ಹಾಕುವುದೇ ಅಮೇರಿಕದ ಬಾಂಬ್ ದಾಳಿಯ ಉದ್ದೇಶ.

ಇದಲ್ಲದೆ ಇದೇ ತಿಂಗಳು ಅರಬ್ ದೇಶಗಳು ನಡುವಣ ಸಮಸ್ಯೆಗಳನ್ನು ಬಗೆಹರಿಸುವ ಅಜೆಂಡಾ ಇರುವ ಅರಬ್ ಶೃಂಗಸಭೆಯನ್ನು ಜೋರ್ಡಾನಿನಲ್ಲಿ ಕರೆಯಲಾಗಿತ್ತು. ಅರಬ್ ದೇಶಗಳ ನಡುವಣ ಸಮಸ್ಯೆಗಳಲ್ಲಿ ಮಧ್ಯಪ್ರವೇಶ ಮಾಡಿ, ಹೊರಗಣ ಶಕ್ತಿಗಳು ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿವೆ ಎಂದು ಅರಬ್ ದೇಶಗಳಿಗೆ ಅರಿವಾಗ ತೊಡಗಿದೆ. ಇದಲ್ಲದೆ ಪ್ಯಾಲೆಸ್ಟೈನ್-ಇಸ್ರೇಲ್ ಶಾಂತಿ ಮಾತುಕತೆಗಳು ಮುರಿದು ಬಿದ್ದಿದ್ದು, ಇಸ್ರೇಲಿನ ಹೊಸ ಆಕ್ರಾಮಕ ಧೋರಣೆ, ಅದಕ್ಕೆ ಅಮೆರಿಕನ್ ಬೆಂಬಲ - ಇವೆಲ್ಲ ಅಮೆರಿಕ ವಿರೋಧಿ ಭಾವನೆಯನ್ನು ಅರಬ್ ದೇಶಗಳಲ್ಲಿ ಬಲಪಡಿಸಿವೆ. ಅಮೆರಿಕದ ಆಡಿಯಾಳಾಗಿರುವ ಅರಬ್ ಆಳುವ ವರ್ಗಗಳು, ಜನತೆಯ ಭುಗಿಲೇಳುತ್ತಿರುವ ಅಮೇರಿಕ-ವಿರೋಧಿ ಕೋಪ ನೋಡಿ ಅಮೆರಿಕ ತಾಳಕ್ಕೆ ಕುಣಿಯುವ ಸ್ಥಿತಿಯಲ್ಲಿಲ್ಲ. ಇವೆಲ್ಲದ್ದರಿಂದ ಹತಾಶವಾದ ಅಮೆರಿಕದ ಕ್ರಮ ಇರಾಕ್ ಮೇಲೆ ಹೊಸ ಬಾಂಬ್ ದಾಳಿ. ಇದನ್ನು ಭಾರತ ಸೇರಿದಂತೆ ಜಗತ್ತಿನ ಎಲ್ಲೆಡೆ ಶಾಂತಿ-ಪ್ರಿಯ, ಪ್ರಜಾಸತ್ತಾತ್ಮಕ ಶಕ್ತಿಗಳು ಬಲಪಡಿಸಬೇಕು. ಅಮೇರಿಕದ 'ಜೂನಿಯರ್ ಪಾರ್ಟನರ್' ಆಗಬಯಸುವ ವಾಜಪೇಯಿ ಸರ್ಕಾರ ಅದರ ಅಪಾಯವನ್ನು ಅರಿತುಕೊಳ್ಳಬೇಕು. ಹೊಸ ಸಾಮ್ರಾಜ್ಯಶಾಹಿ ತನಗೆ ಮನಬಂದಂತೆ ನಡೆಸುವುದು ಸಾಧ್ಯವಾಗುವುದಿಲ್ಲ ಎಂದು ಇರಾಕ್‌ನಲ್ಲಿ ತೋರಿಸಬೇಕು. ಈ 'ದಿಗ್ಬಂಧನ'ವನ್ನು ಶಸ್ತ್ರವಾಗಿ ಬಳಸುವ ಚಾಳಿ ಹರಡದಂತೆ ಅದನ್ನು ಮೊಳಕೆಯಲ್ಲಿ ಚಿವುಟಬೇಕು.

ತಾಲಿಬಾನ್‌ಗಳೇ ನೀವು ನಾಶ ಮಾಡಿದ್ದು ವಿಗ್ರಹಗಳಲ್ಲ ನಾಗರೀಕತೆ, ಸಂಸ್ಕೃತಿಯನ್ನು

ಅಫಘಾನಿಸ್ತಾನದ ತಾಲಿಬಾನ್ ಸರಕಾರರವೇ ಎಲ್ಲಾ ಪ್ರಾಚೀನ ವಿಗ್ರಹಗಳನ್ನೂ, ಸ್ಮಾರಕಗಳನ್ನು ನಾಶ ಮಾಡುವ ನಿಮ್ಮ ನಿರ್ಧಾರ ಅಮಾನವೀಯ ಬರ್ಬರತನದ ಪರಮಾವಧಿ. 180 ಅಡಿಯ ಜಗತ್ತಿನ ಅತಿ ಎತ್ತರದ ಬುದ್ಧ ಪ್ರತಿಮೆ ಸೇರಿದಂತೆ ಹಲವು ಪ್ರಾಚೀನ ಸ್ಮಾರಕಗಳನ್ನು ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಂದ ನಾಶ ಮಾಡಹೊರಟಿರುವುದು ಅತ್ಯಂತ ಹೇಯವಾದ ಕೃತ್ಯ.

ಅಫಘಾನಿಸ್ತಾನದಲ್ಲಿ ಇಸ್ಲಾಮ್ ಧರ್ಮ ಹಬ್ಬಿರುವುದು ಸಾವಿರಾರು ವರ್ಷಕ್ಕಿಂತಲೂ ಈಚಿನ ಸಂಗತಿ. ಆದರೆ ನಿಮ್ಮ ದೇಶಕ್ಕೆ ಹಲವು ಸಾವಿರ ವರ್ಷಗಳ ಚರಿತ್ರೆ ಇದೆ. ಹಲವು ಪ್ರಾಚೀನ ವ್ಯಾಪಾರೀ ಮಾರ್ಗಗಳು ಹಾದೂ ಹೋಗುವ ನಿಮ್ಮ ದೇಶ ಸ್ವಾಭಾವಿಕವಾಗಿಯೇ ಹಲವು ಸಂಸ್ಕೃತಿಗಳ, ನಾಗರಿಕತೆಗಳ ಮಿಲನವಾದ ಪ್ರದೇಶವಾಗಿತ್ತು. ಹಿಂದೂಕುಶ್ ಪರ್ವತ ಶ್ರೇಣಿಯ ತಳದಲ್ಲಿರುವ ಬಾಮಿಯಾನ್ ಕಣಿವೆ ಪ್ರಸಿದ್ಧ ಬೌದ್ಧ ಕೇಂದ್ರವಾಗಿತ್ತು.



ನಿಮ್ಮೀ ಬರ್ಬರ ಕೃತ್ಯ ಇಡೀ ಜಗತ್ತನ್ನು ದಂಗುಬಡಿಸಿದೆ. ಸಾರ್ವತ್ರಿಕ ನಿಂದೆಗೆ ಒಳಗಾಗಿದೆ. ಹಲವು ಇಸ್ಲಾಮಿಕ್ ದೇಶಗಳು, ಸಂಘಟನೆಗಳು ಈ ನಾಚಿಕೆಗೇಡಿನ ಕೃತ್ಯವನ್ನು ಸರಿಯಾಗಿಯೇ ಖಂಡಿಸಿವೆ. ಇಂತಹ ಬರ್ಬರ ಕೃತ್ಯಗಳಿಗೆ ಇಸ್ಲಾಮ್ ಧರ್ಮದಲ್ಲಿ ಯಾವುದೇ ಸ್ಥಾನವಿಲ್ಲ ಎಂದು ಅವು ಖಂಡತುಂಡವಾಗಿ ಹೇಳಿವೆ. ಇಂತಹ ಬರ್ಬರ ಕೃತ್ಯಗಳು ನಿಮ್ಮ ದೇಶ ಇಸ್ಲಾಮ್-ಪೂರ್ವ ಸಂಸ್ಕೃತಿಯನ್ನು ನಾಶ ಮಾಡವು. ಇದು ನಿಮ್ಮಂತಹ ಧಾರ್ಮಿಕ ಮೂಲಭೂತವಾದ ಯಾವ ರೀತಿಯ ಪಾತಾಳಕ್ಕೆ ಇಳಿಯಬಲ್ಲದು ಎಂದು ತೋರಿಸಿದೆಯಷ್ಟೆ.

ವಾಜಪೇಯಿ, ವಿಹೆಚ್‌ಪಿ, ಭಜರಂಗದಳ - ನಿಮಗೆ ಖಂಡಿಸಲು ನೈತಿಕ ಹಕ್ಕಿಲ್ಲ

ವಾಜಪೇಯಿಯವರೇ! ನಮ್ಮ ದೇಶದಲ್ಲಿ 'ಬಾಬ್ರಿ ಮಸೀದಿ' ಯಂತಹ ಧಾರ್ಮಿಕ, ಸಾಂಸ್ಕೃತಿಕ ಸ್ಮಾರಕವನ್ನು ನಾಶ ಮಾಡಿದ ಖಾವಿ ಪಡೆಗಳ ಬರ್ಬರ ಕೃತ್ಯವನ್ನು ಸರಿಯೆಂದ, ಅದು 'ರಾಷ್ಟ್ರೀಯ ಭಾವನೆ' ಯೆಂದ ನಿಮಗೆ ತಾಲಿಬಾನ್‌ಗಳ ಈ ಕೃತ್ಯವನ್ನು ಖಂಡಿಸುವ ಯಾವುದೇ ನೈತಿಕ ಹಕ್ಕೂ ಇಲ್ಲ. ಅಫಘಾನಿಸ್ತಾನದ ತಾಲಿಬಾನ್‌ಗಳು ಅವರದೇ ಆದ 'ರಾಷ್ಟ್ರೀಯ ಭಾವನೆ' ಕೆರಳಿತು ಎಂದು ಬಾಯಿ ಬಿಟ್ಟರೆ, ನಿಮಗೆ ಬಾಯಿ ತೆಗೆಯಲು ಆಗುವುದೇ?

ಬಾಬ್ರಿ ಮಸೀದಿಯನ್ನು ಕೆಡವಿದ 'ವಿಶ್ವಹಿಂದು ಪರಿಷತ್' 'ಭಜರಂಗದಳ'

ಬುದ್ಧ ವಿಗ್ರಹಗಳ ನಾಶ:ತಾಲಿಬಾನ್‌ಗಳ ಬರ್ಬರ ಕೃತ್ಯಗಳು

ಸೇರಿದ 'ಹಿಂದೂ ತಾಲಿಬಾನ್' ಖಾವಿ ಪಡೇಗಳೇ! ನಿಮಗೂ ಅಫಘಾನಿಸ್ತಾನದ ತಾಲಿಬಾನಗಳನ್ನು ಖಂಡಿಸುವ ನೈತಿಕ ಹಕ್ಕಿಲ್ಲ. ಆ ತಾಲಿಬಾನ್‌ಗಳ ಬರ್ಬರ ಕೃತ್ಯಗಳ ಬಗ್ಗೆ ಈ ತಾಲಿಬಾನ್‌ಗಳ ಚೀರಾಟ, ಹಾರಾಟ ಅತ್ಯಂತ ಹಾಸ್ಯಾಸ್ಪದ. ಇದು **ಒಂದು ಧರ್ಮದ(ಹಿಂದೂ) ಮೂಲಭೂತವಾದಿಗಳು ಇನ್ನೊಂದು (ಇಸ್ಲಾಮಿಕ್) ಮೂಲಭೂತವಾದಿಗಳು ಪರಸ್ಪರ ಪೂರಕವಾಗಿರುತ್ತಾರೆ ಎಂದು ಎತ್ತಿ ತೋರಿಸಿದೆ.**

ಮೊಸಳೆ ಕಣ್ಣೀರಿನ ಅಮೇರಿಕಾವೇ

ಈಗ ಬುದ್ಧನ ಪ್ರತಿಮೆಯ ಮೇಲೆ 'ಮೊಸಳೆ ಕಣ್ಣೀರು' ಸುರಿಸುವ ಅಮೆರಿಕದ ಆಳುವವರೇ! ನಿಮ್ಮ ಈ 'ಕಣ್ಣೀರು' ಮೊಸಳೆ ಕಣ್ಣೀರು ಎಂದು ಎಲ್ಲರಿಗೂ ಗೊತ್ತು. ನಿಮ್ಮ ಸಿಐಎ ಮತ್ತು ಸರ್ಕಾರವೇ ಈ ತಾಲಿಬಾನ್‌ಗಳ ಅಪ್ಪ-ಅಮ್ಮಂದಿರು. ಸೋವಿಯತ್ ಬೆಂಬಲಿತ ಅಫಘಾನಿಸ್ತಾನದ ಆಧುನಿಕ ಜಾತ್ಯಾತೀತ ಸರ್ಕಾರವನ್ನು ಉರುಳಿಸಲು ನೀವು ಹುಟ್ಟಿಸಿದ ಈ 'ತಾಲಿಬಾನ್' ಭೂತವೇ ಈಗ ಪೆಡಂಭೂತವಾಗಿದೆ. ನಿಮ್ಮ ಸಿಐಎ ಸಂಘಟನೆಯ ಅಧಿಕಾರಿ ಸೆಲಿಗೆ ಹ್ಯಾರಿಸನ್ 'ನೀವು ಮೂರು ಶತಕೋಟಿ ಡಾಲರ್‌ನಷ್ಟು ಖರ್ಚು ಮಾಡಿ ತಾಲಿಬಾನ್ ಬೆಳೆಸಿದ್ದೀರಿ' ಎಂದು ಪುರಾವೆ ಸಮೇತ ಹೇಳಿದ್ದಾರೆ. ಇದೇ ಹ್ಯಾರಿಸನ್ ನಮ್ಮ ದೇಶದ ಅಸ್ಸಾಂ ಮತ್ತು ಈಶಾನ್ಯ ರಾಜ್ಯಗಳಲ್ಲಿ ಇಂತಹುದೇ ಕುಕೃತ್ಯಗಳಿಗೆ ಯೋಜಿಸಿದ್ದೀರಿ ಎಂದು ಹೊರಗೆಡವಿದ್ದಾರೆ. **ನೀವು ಅಫಘಾನಿಸ್ತಾನದ ತಾಲಿಬಾನ್‌ಗಳು ಮಾತ್ರವಲ್ಲ, ಎಲ್ಲಾ ದೇಶದ ಧರ್ಮದ 'ತಾಲಿಬಾನ್' ಗಳಿಗೆ ಜೀವಕೊಟ್ಟ ಜನಕರು.**

ಪಾಕಿಸ್ತಾನದ ಆಳುವವರೇ! ನೀವು ಈ ಪೆಡಂಭೂತವನ್ನು ಸಾಕಿ ಬೆಳೆಸಿದವರೆ ಎಂದು ಇಡೀ ಜಗತ್ತಿಗೇ ಗೊತ್ತು. ನೀವು ಮತ್ತು ಅಮೆರಿಕ ಸೇರಿ ಈ ತಾಲಿಬಾನ್ ಪೆಡಂಭೂತವನ್ನು ಜಗತ್ತಿನ ಮೇಲೆ ಬಿಟ್ಟು, ಸಂಸ್ಕೃತಿ ನಾಶ ಮಾಡುವುದಕ್ಕೆ ನೀವೇ ಹೊಣೆಗಾರರು. ನೀವು ಬೆಳೆಸಿದ ಪೆಡಂಭೂತಗಳ ಬರ್ಬರ ಕೃತ್ಯ ಇಡೀ ಜಗತ್ತಿನ ಕಣ್ಣು ತೆರೆಸಿದೆ. ನಿಮ್ಮ ಆಟ ಇನ್ನು ಹೆಚ್ಚು ದಿನ ನಡೆಯದು ಎಚ್ಚರ.

○

ಕಥೆ

ಕೆಂಪು ಹೂವು

ಬಂದಗದ್ದೆ ರಾಧಾಕೃಷ್ಣ

ಕೆಂಪು ಹೂವು ಮತ್ತು ಸೂರ್ಯ ತುಂಬಾ ಸ್ನೇಹಿತರು. ಪ್ರತಿದಿನವೂ ಒಬ್ಬರಿಗೊಬ್ಬರು ತುಂಬಾ ಮಾತನಾಡಿಕೊಳ್ಳುವರು. ಒಂದು ದಿನ ಬೆಳಗಾದೊಡನೆ, ಸೂರ್ಯ ಕೆಂಪು ಹೂವಿಗೆ ಕೇಳಿದ 'ಹೂವೇ ನನ್ನ ತಂಗಿ ಇರುಳು ನಿನಗೆ ಸುಂದರ ಕನಸುಗಳ ತೋರಿದರೆ?" ಕೆಂಪುಹೂವು ಹೇಳಿತು "ಸೂರ್ಯ ನಿನ್ನ ತಂಗಿ ಒಳ್ಳೊಳ್ಳೆ ಕನಸುಗಳನ್ನು ತೋರಿದಳು" ಹೀಗೆ ಸೂರ್ಯ ಮತ್ತು ಕೆಂಪು ಹೂವು ಮಾತನಾಡುತ್ತಿದರು. ಮಾತನಾಡುತ್ತಲೇ ಕತ್ತಲಾಯಿತು. ಕತ್ತಲಲ್ಲಿ ಹುಳುವೊಂದು ಕೆಂಪು ಹೂವಿನ ಗಂಟಲಲ್ಲಿ ಇಳಿದು, ಕೊರೆಯತೊಡಗಿತು.

ಪ್ರತಿದಿನದಂತೆ ಸೂರ್ಯ ಉದಿಸಿದ. ತಾನು ಉದಿಸಿದಾಗ ನಕ್ಕು ನಲಿಯುತ್ತಿದ್ದ ಕೆಂಪು ಹೂವು ಇಂದು ನಗುತ್ತಿಲ್ಲ. ಬದಲಾಗಿ ನರಳುತ್ತಿದೆ. ಮಾತನಾಡುತ್ತಿಲ್ಲ. ಇದರಿಂದ ಸೂರ್ಯನಿಗೆ ತುಂಬಾ ಬೇಸರವಾಯಿತು. ಹೂವು ಮಾತನಾಡದಿರುವುದಕ್ಕೆ ಕಾರಣ ಕೇಳಿದಾಗ, ತನ್ನ ಗಂಟಲಲ್ಲಿ ಹುಳ ಹೊಕ್ಕು ಕೊರೆಯುತ್ತಿದೆ ಎಂದಿತು. ಬೇಸರಗೊಂಡ ಸೂರ್ಯ, ಮೋಡಗಳ ಡೇರೆಯಲ್ಲಿ ಮರೆಯಾದ. ಸೂರ್ಯನಿಗೆ ಬೇಸರವಾದಾಗ ಅವನ ಸುತ್ತಲೂ ಆಡುವುದು ಮೋಡಗಳಿಗೆ ಅಭ್ಯಾಸ.

ಬೆಳಗಾದರೂ ಸೂರ್ಯ ಪಳಪಳ ಹೊಳೆಯುವುದನ್ನು ಕಾಣದ ಗಾಳಿಗೆ ಬೇಸರವಾಯಿತು. 'ಸೂರ್ಯಣ್ಣಾ, ನೀನ್ಯಾಕೆ ಇವತ್ತು ಪಳಪಳ ಹೊಳೀತಾ ಇಲ್ಲ?" ಗಾಳಿ ಕೇಳಿತು. "ಕೆಂಪು ಹೂವಿಗೆ ಹುಷಾರಿಲ್ಲ. ಗಂಟಲಲ್ಲಿ ಹುಳುಹೊಕ್ಕು ಕೊರೀತಿದೆಯಂತೆ, ಅದಕ್ಕಾದ ನೋವಿನಿಂದ ನನಗೂ ಪಳಪಳ ಹೊಳೆಯಲು ಬೇರಸವಾಗುತ್ತಿದೆ" ಸೂರ್ಯ ಹೇಳಿದ.

"ಸೂರ್ಯ ಪಳಪಳ ಹೊಳಿಯಲ್ಲ, ಅಂದ್ಮೇಲೆ ನಾವು ಪರಪರ ಬೀಸಲ್ಲ" ಎಂದು ಗಾಳಿ ಮರದ ಮೇಲೆ ಕೂರುವುದು, ಗಾಳಿ ಬೀಸದೆ ಕೂತಿದ್ದರಿಂದ ಕೋಳಿಗೆ ಕೂಗಲಿಕ್ಕೇ ಆಗುತ್ತಿಲ್ಲ. ಉಸಿರು ಕಟ್ಟತೊಡಗಿತು. "ಗಾಳಿಯೇ ನೀನೇಕೆ ಬೀಸುತ್ತಿಲ್ಲ?" ಎಂದು ಕೇಳಿತು. ಆಗ ಗಾಳಿ, ಸೂರ್ಯ ಹೇಳಿದ ಕತೆ ಹೇಳಿ, ತಾನು ಬೀಸದೇ ಇರುವ ಕಾರಣ ತಿಳಿಸಿತು. "ಹಾಗಾದರೆ ನಾನು ಇವತ್ತು ಕೂಗೂದೇ ಇಲ್ಲ" ಅಂದ ಕೋಳಿ, ಕೊಳದ ಬಳಿ ಕೂತಿತು.

ಆ ಕೊಳದ ಬಳಿ ಬೆಕ್ಕೊಂದು ಬಂತು. "ಕೋಳಿರಾಯ, ನಿನ್ನ ಕಾಣದೆ ತುಂಬಾ ದಿನಗಳಾದವು, ಬಾ. ಚೆನ್ನಿದಾಂಡು ಆಡೋಣ" ಎಂದು ಕರೆಯಿತು. "ಇಲ್ಲ ಬೆಕ್ಕೇ, ಮುದ್ದಿನ ಸೊಕ್ಕೆ! ನನಗಿವತ್ತು ಆರಾಮಿಲ್ಲ. ಉಸಿರು ಕಟ್ತಾ ಇದೆ. ಗಂಟಲು ಸರಿ ಇಲ್ಲ. ಕೊಳದ ಬಳಿ ಹಾಯಾಗಿರ್ತೇನೆ. ನನ್ನ ಮಾತಾಡಿಸಬೇಡ. ಸುಮ್ನಿರು" ಕೋಳಿ ಹೇಳಿತು. "ನೀನೇಕೆ ಒಂದು ಬಾರಿ ಗಟ್ಟಿಯಾಗಿ ಕೂಗಬಾರದು? ಆಗ ನಿನ್ನ ಗಂಟಲು ಸರಿ ಆಗುತ್ತೆ" ಬೆಕ್ಕು ಸಲಹೆ ನೀಡಿತು. ಪುನಃ ಕೋಳಿ, ತನಗೆ ಗಾಳಿ ಹೇಳಿದಕತೆಯನ್ನು ಹೇಳಿ, ಕಾರಣ ವಿವರಿಸಿತು. "ಇವತ್ತು ಬೆಳಗಿಂದ ಯಾವುದೂ ಸರಿಹೋಗ್ತಾನೆ ಇಲ್ಲ. ಎಲ್ಲಾ ಸರಿ ಆಗೋವರೆಗೂ ನಾನು ನಿನ್ನ ಜೊತೆ ಇಲ್ಲೇ ಕೂರ್ತೇನೆ" ಎಂದು ಹೇಳಿ, ಈ ಕೋಳಿಯ ಪಕ್ಕ ಅಂಡೂರಿತು.

ಅಷ್ಟರಲ್ಲಿ ಯಾರೋ ಇವರನ್ನೇ ನೋಡಿ ಜೋರಾಗಿ ನಕ್ಕರು. ಬೆಕ್ಕು, ಕೋಳಿ ಎರಡಕ್ಕೂ ಆಶ್ಚರ್ಯ, ಕೋಪ. 'ನಾವಿಲ್ಲಿ ಮಂಕಾಗಿರುವಾಗ, ಮಬ್ಬಾಗಿರುವಾಗ ಯಾರಿಲ್ಲಿ ನಮ್ಮನ್ನೋಡಿ ನಗೋರ್?" ಎಂದು ಗದರಿದವು. 'ನಾನು ಕಪ್ಪೆರಾಯ' ಎನ್ನುತ್ತ ಕಪ್ಪೆ ಕೊಳದಿಂದ ಹೊರಬಂದಿತು. "ಸೂರ್ಯನ ಗೆಳತಿ ಕೆಂಪು ಹೂವಿಗೆ ಹುಷಾರಿಲ್ಲ. ಅದಕ್ಕೇ ಸೂರ್ಯ ಹೊಳೀಲಿಲ್ಲ. ಈ ಕಾರಣಕ್ಕೆ ಗಾಳೀನೂ ಬೀಸಲಿಲ್ಲ. ನಿನಗೆ ಗಂಟಲು ಕಟ್ಟೆ ಕೂಗಲೂ ಇಲ್ಲ ಅಲ್ವಾ?" ಕಪ್ಪೆ ಕೇಳುತ್ತಿದ್ದಂತೆ, "ಹೌದಪ್ಪಾ, ಅದಕ್ಕೆ ನಿಂದೇನು ಭಾಷಣ?" ಎಂದು ಕೋಳಿ ಕಪ್ಪೆ ಇಬ್ಬರೂ ಸೇರಿ ಹೀಯಾಳಿಸಿದವು. ಆಗ ಕಪ್ಪೆ "ಇದೆಲ್ಲಾ ಸರೀ ಆಗಬೇಕು ಅಂದ್ರೆ, ಹೀಗೆ ಕೂತುಕೊಂಡ್ರೆ ಆಗಲ್ಲ. ಹೂವಿನ ಗಂಟಲಲ್ಲಿ ಹೊಕ್ಕು ಕೊರಿತಾ ಇರೋ ಹುಳಾನ ನಮ್ಮ ಕೋಳಿರಾಯ ಕೊಕ್ಕು ಹಾಕಿ ತೆಗೀಬಹುದಲ್ಲ?" ಎಂದು ಸಲಹೆ ನೀಡಿತು. "ಒಳ್ಳೇ ಉಪಾಯ! ಇಷ್ಟು ಹೊತ್ತು ನಮಗ್ಯಾಕೆ ಹೊಳೀಲಿಲ್ಲ?" ಅಂದುಕೊಳ್ಳುತ್ತಾ, ಹೂವಿನ ಬಳಿ ಹೋಗಿ, ಅದರ ಗಂಟಲಲ್ಲಿ ಹೊಕ್ಕ ಹುಳೂನ, ಕೋಳಿ ತನ್ನ ಕೊಕ್ಕಿನಿಂದ ಹೊರತೆಗೆಯಿತು. ಈ ಚಿಕಿತ್ಸೆಯಿಂದ ಹೂವಿಗೆ ಆರಾಮವಾಯಿತು. ಮೊದಲಿನಂತೆ ನಕ್ಕಿತು. ನಗುವ ಹೂವು ಕಂಡು ಸೂರ್ಯ ಉಲ್ಲಾಸಗೊಂಡ. ಪಳಪಳ ಹೊಳೆಯತೊಡಗಿದ. ಸೂರ್ಯ ಹೊಳೆದದ್ದೇ ಮೋಡಗಳೆಲ್ಲಾ ಚದುರಿತು. ಗಾಳಿ ಪರಪರ ಬೀಸಿತು. ಕೋಳಿಕೂಗಿತು. ಎಲ್ಲಾ ಸರಿಯಾಯಿತು. ಆಗ ಎಲ್ಲರೂ ಸೇರಿ ಹಾಡುವರು:

ಎಲ್ಲೋ ಏನೋ ತಪ್ಪಾದಾ
ಕೂತು ಕೂಗೋದು
ಬಹಳಾ ಸುಲಭ, ಬಹಳ ಸುಲಭ
ಏಕೆ ತಪ್ಪು, ಏನು ತಪ್ಪು, ಎಲ್ಲಿ ತಪ್ಪು
ಹುಡುಕಿ ಕೆಲಸ ಮಾಡಿದರೆ
ಎಲ್ಲಾ ಸರಿಯಾಗುವುದು, ಎಲ್ಲಾ ಸರಿಯಾಗುವುದು.

(ಸಪ್ಧರ್ ಹಷ್ಮಿ ಅವರ 'ರೆಡ್ ಫ್ಲವರ್' ಮಕ್ಕಳ ನಾಟಕದ ಕತೆ)

ಕೃಪೆ: **'ಭಾವನಾ'** ಮಾಸ ಪತ್ರಿಕೆಯಿಂದ



ದೆಹಲಿಯ ಗುಡಿಸಲು ವಾಸಿಗಳನ್ನು ಕಿತ್ತೊಡಿಸುವುದನ್ನು ಪ್ರತಿಭಟಿಸಿ ನಡೆದ ರ್‍ಯಾಲಿಯಲ್ಲಿ ವಿ.ಪಿ.ಸಿಂಗ್, ಸುರ್ಜಿತ್, ಶಬಾನಾ ಆಜ್ಮಿ

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG(2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : S.Y.GURUSHANTH